ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮೇ 13, 2009 ರೂ. 12/-





ನಾನು ಗೆದ್ದ ಚುನಾವಣೆ



LTTE ರಕ್ತಸಿಕ್ತ ಇತಿಹಾಸ

ಅಡಗಿತೆ ಹುಲಿಯ ಘರ್ಜನೆ







ಸಂಚು ಒಳ ಸಂಚು!



ಜನರೇಕೆ ಓಟು ಹಾಕುತ್ತಿಲ್ಲ ಎಂದು ಕೇಳುವಿರಲ್ಲ...!

"ಚುನಾವಣೆಯ ಸಮಯದಂದು ನೀವು ಓಟು ಮಾಡದೆ ಮನೆಯಲ್ಲಿದ್ದರೆ ನೀವು ನಿದ್ದೆಯಿಂದ ಎದ್ದಿಲ್ಲ ಎಂದು ತಾನೆ ಅರ್ಥ?" ಹಿಪ್ಪಿ ಕಟಿಂಗ್, ಜೀನ್ಸ್ ಪ್ಯಾಂಟ್, ಇಂಗ್ಲಿಷ್ ಸ್ಪೀಕಿಂಗ್ ಹುಡುಗನೊಬ್ಬ ತನ್ನ ಜೊತೆಗಾರರನ್ನು ಹಂಗಿಸುವ ಈ ಟಿ.ವಿ. ಜಾಹಿರಾತನ್ನು ಭಾರತೀಯರು ನೋಡದೇ ಇರಲು ಸಾಧ್ಯವೇ ಇಲ್ಲ. ಈ ಚುನಾವಣೆ ಘೋಷಣೆಯಾದಾಗಲಿಂದಲೂ ಈ ಜಾಹೀರಾತು ಬರದ ದಿನವಿಲ್ಲ..ಅಲ್ಲ..ಗಂಟೆಯಿಲ್ಲ. ತೋರಿಸದ ಟಿವಿ ಚಾನೆಲ್‌ಗಳಿಲ್ಲ. ಅದೇ ರೀತಿ ಸಿನಿಮಾ ತಾರೆ ಅಮೀರ್ ಖಾನ್ ತನ್ನ ಸುತ್ತ ಮಕ್ಕಳನ್ನು ಕೂಡಿಸಿಕೊಂಡು "ಇವರ ಭವಿಷ್ಯಕ್ಕಾಗಿ ಓಟು ಹಾಕಿ" ಎಂದು ಗಂಟೆಗೊಮ್ಮೆ ಕೇಳುತ್ತಲೇ ಇದ್ದಾನೆ. ಹಾಗೆಯೇ "ಉತ್ತಮ ಸಮಾಜ"ಕ್ಕಾಗಿ ಎಂದು ಕ್ರೈಮ್ ಸ್ಟೋರಿಗಳನ್ನೇ ತೋರಿಸುತ್ತಿದ್ದ ಟಿವಿ 9, ಇನ್ನಿತ್ಯಾದಿ ಚಾನೆಲ್‌ಗಳು ಸಹ "ಸಾರ್ವಜನಿಕ ಹಿತ ದೃಷ್ಟಿಯಿಂದ" ಎಂಬ ಹೆಸರಿನಲ್ಲಿ "ಓಟು ಹಾಕುವುದು ಪರಮ ಕರ್ತವ್ಯ" ಎಂಬಂಥ ಜಾಹಿರಾತುಗಳನ್ನು ಪ್ರತಿ ಸುದ್ದಿಯ ನಂತರವೂ ಪ್ರದರ್ಶಿಸುತ್ತಿದ್ದಾವೆ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಸಹ "ಯಾರಿಗಾದರೂ ಓಟು ಹಾಕಿ, ಆದರೆ ದಯವಿಟ್ಟು ಮತ ಚಲಾಯಿಸಿ" ಎಂದು ಅಂಗಲಾಚಿ ಬೇಡಿಕೊಳ್ಳುತ್ತಿವೆ. ಈ ಪುಸಲಾವಣೆ ಯಾವ ಮಟ್ಟಕ್ಕೆ ಹೋಗಿದೆಯೆಂದರೆ ದೆಹಲಿಯಲ್ಲಿ ಜಗದೀಶ್ ಟೈಟ್ಲರ್‌ನ ಮಗ ಓಟು ಹಾಕಿ ಬಂದು ಬೆರಳ ಮೇಲಿನ ಶಾಯಿ ತೋರಿಸಿದರೆ ತನ್ನ ಬಟ್ಟೆ ಅಂಗಡಿಯಲ್ಲಿ ಶೇ.10ರಷ್ಟು ಡಿಸ್‌ಕೌಂಟ್ ಕೊಡುವುದಾಗಿ ಘೋಷಿಸಿದ್ದಾನೆ. ಈ ರಿಸೆಷನ್ ಟೈಮ್‌ನಲ್ಲಿ ಎಲ್ಲಾ ಮಾರಾಟಗಳು ಕುಸಿಯುತ್ತಿರುವಾಗ ಇದೊಂದು ರೀತಿಯಲ್ಲಿ ಟೂ-ಇನ್-ಒನ್ ಸ್ಕೀಮ್. ಒಳ್ಳೆ ವ್ಯಾಪಾರ, ಜೊತೆಗೆ ಪುಗಸಟ್ಟೆ ದೇಶಪ್ರೇಮ.

ಅದೇನೇ ಇರಲಿ, ಈ ರೀತಿ ಮತಗಟ್ಟೆಗೆ ಮತದಾರರನ್ನು ಪುಸಲಾಯಿಸುವ ಪ್ರಯತ್ನ ನಡೆಯುತ್ತಿರುವ ವೇಳೆಯಲ್ಲೇ ಮತದಾನ ಮಾಡದವರನ್ನು ಬೆದರಿಸುವ ಪ್ರಯತ್ನಗಳು ಸಹ ನಿರಂತರವಾಗಿ ನಡೆಯುತ್ತಿವೆ. ಮತದಾನವನ್ನು ಕಡ್ಡಾಯ ಮಾಡಬೇಕೆಂಬ ಮತ್ತು ಮತದಾನ ಮಾಡದವರಿಗೆ ರೇಷನ್ ಕಾರ್ಡು ಆದಿಯಾಗಿ ಎಲ್ಲಾ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳಬೇಕೆಂಬ ಆಗ್ರಹಗಳನ್ನೂ ರಾಜಕೀಯ ಪಕ್ಷಗಳ ಮುಖಂಡರು ಮಾಡುತ್ತಿದ್ದಾರೆ. ಸಾರಾಂಶದಲ್ಲಿ ಓಟು ಹಾಕದಿದ್ದರೆ ಆಳುವ ಜನ ನಾಗರಿಕತ್ವವನ್ನೇ ಕಿತ್ತುಕೊಳ್ಳುವ ಬೆದರಿಕೆಯನ್ನು ಹಾಕುತ್ತಿದ್ದಾರೆ.

ಒಂದೆಡೆ 2014ರ ಚುನಾವಣೆಯ ವೇಳೆಗೆ ನಕಾರಾತ್ಮಕ ಓಟಿನ ಸೌಲಭ್ಯವನ್ನು ಮತದಾನ ಯಂತ್ರದಲ್ಲಿ ಅಳವಡಿಸುವುದಾಗಿ ಚುನಾವಣಾ ಆಯೋಗ ಹೇಳುತ್ತಿದೆ. ಅಷ್ಟು ಮಾತ್ರವಲ್ಲ, ಒಂದು ಕ್ಷೇತ್ರದಲ್ಲಿ ಶೇ.50ಕ್ಕಿಂತ ಹೆಚ್ಚು ನಕಾರಾತ್ಮಕ ಓಟಿಂಗ್ ನಡೆದರೆ ಅಲ್ಲಿ ಮರು ಚುನಾವಣೆ ನಡೆಸುವ ಅವಕಾಶವೂ ಆ ಚುನಾವಣೆ ವೇಳೆಗೆ ಲಭ್ಯವಾಗಬಹುದೆಂದು ಕೇಂದ್ರ ಚುನಾವಣಾ ಆಯೋಗ ಭರವಸೆ ನೀಡಿದೆ. ಅಂದರೆ ಎಲ್ಲಾ ಅಭ್ಯರ್ಥಿಗಳನ್ನು ನಾಲಾಯಕ್ಕೆಂದು ನಿರಾಕರಿಸುವ ಹಕ್ಕನ್ನು ಕಾನೂನಾತ್ಮಕವಾಗಿಯೇ ಒದಗಿಸುವ ಪ್ರಸ್ತಾಪ ಇರುವ ಹೊತ್ತಿನಲ್ಲೇ ಅಂತಹ ಹಕ್ಕು ಚಲಾಯಿಸದವರನ್ನು ಬಲಿ ಹಾಕುವ ಬೆದರಿಕೆಗಳನ್ನೂ ಹಾಕಲಾಗುತ್ತಿದೆ. ಎಷ್ಟೇ ಆದರೂ ನಮ್ಮದು ಏಕಕಾಲದಲ್ಲಿ ರಾಜಕೀಯ ಪ್ರಜಾತಂತ್ರ ಮತ್ತು ಸಾಮಾಜಿಕ ಸರ್ವಾಧಿಕಾರ ಸಹಬಾಳ್ವೆ ಮಾಡುತ್ತಿರುವ ಸಮಾಜವಲ್ಲವೇ? ಚುನಾವಣೆಯಲ್ಲೂ ಅದೇ ಪ್ರತಿಫಲನಗೊಳ್ಳುತ್ತಿದೆ.

ಆಳುವ ಜನಕ್ಕೆ ಓಟು ಕಡಿಮೆಯಾಗುತ್ತಿರುವ ಬಗ್ಗೆ ಏಕಿಷ್ಟು ಆತಂಕ? ಕಳೆದ ಮೂರು ಹಂತಗಳ ಸರಾಸರಿ ಮತದಾನ ಶೇ.55ನ್ನು ದಾಟಿಲ್ಲ. ಕೆಲವು ಕಡೆ ಮತದಾನ ಪ್ರಮಾಣ ಶೇ.80ನ್ನು ತಲುಪಿರುವುದು ನಿಜವಾದರೂ ಕೆಲವು ಕಡೆ ಅದು ಶೇ.40ರ ಗಡಿ ದಾಟಿಲ್ಲ. ಬಹುಪಾಲು ಕ್ಷೇತ್ರಗಳಲ್ಲಿ ಮತದಾನದ ಪ್ರಮಾಣ ಶೇ.45-55ರ ಆಸುಪಾಸಿನಲ್ಲಿದೆ. ಇದು 2004ರ ಮತದಾನದ ಪ್ರಮಾಣಕ್ಕೆ ಹೋಲಿಸಿಕೊಂಡರೂ ಕಡಿಮೆ. ಈ ಬಾರಿ 10 ಕೋಟಿಗೂ ಹೆಚ್ಚು ಯುವ ಮತದಾರರು ಓಟಿನ ಹಕ್ಕನ್ನು ಪಡೆದುಕೊಂಡಿದ್ದರು. ವಾಸ್ತವವಾಗಿ ಎಲ್ಲಾ ರಾಜಕೀಯ ಪಕ್ಷಗಳು ಈ ಯುವ ಮತದಾರರನ್ನು ಸೆಳೆಯಲು ವಿಶೇಷ ಕಾರ್ಯಕ್ರಮಗಳನ್ನೂ ಹಾಕಿಕೊಂಡಿದ್ದವು. ಲೇಖನದ ಪ್ರಾರಂಭದಲ್ಲಿ ಪ್ರಸ್ತಾಪಿಸಲಾದ 'ಜಾಗೋರೇ' ಜಾಹಿರಾತುಗಳು ಈ ವರ್ಗವನ್ನೇ ಗುರಿಯಾಗಿರಿಸಿಕೊಂಡಿತ್ತು. ಆದರೂ ಓಟಿನ ತಕ್ಕಡಿ - ಈ ದೇಶದ ಪ್ರಜಾತಂತ್ರದ ಮೌಲ್ಯಮಾಪನದ ತಕ್ಕಡಿ - ಮೇಲೇರುತ್ತಿಲ್ಲ.

ಹಾಗೆ ನೋಡಿದರೆ ಈ ದೇಶದಲ್ಲಿ ನಡೆದ 15 ಲೋಕಸಭಾ ಚುನಾವಣೆಗಳಲ್ಲಿ 1967, 1977, 1985 ಮತ್ತು 1998ರಲ್ಲಿ ಬಿಟ್ಟರೆ ಮತದಾನದ ಪ್ರಮಾಣ ಎಂದಿಗೂ ಶೇ.60ರ ಗಡಿ ದಾಟಿಲ್ಲ. ಈ ಚುನಾವಣೆಗಳಲ್ಲೂ ಶೇ.60ಕ್ಕಿಂತ ಹೆಚ್ಚಿನ ಮತದಾನವಾಗಲು ಕಾರಣ ಒಂದೋ ಅತೀವ ಹತಾಶೆ, ಬೇಸರ, ಆಕ್ರೋಶ ಅಥವಾ ಅತೀವ ಅನುಕಂಪ. ಈವರೆಗೆ ಅತಿ ಹೆಚ್ಚು ಮತದಾನವಾಗಿರುವುದು 1985ರಲ್ಲಿ -ಶೇ.64ರಷ್ಟು. ಆ ಚುನಾವಣೆ ಇಂದಿರಾ ಗಾಂಧಿಯವರ ಹತ್ಯೆಯ ನಂತರ ನಡೆದದ್ದರಿಂದ ಅತೀವ ಅನುಕಂಪದಿಂದ ಆ ಪ್ರಮಾಣದ ಮತದಾನವಾಗಿತ್ತು. ಇದನ್ನು ಬಿಟ್ಟರೆ ಈ ದೇಶದ ಚುನಾವಣೆಯ ಬಗ್ಗೆ ದೇಶದ ಮತದಾರರ ಪ್ರಧಾನ ಧೋರಣೆ ನಿರಾಸಕ್ತಿಯೇ. ಇದನ್ನು ಕೆಲವರು ಬೇಜವಾಬ್ದಾರಿತನವೆಂದೂ, ಮಧ್ಯಮ ವರ್ಗದ ರಾಜಕೀಯ ಸಿನಿಕತನವೆಂದೂ ಜರೆಯಬಹುದು.

ಆದರೆ ಭಾರತದ ಆಳುವ ವರ್ಗದ ಆತಂಕಕ್ಕೆ ಕಾರಣ ಮಧ್ಯಮ ವರ್ಗ ಮತ್ತು ಮೇಲ್ ಮಧ್ಯಮ ವರ್ಗ ಮತದಾನ ಮಾಡದಿರುವುದಲ್ಲ. ಅನಿಲ್ ಅಂಬಾನಿ, ಶಾರುಖ್ ಖಾನ್‌ರಂತಹ ಈ ದೇಶದ ಶ್ರೀಮಂತರು ಮತ್ತು ಮೇಲ್‌ಮಧ್ಯಮ ವರ್ಗವೇ ಹೆಚ್ಚಿರುವ ಮುಂಬೈ ದಕ್ಷಿಣ ಕ್ಷೇತ್ರದಲ್ಲಿ ಯಾವತ್ತಿಗೂ ಮತದಾನದ ಪ್ರಮಾಣ ಶೇ.40ನ್ನು ದಾಟಿಲ್ಲ. ಆದರೂ ಯಾವುದೇ ಸರ್ಕಾರವನ್ನು ಈ ದೇಶದ ಜನ ಗೆಲ್ಲಿಸಿ ಕಳಿಸಿದರೂ ಅದರ ನಿಜವಾದ ಸೂತ್ರಧಾರಿಗಳಾಗುತ್ತಿದ್ದವರು ಇವರೇ. ಬಿರ್ಲಾನ ಓಟಿಗೂ ಒಂದೇ ಬೆಲೆ, ಬೋರೇಗೌಡನ ಓಟಿಗೂ ಒಂದೇ ಬೆಲೆ-ಎಂಬುದು ಪ್ರಜಾತಂತ್ರದ ಮೂಲ ನಿಯಮವೇ ಆಗಿದ್ದರೂ, ಓಟು ಹಾಕದಿದ್ದರೂ ಸರ್ಕಾರ ನಡೆಸುತ್ತಿರುವುದು ಬಿರ್ಲಾಗಳೇ. ಬೋರೇಗೌಡರು ಎಷ್ಟೇ ಓಟು ಹಾಕಿದರೂ ಸರ್ಕಾರ ಮಾತ್ರ ಅವರದ್ದಲ್ಲ. ಹೀಗಾಗಿ ಈ ಜನ ಓಟು ಹಾಕಿದರೂ ಹಾಕದಿದ್ದರೂ ಆಳುವ ಜನಕ್ಕೆ ಮತ್ತು ಅವರನ್ನು ಹಿಂದಿನಿಂದ ನಿಯಂತ್ರಿಸುವ ಅಂಬಾನಿ-ಬಿರ್ಲಾನಂತಹ ಈ ಪ್ರಜಾತಂತ್ರದ ಅಸಲಿ ವಾರಸುದಾರರಿಗೆ ಚಿಂತೆ ಇರಲಿಲ್ಲ. ಏಕೆಂದರೆ ಜನರೇ ಆಯ್ಕೆ ಮಾಡುತ್ತಾರೆಂಬ ಚುನಾವಣಾ ಪ್ರಜಾತಂತ್ರದ ಮುಸುಕು ಈ ಅಸಲಿ ನಿಯಂತ್ರಕರನ್ನು ಬಯಲು ಮಾಡುತ್ತಿರಲಿಲ್ಲ. ಹೀಗೆ ಸಾಮಾನ್ಯ ಜನ ಹೆಚ್ಚೆಚ್ಚು ಓಟು ಮಾಡುತ್ತಿದ್ದಷ್ಟೂ ಈ ಮುಖವಾಡ ಬಯಲಿಗೆ ಬರುತ್ತಿರಲಿಲ್ಲ.



ಚಾರ್ವಾಕ

▸ ಶಿವಸುಂದರ್

ಯಾವಾಗ ಸಾಮಾನ್ಯ ಜನ ಸಹ ಓಟು ಹಾಕಲು ನಿರಾಸಕ್ತಿ ತೋರಲು ಪ್ರಾರಂಭಿಸಿದರೋ ಆಗ ಈ ಮುಖವಾಡ ಕಿತ್ತುಹೋಗಬಹುದೆಂಬ ಭಯ ಆಳುವ ಜನರನ್ನು ಆವರಿಸಿದೆ. ಆದ್ದರಿಂದಲೇ ಸಮರೋಪಾದಿಯಲ್ಲಿ 'ಜಾಗೋರೇ' ತರಹದ ಆಂದೋಲನವನ್ನು ಪ್ರಾರಂಭಿಸಿವೆ. ಕುತೂಹಲದ ಸಂಗತಿಯೆಂದರೆ ಈ ಪ್ರಚಾರಾಂದೋಲನಕ್ಕೆ ಹಣಕಾಸು ಸಹಾಯ ಮಾಡುತ್ತಿರುವುದು ಈ ದೇಶದ ಅತ್ಯಂತ ದೊಡ್ಡ ಶ್ರೀಮಂತ ಕಂಪನಿಯಾದ ಟಾಟಾ. ಆದ್ದರಿಂದಲೇ ಈ 'ಓಟು ಹಾಕಿ ಆಂದೋಲನ'ಗಳು ಓಟು ಹಾಕಿ ಎನ್ನುತ್ತವೆ, ಯೋಗ್ಯರಿಗೆ ಓಟು ಹಾಕಿ ಅನ್ನುತ್ತವೆ, ಆದರೆ ಈ ಯೋಗ್ಯತೆಯ ಮಾನದಂಡಗಳನ್ನು ಪಟ್ಟಿ ಮಾಡುವುದಿಲ್ಲ. ಉದಾಹರಣೆಗೆ ಸಾಮಾನ್ಯ ಜನರ ನೆಮ್ಮದಿಯ ಬದುಕಿಗೆ ಕಂಟಕವಾದ ಕೋಮುವಾದ, ಎಸ್‌ಇಜೆಡ್, ಇನ್ನಿತ್ಯಾದಿ ನೀತಿಗಳನ್ನು, ರೈತರ ಮತ್ತು ಸ್ಲಂ ಜನರ ಎತ್ತಂಗಡಿ ನೀತಿಗಳನ್ನು ಅನುಸರಿಸುವವರಿಗೆ ಓಟು ಹಾಕಬೇಡಿ ಎಂದು ಈ ಆಂದೋಲನಗಳು ಹೇಳುವುದಿಲ್ಲ. ಕಾರಣ ಸ್ಪಷ್ಟ. ಅಂಥ ಯೋಜನೆಗಳನ್ನು ಎಲ್ಲಾ ಪಕ್ಷಗಳು ಜಾರಿಗೆ ತರುತ್ತಿವೆ. ಮತ್ತು ಅಂಥ ಎಲ್ಲಾ ಯೋಜನೆಗಳ ಫಲಾನುಭವಿಗಳಾದ ಟಾಟಾ, ಬಿರ್ಲಾ, ಅಂಬಾನಿಯಂಥ ಕಂಪನಿಗಳೇ ಈ ಎಲ್ಲಾ ಪಕ್ಷಗಳ ಹಿಂದಿರುತ್ತವೆ. ಹೀಗಾಗಿ ಸಾಮಾನ್ಯ ಜನರಿಗೆ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಆಯ್ಕೆಯೇ ಈ ಚುನಾವಣಾ ಪ್ರಜಾತಂತ್ರದಲ್ಲಿಲ್ಲ. ವಾಸ್ತವಾಗಿ ಲೆನಿನ್ ಹೇಳಿದಂತೆ ಈ ಪ್ರಜಾತಂತ್ರಗಳಲ್ಲಿ ಸಾಮಾನ್ಯ ಜನರಿಗೆ ಇರುವುದು ಐದು ವರ್ಷಕ್ಕೊಮ್ಮೆ ಯಾವ ಶೋಷಕ ತಮ್ಮನ್ನು ಆಳಬೇಕು ಎಂದು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಷ್ಟೆ! ಭಾರತದ ಸಂದರ್ಭದಲ್ಲಿ ತ್ರಿಶೂಲದಿಂದ ಅಥವಾ ಬಂದೂಕಿನಿಂದ ಕೊಲ್ಲಲ್ಪಡುವ ಸ್ವಾತಂತ್ರ್ಯವನ್ನಷ್ಟೆ ಈ ಚುನಾವಣಾ ಪ್ರಜಾತಂತ್ರ ದಯಪಾಲಿಸುತ್ತದೆ. ಯಾವಾಗ ಜನ ಈ ಆತ್ಮಹತ್ಯಾಕಾರಿ ಆಯ್ಕೆಗಳನ್ನು ತಿರಸ್ಕರಿಸುತ್ತಿದ್ದಾರೋ ಅಥವಾ ಪರ್ಯಾಯಗಳನ್ನು ಹುಡುಕುತಿದ್ದಾರೋ ಆಗ ಆಳುವ ಜನ ಗಾಬರಿಯಾಗುತ್ತಿದ್ದಾರೆ. ಓಟು ಹಾಕದ ಜನರನ್ನೇ ತಪ್ಪಿತಸ್ಥರೆಂಬಂತೆ ಕಾಣುತ್ತಿದೆ.

ಆದ್ದರಿಂದಲೇ ಜನರೇಕೆ ಓಟು ಹಾಕುತ್ತಿಲ್ಲ ಎಂದು ಜನರಲ್ಲೇ ತಪ್ಪು ಹುಡುಕುವ ರೀತಿ ಪ್ರಶ್ನೆಯನ್ನು ಕೇಳುತ್ತಿದೆ. ಕೇಳಬೇಕಿರುವ ಪ್ರಶ್ನೆ ಜನರೇಕೆ ಓಟು ಹಾಕುತ್ತಿಲ್ಲ ಎಂಬುದಲ್ಲ- ಜನರೇಕೆ ಓಟು ಹಾಕಬೇಕು ಎಂಬುದು. ಈ ಪ್ರಶ್ನೆಗೆ ಆಳುವವರ ಹತ್ತಿರ ಒಂದು ಉತ್ತರವೂ ಇರುವುದಿಲ್ಲ. ಆದ್ದರಿಂದಲೇ ಜನರು ಓಟು ಹಾಕುತ್ತಿಲ್ಲ. ■

No Comments

"ಗುಜರಾತ್ ಹತ್ಯಾಕಾಂಡದಲ್ಲಿ ಮುಖ್ಯಮಂತ್ರಿ ಮೋದಿಯನ್ನೂ ಒಳಗೊಂಡಂತೆ ಒಬ್ಬ ಸಚಿವೆ, ಮೂವರು ಶಾಸಕರು, ಮೂವರು ವಿಎಚ್‌ಪಿ ಕಾರ್ಯಕರ್ತರು ಹಾಗೂ ಅನೇಕ ಐಎಎಸ್, ಐಪಿಎಸ್ ಅಧಿಕಾರಿಗಳು ಸೇರಿದಂತೆ ಒಟ್ಟು 63 ಜನರ ಮೇಲೆ ತನಿಖೆ ನಡೆಸುವಂತೆ ಸುಪ್ರೀಮ್‌ಕೋರ್ಟು ಆದೇಶಿಸಿದೆ."

ಪತ್ರಿಕಾ ವರದಿ

"ಕರುಣಾನಿಧಿಯವರು ತಮ್ಮ ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹವನ್ನು ಆರುಗಂಟೆಗಳ ನಂತರ ನಿಲ್ಲಿಸಿದರು."

ವರದಿ

"ಅಕ್ಷಯ ತೃತೀಯ ದಿನದಂದು ಚಿನ್ನದ ಮಾರಾಟದ ಮೇಲೆ ಆರ್ಥಿಕ ಹಿಂಜರಿತದ ಯಾವುದೇ ಪರಿಣಾಮ ಬೀಳಲಿಲ್ಲ."

ವರದಿ

"ಪಾಶ್ಚಿಮಾತ್ಯ ಮಾಧ್ಯಮಗಳು ಬೇಕೆಂದು 'ಸ್ಲಂ ಡಾಗ್' ಚಿತ್ರದ ಬಾಲ ನಟಿಯ ತಂದೆಗೆ ಹಣದ ಆಮಿಷ ತೋರಿಸಿ ತಮಗೊಂದು ಸ್ಕೂಪ್ ಸ್ಟೋರಿ ಮಾಡಿಕೊಂಡದ್ದು ಬಡ ಸ್ಲಂ ನಿವಾಸಿಗಳ ಬಡತನದ ದುರ್ಬಳಕೆಯೇ ಹೊರತು ಮತ್ತೇನಲ್ಲ!"

ಔಟ್‌ಲುಕ್

"ಎಲ್‌ಟಿಟಿಇಯ ಮುಖ್ಯಸ್ಥ ಪ್ರಭಾಕರನ್ ಸತ್ತರೂ, ಜೀವಂತವಾಗಿ ಸೆರೆ ಸಿಕ್ಕರೂ ಈಳಂ ಎಂಬ ಪರಿಕಲ್ಪನೆ ಜೀವಂತವಾಗಿರುವವರೆಗೂ ಜೀವಂತವಾಗುಳಿಯುತ್ತಾನೆ."

ಅಶೋಕ್ ಮೆಹ್ತ ಮಾಜಿ ಭಾರತೀಯ ಜನರಲ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಬರಾಕ್ ಒಬಾಮಾರವರು ಅಧಿಕಾರಕ್ಕೆ ಬಂದಮೇಲೆ ಬಂದೂಕು ವ್ಯಾಪಾರ ಭರಾಟೆಯಿಂದ ನಡೆದಿದೆ."

ಬಿಬಿಸಿ


"ಗೆದ್ದರೂ, ಸೋತರೂ ನಾನು ರಾಜಕೀಯದಿಂದ ನಿವೃತ್ತನಾಗುವುದಿಲ್ಲ, ರಾಜಕೀಯದಿಂದ ನಿವೃತ್ತನಾಗುವಷ್ಟು ವಯಸ್ಸು ನನಾಗಾಗಿಲ್ಲ."

ಬಂಗಾರಪ್ಪ

"ಶ್ರೀರಾಮುಲು ಅವರಲ್ಲಿ ನಿಯತ್ತು ಮತ್ತು ಬಡವರ ಪರವಾದ ಕಾಳಜಿ ಇದೆ. ರೆಡ್ಡಿ ಕುಟುಂಬ ಅವರಿಗೋಸ್ಕರ ರಾಜಕೀಯದಲ್ಲಿದೆಯೇ ಹೊರತು ಬೇರೆ ಯಾವ ಸಾಧನೆಗೂ ಅಲ್ಲ."

ಜನಾರ್ದನ ರೆಡ್ಡಿ

ಅಮಾಸೆಯ ಅಮಾಯಕತನ!



"ಕೆಲವರು ಹಣದಿಂದ ಮತದಾರರನ್ನು ಖರೀದಿಸಿ ರಾಜಕಾರಣ ಮಾಡಬಹುದೆಂದುಕೊಂಡಿದ್ದಾರೆ. ಆದರೆ ಅದು ಸಾಧ್ಯವಿಲ್ಲ."

ದೇವನೂರು ಮಹಾದೇವ

ಲ್ಯಾಟೀನ್ ಅಮೆರಿಕ, ಭಾರತಕ್ಕೂ ಲಾಟೀನು ತೋರಲಿ

"ಲ್ಯಾಟೀನ್ ಅಮೆರಿಕದ ಈಕ್ವೆಡಾರ್‌ನಲ್ಲಿ ಎಡಪಂಥೀಯ ಅಭ್ಯರ್ಥಿ ರಫೆಲ್ ಕೊರೆಯ ಪ್ರಚಂಡ ಬಹುಮತ ಪಡೆದು ಅಧಿಕಾರಕ್ಕೆ ಮರಳಿದ್ದಾರೆ. ಇದರಿಂದ ಲ್ಯಾಟಿನ್ ಅಮೆರಿಕದಲ್ಲಿ ಎಡಪಂಥೀಯತೆ ಮತ್ತಷ್ಟು ಗಟ್ಟಿಯಾಗಿದೆ."

ವರದಿ

ಅಧಿಕಾರದಲ್ಲಿದ್ದಾಗ ಬಿಜೆಪಿ ಹೇಳಿದ್ದು ಇದೇನೆ!

"ಇಂದು ಮಸೀದಿ-ಮಂದಿರಗಳೆರಡರ ಬೆಂಬಲಿಗರೂ ಬಿಎಸ್‌ಪಿಯಲ್ಲಿರುವುದರಿಂದ ಕೇಂದ್ರದಲ್ಲಿ ಬಿಎಸ್‌ಪಿ ಅಧಿಕಾರಕ್ಕೆ ಬಂದರೆ ಎರಡೂ ಸಮುದಾಯಗಳ ಜೊತೆ ಮಾತುಕತೆ ನಡೆಸಿ ಉತ್ತಮ ಪರಿಹಾರ ಕಲ್ಪಿಸಲಿದೆ."

ಮಾರಸಂದ್ರ ಮುನಿಯಪ್ಪ, ಬಿಎಸ್‌ಪಿ ರಾಜ್ಯಾಧ್ಯಕ್ಷ

ಬಂಧನಗಳು ನಿಜವಾಗಿರುವಾಗ ಹೋರಾಟಗಳು ಸಾಂಕೇತಿಕವಾಗಬಾರದು!

"ಬಿನಾಯಕ್ ಸೇನ್‌ರ ಮೇಲೆ ಹೊರಿಸಲಾಗಿರುವ ಪ್ರಕರಣದಲ್ಲಿ ಈವರೆಗೆ ಯಾವ ಸಾಕ್ಷಿಯೂ ಪೊಲೀಸರ ಆರೋಪಗಳನ್ನು ಸಮರ್ಥಿಸಿಲ್ಲ. ಆದರೂ ಬಿನಾಯಕ್ ಸೇನರನ್ನು ಈವರೆಗೆ ಬಿಡುಗಡೆ ಮಾಡಿಲ್ಲ. ಇದೇ ಮಾರ್ಚ್ 16ರಂದು ದೇಶದೆಲ್ಲೆಡೆಯಿಂದ ಬಂದ ಐವತ್ತು ಕಾರ್ಯಕರ್ತರು ಜೈಲಿನೆದುರು ಪ್ರತಿಭಟನೆ ಮಾಡಿದೆವು. ಅಲ್ಲಿಂದಾಚೆಗೆ ಪ್ರತಿ ಸೋಮವಾರ ಅಲ್ಲಿ ಪ್ರತಿಭಟನೆ ನಡೆಯುತ್ತಿದೆ. ನಾವಿನ್ನೇನು ತಾನೆ ಮಾಡಲು ಸಾಧ್ಯ? ಇನ್ನೆಷ್ಟು ಗಟ್ಟಿಯಾಗಿ ಅರಚಿಕೊಳ್ಳಲು ಸಾಧ್ಯ?"


ಆನಂದ್ ಪಟವರ್ಧನ್, ಖ್ಯಾತ ಚಿತ್ರ ನಿರ್ಮಾಪಕ

ಚಿಂತಕರ ಚಾವಡಿ

"ನಾವು ಮುಸ್ಲಿಮರಾಗಿದ್ದರೂ ಭಾರತ ಅನುಸರಿಸಬೇಕಿರುವುದು ಸಂವಿಧಾನವನ್ನೇ ಹೊರತು ಕುರಾನನ್ನಲ್ಲ!"

"ಇಂಡಿಯಾ ಒಂದು ಇಸ್ಲಾಮಿಕ್ ದೇಶವಲ್ಲ, ಇದೊಂದು ಜಾತ್ಯತೀತ ಪ್ರಜಾತಂತ್ರವಾದಿ ದೇಶ. ಆದ್ದರಿಂದ ಈ ದೇಶದ ರಾಜಕಾರಣವನ್ನು ಇಸ್ಲಾಮಿಕ್ ದೃಷ್ಟಿಕೋನದಿಂದ ನೋಡುವುದೇ ತಪ್ಪು, ಮತ್ತು ಈ ದೇಶದ ನಾಯಕರು ಮತ್ತು ಪಕ್ಷಗಳನ್ನು ಕುರಾನ್ ಮತ್ತು ಹದೀತ್ ನಿಯಮಗಳಿಗನುಸಾರ ಪರೀಕ್ಷೆಗೊಳಪಡಿಸುವುದೇ ತಪ್ಪು, ಇದರಿಂದಾಗಿ ಇನ್ನಷ್ಟು ಘರ್ಷಣೆಗಳು ಮತ್ತು ಗೊಂದಲಗಳಷ್ಟೆ ಸೃಷ್ಟಿಯಾಗುತ್ತದೆ. ಓಟನ್ನು ಮುಸ್ಲಿಮರು ಸರಿಯಾಗಿ ಬಳಸಿಕೊಳ್ಳಬೇಕು. ಯಾರು ಈ ದೇಶಕ್ಕೆ ಮತ್ತು ಮುಸ್ಲಿಮರಿಗೆ ಒಳ್ಳೆಯದನ್ನು ಮಾಡುತ್ತಾರೋ ಅವರಿಗೆ ಓಟು ಹಾಕಬೇಕು."

-ದಾರುಲ್ ಉಲೂಂ ದೇವ್‌ಬಂದ್, ಮುಸ್ಲಿಂ ಉಲೇಮಗಳ ಸಮಿತಿ ಕೊಟ್ಟಿರುವ ಸ್ಪಷ್ಟೀಕರಣ



ಅಧ್ವಾನಿ ಅದೆಷ್ಟು 'ಸಮರ್ಥ' ನಾಯಕ?



ಕಂಡಹಾಗೆ

ಗೌರಿ ಲಂಕೇಶ್


ಇವತ್ತಿಗೆ ಕರ್ನಾಟಕದಲ್ಲಿ ಎರಡನೆ ಹಂತದ ಮತದಾನ ನಡೆದು ಚುನಾವಣಾ ಗದ್ದಲಕ್ಕೆ ತೆರೆಬಿದ್ದಿದೆ. ಆದರೆ ದೇಶದ ಇತರೆಡೆ ಇನ್ನೂ ಎರಡು ಹಂತಗಳಲ್ಲಿ ಮತದಾನ ನಡೆಯಬೇಕಿದ್ದು ಫಲಿತಾಂಶಕ್ಕಾಗಿ ಇನ್ನೂ 18 ದಿನಗಳ ಕಾಲ ಕಾಯಬೇಕಿದೆ.

ಈ ಮಧ್ಯೆ ಎಲ್.ಕೆ. ಅಧ್ವಾನಿ ಮುಂದಿನ ಪ್ರಧಾನಿ ಮಾತ್ರವಲ್ಲ, ಆತನ ನಂತರದ ಸರದಿ ನರೇಂದ್ರ ಮೋದಿ ಯದ್ದು ಎಂದು ಬಜೆಪಿಗಳು ಆರ್ಭಟಿಸುತ್ತಿವೆ. ಎಲ್ಲಾ ಸಮೀಕ್ಷೆಗಳು ತಲೆಕೆಳಗಾಗಿ, ಅಧ್ವಾನಿಯವರೇ ದೇಶದ ಮುಂದಿನ ಪ್ರಧಾನಿಯಾಗಲಿದ್ದಾರೆ ಎಂದೇ ಸದ್ಯಕ್ಕೆ ಇಟ್ಟು ಕೊಳ್ಳೋಣ. ಆದರೆ ಆತ ಎಂತಹ ಪ್ರಧಾನಿ ಆಗಿರುತ್ತಾರೆ? ಈ ಪ್ರಶ್ನೆಗೆ ಆಕಾರ್ ಪಟೇಲ್ ಎಂಬುವವರು ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ಒಂದು ಲೇಖನ ಬರೆದಿದ್ದಾರೆ. ಅದರಲ್ಲಿ ಹಲವು ಸ್ವಾರಸ್ಯಕರ ಸಂಗತಿಗಳಿವೆ.

ಈಗ ಪಾಕಿಸ್ತಾನದಲ್ಲಿರುವ ಕರಾಚಿಯ ಸಾಹುಕಾರರ ಕುಟುಂಬದಲ್ಲಿ 1927 ರಲ್ಲಿ ಜನಿಸಿದ ಅಧ್ವಾನಿ ತಮ್ಮ ಆತ್ಮಕಥನ 'ನನ್ನ ದೇಶ, ನನ್ನ ಜೀವನ'ದಲ್ಲಿ "ನನಗೆ ನೆನಪಿರುವಂತೆ ಮೆಟ್ರಿಕ್ಯೂಲೇಷನ್‌ವರೆಗೆ ನನ್ನ ತರಗತಿಯಲ್ಲಿ ನಾನೇ ಮೊದಲನೆ ರ್‍ಯಾಂಕ್ ಪಡೆಯುತ್ತಿದ್ದೆ" ಎಂದು ಹೇಳಿಕೊಂಡಿದ್ದಾರೆ. ಆದರೆ ವಿಚಿತ್ರವೇನೆಂದರೆ ಮೆಟ್ರಿಕ್ಯೂಲೇಷನ್‌ವರೆಗೂ ಇಷ್ಟು 'ಪ್ರತಿಭಾವಂತ'ನಾಗಿದ್ದ ಅಧ್ವಾನಿ ನಂತರ ಸಿಂಧ್ ಪ್ರಾಂತ್ಯದ ಡಿ.ಜಿ. ನ್ಯಾಷನಲ್ ಕಾಲೇಜು ನಿಂದ ಡಿಗ್ರಿ ಪಡೆಯಲು ಬರೋಬ್ಬರಿ ಐದು ವರ್ಷ ತೆಗೆದುಕೊಳ್ಳುತ್ತಾರೆ. ಅಷ್ಟೇ ಅಲ್ಲ, ಲೋಕಸಭೆಗೆ ಆತ ಸಲ್ಲಿಸಿರುವ ಅರ್ಹತಾ ಪತ್ರದಲ್ಲಿ ತಾನು ಮುಂಬೈ ವಿಶ್ವವಿದ್ಯಾಲಯದಿಂದ ಎಲ್‌ಎಲ್‌ಬಿ ಪಡೆದಿರುವೆ ಎಂದು ನಮೂದಿಸಿದ್ದಾರೆ. ಆದರೆ ಅದನ್ನು ಯಾವ ಇಸವಿಯಲ್ಲಿ ಪಡೆದಿದ್ದು ಎಂದು ಹೇಳಿಲ್ಲ. ಅಷ್ಟೇ ಅಲ್ಲ, ಮುಂಬೈ ವಿಶ್ವವಿದ್ಯಾಲಯದಲ್ಲಿ ಓದಿರುವ ಖ್ಯಾತರ ಪಟ್ಟಿಯಲ್ಲಿ (ವಿಕಿಪೀಡಿಯಾ) ಅಧ್ವಾನಿ ಹೆಸರೇ ಇಲ್ಲ! ಇದಕ್ಕಿಂತಲೂ ಮುಖ್ಯವಾದ ಅಂಶ ಯಾವುದೆಂದರೆ ತಮ್ಮ 986 ಪುಟಗಳಷ್ಟು ವಿಸ್ತಾರವಾದ ಆತ್ಮಕಥನದಲ್ಲಿ ಅಧ್ವಾನಿ ಎಲ್ಲೂ ತಾನು ಮುಂಬೈ ವಿಶ್ವವಿದ್ಯಾಲಯದಲ್ಲಿ ಓದಿದೆನೆಂದಾಗಲಿ, ಅಲ್ಲಿಂದ ಎಲ್‌ಎಲ್‌ಬಿ ಡಿಗ್ರಿ ಪಡೆದೆನೆಂದಾಗಲಿ ಹೇಳಿಲ್ಲ. ಹಾಗಾದರೆ ಏನರ್ಥ? ಅವರು ಲೋಕಸಭೆಗೆ ಸಲ್ಲಿಸಿದ ಅರ್ಹತಾಪತ್ರದಲ್ಲಿ ಸುಳ್ಳು ಹೇಳಿದ್ದಾರೆ ಎಂದೇ? ಹಾಗಿದ್ದರೆ ಅಂತಹ ಸುಳ್ಳು ಹೇಳುವ ಮನುಷ್ಯ ಅದೆಂತಹ ಪ್ರಧಾನಿ ಆಗಬಹುದು?

ದೇಶದ ವಿಭಜನೆಯ ನಂತರ ಆರೆಸೆಸ್ ಸೇರಿದ ಅಧ್ವಾನಿ ಕೆಲವರ್ಷಗಳ ಕಾಲ ರಾಜಸ್ಥಾನದ ಹಳ್ಳಿಗಳಲ್ಲಿ RSS ಪ್ರಚಾರಕನಾಗಿ ಕಾರ್ಯನಿರ್ವಹಿಸಿದರು. ಆ ಅವಧಿಯಲ್ಲಿ ಅವರೇ ಒಪ್ಪಿಕೊಂಡಿರುವಂತೆ ಅವರಲ್ಲಿ ಅತಿಹೆಚ್ಚು ಭಯ ಮೂಡಿಸಿದ್ದು tape worm (ಲಾಡಿ ಹುಳ). ಅದಕ್ಕೆ ಕಾರಣ ಆ ಹುಳಗಳು ಜನರ ಕಾಲುಗಳಲ್ಲಿ ತೂತು ಕೊರೆದು ಹೊರಗೆ ಬರುತ್ತಿರುವುದನ್ನು ಅವರು ಖುದ್ದಾಗಿ ಕಂಡಿದ್ದು. ಇದರ ಬಗ್ಗೆ ತಮ್ಮ ಆತ್ಮಕಥನದಲ್ಲಿ ಅಷ್ಟು ಸುದೀರ್ಘವಾಗಿ ಮತ್ತು ವಿವರವಾಗಿ ಬರೆದಿರುವ ಅಧ್ವಾನಿಯವರು ಕಿಂಚಿತ್ತೂ ಸಂಶೋಧನೆ ಮಾಡಿದಂತಿಲ್ಲ. ಹಾಗೆ ಅವರು ಸಂಶೋಧನೆ ಮಾಡಿದ್ದೇ ಆದರೆ ಅದು ಲಾಡಿ ಹುಳವಲ್ಲ, ಬದಲಾಗಿ guinea worm (ಗಿನಿಹುಳು) ಎಂಬ ಕನಿಷ್ಠ ಅರಿವು ಆತನಲ್ಲಿ ಮೂಡುತ್ತಿತ್ತು. ತಮ್ಮಲ್ಲಿ ಅಷ್ಟು ಭಯ ಹುಟ್ಟಿಸಿದ್ದ ಸಾಮಾನ್ಯ ಹುಳುವೊಂದರ ಬಗ್ಗೆಯೂ ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸದ ಈ ಮನುಷ್ಯ ಅದೆಂತಹ ಪ್ರಧಾನಿ ಆಗಬಲ್ಲರು?

ಅಧ್ವಾನಿ ಅವರು ಏಳು ವರ್ಷಗಳ ಕಾಲ RSS ನ ಮುಖವಾಣಿಯಾದ 'ಆರ್ಗನೈಸರ್' ಪತ್ರಿಕೆಯಲ್ಲಿ ಪತ್ರಕರ್ತರಾಗಿ ದುಡಿದಿದ್ದರು. ಆದರೆ ಅವರೆಂದೂ ಸಾಮಾಜಿಕ-ಆರ್ಥಿಕ-ರಾಜಕೀಯ ವಿಷಯಗಳ ಬಗ್ಗೆ ಬರೆಯುತ್ತಿರಲಿಲ್ಲ, ಬದಲಾಗಿ ಆ ಪತ್ರಿಕೆಗೆ ಆತ ಸಿನಿಮಾ ವಿಮರ್ಶಕರಾಗಿದ್ದರು! ಅವರು ಬರೆದಿದ್ದ ವಿಮರ್ಶೆಗಳನ್ನು ಅಧ್ಯಯನ ಮಾಡಿರುವ ಆಕಾರ್ ಪಟೇಲ್ ಅವರು "ಆತ ಎಂತಹ ಸೋಂಭೇರಿ ಬರಹಗಾರನಾಗಿದ್ದನೆಂದರೆ ಬರೀ ಕ್ಲೀಷೆ, ಗುಣವಾಚಕ, ಉತ್ಪ್ರೇಕ್ಷೆ ಮತ್ತು ಹಳಸಿದ ಪದಗುಚ್ಛಗಳನ್ನೇ ಉಪಯೋಗಿಸುತ್ತಿದ್ದರು" ಎನ್ನುತ್ತಾರೆ. ಇಂತಹ ಉಡಾಫೆ ಮನೋಭಾವದ ಪತ್ರಕರ್ತ ಅಧ್ವಾನಿ ತುರ್ತು ಪರಿಸ್ಥಿತಿಯನ್ನು 'ಭಾರತದ ಇತಿಹಾಸದಲ್ಲೇ ಒಂದು ಕಪ್ಪು ಅಧ್ಯಾಯ' ಎಂದು ಬಣ್ಣಿಸುತ್ತಾರೆ. ಆದರೆ ಅವರ ಆತ್ಮಕಥನದಲ್ಲಿ ಮೂರು ಕಡೆ (ಪುಟ 259, 266 ಮತ್ತು 270) ತುರ್ತುಪರಿಸ್ಥಿತಿ ಯಾವಾಗ ಹೇರಲಾಗಿತ್ತು ಎಂಬುದನ್ನೂ ತಪ್ಪುತಪ್ಪಾಗಿ ದಾಖಲಿಸಿದ್ದಾರೆ! ಇಂತಹ ಅಸಡ್ಡೆ ಬರಹದಿಂದಾಗಿಯೇ ಆಕಾರ್ ಪಟೇಲ್ ಅವರು "ಅಧ್ವಾನಿ ಓರ್ವ ಮಧ್ಯಮ ದರ್ಜೆಯ ಪತ್ರಕರ್ತ ಆಗಿದ್ದರು" ಎನ್ನುತ್ತಾರೆ. ಇಂತಹ ಮನುಷ್ಯ ಪ್ರಧಾನಿಯಾದರೆ ಈ ದೇಶದ ಗತಿ ಏನು?



ಸ್ವಲ್ಪ ಅವಧಿಗೆ ದೆಹಲಿ ಮುನಿಸಿಪಲ್ ಕೌನ್ಸಿಲ್‌ನಲ್ಲಿ ಕಾರ್ಪೋರೇಟರ್ ಆಗಿದ್ದ ಅಧ್ವಾನಿ ತಮ್ಮ RSS ನಂಟಿನಿಂದಾಗಿಯೇ ರಾಜ್ಯ ಸಭೆಯ ಸದಸ್ಯತ್ವ ಪಡೆದರು. ತುರ್ತುಪರಿಸ್ಥಿತಿ ನಂತರ ಅಧಿಕಾರಕ್ಕೆ ಬಂದ ಮೊರಾರ್ಜಿ ದೇಸಾಯಿ ಸರ್ಕಾರದಲ್ಲಿ ತನ್ನ ಜೀವನದಲ್ಲೇ ಪ್ರಥಮ ಬಾರಿಗೆ ಅಧಿಕಾರದ ಸ್ಥಾನಗಿಟ್ಟಿಸಿದ ಅಧ್ವಾನಿಗೆ ಅಷ್ಟೊತ್ತಿಗಾಗಲೇ 50 ವರ್ಷ ವಯಸ್ಸಾಗಿತ್ತು. ಆತ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರಾಗಿದ್ದೂ ಕೇವಲ ಎರಡು ವರ್ಷಗಳ ಕಾಲ ಮಾತ್ರ.

ಎಂಭತ್ತರ ದಶಕದಲ್ಲಿ ಅಧ್ವಾನಿಗೆ ಅಯೋಧ್ಯೆ ಎಂಬ ಅಸ್ತ್ರ ಸಿಕ್ಕಿತು. ದೇಶದಾದ್ಯಂತ ಆತ ರಥಯಾತ್ರೆ ಮಾಡಿದ ಪರಿಣಾಮವಾಗಿ ಆತ ಹೋದಲೆಲ್ಲ ಕೋಮುಗಲಭೆಗಳು ಸ್ಫೋಟಗೊಂಡವು. ಇದನ್ನು ಕಂಡು ಮಾಧ್ಯಮಗಳು "ಇದು ರಥಯಾತ್ರೆ ಅಲ್ಲ, ಬದಲಾಗಿ ರಕ್ತದ ಯಾತ್ರೆ" ಎಂದು ಟೀಕಿಸಿದಾಗ ಅಧ್ವಾನಿ "ಇಲ್ಲ, ಇದಕ್ಕೆ ನಾನು ಕಾರಣನಲ್ಲ, ರಥಯಾತ್ರೆ ನಡೆದ ಸ್ಥಳಗಳಲ್ಲಿ ಗಲಭೆಗಳೇ ನಡೆದಿಲ್ಲ" ಎಂದು ವಾದಿಸಿದ್ದರು. ವಾಸ್ತವವಾಗಿ ಆತನ ಈ ರಥ/ರಕ್ತ ಯಾತ್ರೆಯಿಂದಾಗಿ 600 ಅಮಾಯಕ ಭಾರತೀಯರ ಕೊಲೆಯಾಗಿತ್ತು.

1992 ರ ಡಿಸೆಂಬರ್ ಆರರಂದು ಬಾಬ್ರಿ ಮಸೀದಿಯ ನಾಶದೊಂದಿಗೆ ಈತನ ರಥಯಾತ್ರೆ ಕೂಡ ಅಂತ್ಯಗೊಂಡಿತು. ಆಗ "ಇದೊಂದು ದುರಂತ", "ನನ್ನ ಜೀವನದಲ್ಲೇ ಇದು ಅತ್ಯಂತ ದುಃಖದ ದಿನ" ಎಂದು ಅಧ್ವಾನಿ ಸುಳ್ಳು ಹೇಳಿದರು. ಬಾಬ್ರಿ ಮಸೀದಿಯನ್ನು ಕೆಡವಲೆಂದೇ ಸಾವಿರಾರು ಜನರ ಗುಂಪನ್ನು ಅಯೋಧ್ಯೆಗೆ ಕರೆದುಕೊಂಡು ಹೋಗಿದ್ದ ಅಧ್ವಾನಿ ಅಂತಹ ಸುಳ್ಳನ್ನು ಹೇಳುವುದಕ್ಕೆ ಕಾರಣವೂ ಇತ್ತು. ಅದೇನೆಂದರೆ ಆ ಮಸೀದಿ ಧ್ವಂಸಗೊಂಡದ್ದರಿಂದ ಅಧ್ವಾನಿಯ ರಥಯಾತ್ರೆಯೇ ಅಪ್ರಸ್ತುತಗೊಂಡಿತ್ತು. ಅಧ್ವಾನಿಯ ದುಃಖಕ್ಕೆ ಇದು ಕಾರಣವಾಗಿತ್ತೇ ಹೊರತು ಮಸೀದಿಯ ಧ್ವಂಸವಲ್ಲ. ಮಸೀದಿಯ ಧ್ವಂಸದ ನಂತರ ದೇಶಾದ್ಯಂತ ಕೋಮುಗಲಭೆಗಳು ನಡೆದು ಮೂರು ಸಾವಿರಕ್ಕೂ ಹೆಚ್ಚು ಅಮಾಯಕರನ್ನು ಕೊಲ್ಲಲಾಯಿತು. ಆಗಲೂ ಅಧ್ವಾನಿಗೆ ಒಂದು ಸರಳ ಸತ್ಯ ಅರ್ಥವಾಗಲಿಲ್ಲ. ಅದೇನೆಂದರೆ ಆತನ ರಥಯಾತ್ರೆಯ ಅಸಲಿ ಉದ್ದೇಶ ರಾಮಮಂದಿರವನ್ನು ಕಟ್ಟುವುದಾಗಿರಲಿಲ್ಲ; ಬದಲಾಗಿ ಮಸೀದಿಯನ್ನು ಧ್ವಂಸ ಮಾಡುವುದೇ ಆಗಿತ್ತು. ಹೀಗೆ ಕಟ್ಟುವ ಬದಲು ಧ್ವಂಸ ಮಾಡುವ ಪ್ರವೃತ್ತಿಯ ಮನುಷ್ಯ ಅದು ಹೇಗೆ ದೇಶವನ್ನು ಕಟ್ಟಿಯಾನು?

ಅಧ್ವಾನಿಗೆ ಎರಡನೇ ಬಾರಿ ಅಧಿಕಾರ ಸಿಕ್ಕಿದ್ದು ಆತನಿಗೆ 71 ವರ್ಷ ವಯಸ್ಸಾಗಿದ್ದಾಗ. ಆಗಿನ ವಾಜಪೇಯಿ ಸರ್ಕಾರದಲ್ಲಿ ಅಧ್ವಾನಿ ಗೃಹಮಂತ್ರಿ. ಹೋಗಲಿ, ಆಗಲಾದರೂ ಈತ ತನ್ನ 'ಗಟ್ಟಿ'ತನವನ್ನು ಮೆರೆದಿದ್ದನೇ ಎಂದು ನೋಡಿದರೆ ನಿರಾಶೆಯಾಗುತ್ತದೆ. 1998 ರಿಂದ 2004 ರ ತನಕ ಆರು ವರ್ಷಗಳ ಕಾಲ ಅಧ್ವಾನಿ ಗೃಹಮಂತ್ರಿಯಾಗಿದ್ದಾಗ ಈ ದೇಶದಲ್ಲಿ ಮೂರು ಪ್ರಮುಖ ಘಟನೆಗಳು ನಡೆದವು. ಆ ಮೂರು ಪ್ರಕರಣಗಳಲ್ಲಿ ಅಧ್ವಾನಿ ತಾನು 'ಗಟ್ಟಿ' ಮನುಷ್ಯನಲ್ಲ ಬದಲಾಗಿ 'ಟೊಳ್ಳು' ಮನುಷ್ಯ ಎಂಬುದನ್ನು ಇಡೀ ದೇಶಕ್ಕೆ ಸಾಬಿತು ಪಡಿಸಿದರು.

ಇಂಡಿಯನ್ ಏರ್‌ಲೈನ್ಸ್ ವಿಮಾನವೊಂದು ಅಪಹರಣಕ್ಕೊಳಗಾಗಿ ಭಾರತದ ನಗರವಾದ ಅಮೃತ್‌ಸರ್‌ನಲ್ಲಿ ಇಳಿದಾಗ ಅದನ್ನು ತಡೆದು ನಿಲ್ಲಿಸಲು ಅಧ್ವಾನಿಯಿಂದ ಸಾಧ್ಯವಾಗಲಿಲ್ಲ. ಅಷ್ಟೇ ಅಲ್ಲ, ಆ ವಿಮಾನ ಅಫಘಾನಿಸ್ತಾನದ ಕಂದಹಾರ್‌ಗೆ ಹಾರಿ ಹೋಗಲು ಅಧ್ವಾನಿ ಬಿಟ್ಟಿದ್ದಲ್ಲದೆ ಜೇಶ್-ಇ-ಮೊಹಮ್ಮದ್ ಎಂಬ ಭಯೋತ್ಪಾದಕ ಸಂಘಟನೆಯ ಬೆದರಿಕೆಗೆ ತತ್ತರಿಸಿ ಮಸೂದ್ ಅಜರ್ ಎಂಬ ಕುಖ್ಯಾತ ಭಯೋತ್ಪಾದಕನನ್ನು ಬಿಡುಗಡೆಗೊಳಿಸಿದರು. ಆ ಮಸೂದ್ ಅಜರ್ ಇವತ್ತಿಗೂ ಭಾರತದ ಮೇಲೆ ದಾಳಿಗಳನ್ನು ನಡೆಸುತ್ತಿದ್ದಾನೆ. ಇದು ಅಧ್ವಾನಿಯ 'ಗಟ್ಟಿ' ನಾಯಕತ್ವಕ್ಕೆ ಒಂದು ಉದಾಹರಣೆಯಷ್ಟೆ.

ಎರಡನೇ ಪ್ರಕರಣ ಕಾರ್ಗಿಲ್ ಯುದ್ಧ. ಅಧ್ವಾನಿ ಗೃಹಮಂತ್ರಿಯಾಗಿದ್ದರೂ ಅವರ ಇಲಾಖೆಯ ಅಡಿ ಬರುವ ಗುಪ್ತದಳಕ್ಕೆ ಪಾಕಿಸ್ತಾನದ ಸೈನಿಕರು ಕಾರ್ಗಿಲ್ ತನಕ ಬಂದಿದ್ದರ ಬಗ್ಗೆ ಗೊತ್ತೇ ಇರಲಿಲ್ಲ. ಅಧ್ವಾನಿಯವರ ಈ 'ಕಾರ್ಯದಕ್ಷತೆ'ಗೆ ನೂರಾರು ಭಾರತೀಯ ಸೈನಿಕರು ತಮ್ಮ ಪ್ರಾಣವನ್ನೇ ಬಲಿಕೊಟ್ಟರು. ಇನ್ನು ಈತ ಪ್ರಧಾನಿಯಾದರೆ ದೇಶವನ್ನು ಕಾಪಾಡುವವರ್‍ಯಾರು?

ಮೂರನೇ ಪ್ರಕರಣ ಗೋಧ್ರಾ ದುರಂತದ ನಂತರ ಗುಜರಾತಿನಲ್ಲಿ ನಡೆದ ಅಲ್ಪಸಂಖ್ಯಾತರ ಮಾರಣ ಹೋಮ. ನರಹಂತಕ ನರೇಂದ್ರ ಮೋದಿಯ ಆದೇಶದಂತೆ ಗುಜರಾತಿನಲ್ಲಿ ಒಂದು ತಿಂಗಳ ಕಾಲ ಗಲಭೆಗಳು ನಡೆದರೂ, ಆ ಗಲಭೆಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಅಮಾಯಕರು ಬಲಿಯಾದರೂ, ಹಿಂದೂ ಧರ್ಮದ ಹೆಸರಿನಲ್ಲಿ ಮಹಿಳೆಯ ಮೇಲೆ ಅತ್ಯಾಚಾರದಂತಹ ಕೃತ್ಯಗಳು ನಡೆದರೂ 'ದಕ್ಷ' ಅಧ್ವಾನಿ ತನ್ನ ಕಣ್ಣು, ಕಿವಿ ಮತ್ತು ಬಾಯನ್ನು ಮುಚ್ಚಿಕೊಂಡು ಕೂತಿದ್ದರು. ಇಂತಹ ಮನುಷ್ಯ ಪ್ರಧಾನಿಯಾದರೆ ಈ ದೇಶದಲ್ಲಿ ಮಾನವೀಯತೆ ಉಳಿದಿರುತ್ತದೆಯೇ?

ಇನ್ನು ಅಧ್ವಾನಿಯ ಆತ್ಮಕತೆಗೆ ಹಿಂದಿರುಗುವುದಾದರೆ ಅದರಲ್ಲಿ 48 ಅಧ್ಯಾಯಗಳಿದ್ದರೂ ಒಂದೇ ಒಂದು ಕೂಡ ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಕುರಿತದ್ದಾಗಿಲ್ಲ, ಬದಲಾಗಿ ಅದರ ತುಂಬ ಮುಸಲ್ಮಾನರು, ಕಾಶ್ಮೀರ, ಭಯೋತ್ಪಾದನೆ, ಪಾಕಿಸ್ತಾನ, ಮುಷರಫ್, ಕಾರ್ಗಿಲ್, ಶಾಬಾನು, ನಕ್ಸಲರು, ಗೋಧ್ರಾ, ಅಸ್ಸಾಂ, ಅಯೋಧ್ಯ ಇಂತಹವುಗಳ ಬಗ್ಗೆಯೇ ಅವರ ಚಿಂತನಾ ಲಹರಿ ಹರಿದಿದೆ. ಅಂದರೆ ಅಧ್ವಾನಿಯ ಕಾಳಜಿ ಇರುವುದು ಬೇರೆಯವರು ಏನು ಮಾಡಬೇಕು ಅಥವಾ ಮಾಡಬಾರದು ಎಂಬುದನ್ನೇ ಕುರಿತದ್ದಾಗಿದೆಯೇ ಹೊರತು ತಾನು ಏನನ್ನು ಮಾಡಬೇಕು, ಏನನ್ನು ಮಾಡಬಾರದು ಎಂಬುದರ ಬಗ್ಗೆ ಆತನಿಗೆ ಕನಿಷ್ಠ ಕಾಳಜಿಯಾಗಲಿ, ಕಲ್ಪನೆಯಾಗಲಿ, ದೂರದೃಷ್ಟಿಯಾಗಲಿ ಕಿಂಚಿತ್ತೂ ಇಲ್ಲ. ಈತ ಪ್ರಧಾನಿಯಾದರೆ ದೇಶ ಉದ್ಧಾರವಾಗುವುದಾದರೂ ಹೇಗೆ?

ಹೋಗಲಿ ಹಿಂದೂಗಳಿಗಾದರೂ ಅಧ್ವಾನಿ ಕ್ರಿಯಾತ್ಮಕ ಯೋಜನೆಗಳನ್ನು ಹೊಂದಿದ್ದಾರೆಯೇ? ಇಲ್ಲ, ಬದಲಾಗಿ ಹಿಂದೂಗಳಲ್ಲಿ ಅಸಮಾಧಾನವನ್ನು ಹೆಚ್ಚಿಸುವ ಕುತಂತ್ರಗಳು ಮಾತ್ರ ಆತನಲ್ಲಿ ಹೇರಳವಾಗಿದೆ. ಇಂತಹ ವ್ಯಕ್ತಿಯಿಂದ ಹಿಂದೂಗಳಿಗೆ ಉಪಯೋಗ ಆಗುವುದು ಹೇಗೆ?

'ದಿ ಹಿಂದೂ' ಪತ್ರಿಕೆಯ ಹಿರಿಯ ಬರಹಗಾರ ಸಿದ್ಧಾರ್ಥ ವರದರಾಜನ್ ಅವರು ಅಧ್ವಾನಿಯ 'ಸಾಧನೆ'ಗಳ ಪಟ್ಟಿಯನ್ನೇ ತಯಾರಿಸಿದ್ದಾರೆ. ಆ ಪಟ್ಟಿ ಹೀಗಿದೆ.

1. ಬಾಬ್ರಿ ಮಸೀದಿಯನ್ನು ಕೆಡವಿದ್ದು (1992)
2. ಇಂಡಿಯನ್ ಏರ್‌ಲೈನ್ಸ್‌ನ ವಿಮಾನ IC 814 ಅನ್ನು ಹೈಜಾಕ್ ಮಾಡಲು ಬಿಟ್ಟುಕೊಟ್ಟದ್ದು ಮತ್ತು ಆನಂತರ ಭಯೋತ್ಪಾದಕ ಮಸೂದ್ ಅಜರ್‌ನನ್ನು ಬಿಡುಗಡೆಗೊಳಿಸಿದ್ದು (1999)
3. ಚಿತ್ತೀಸಿಂಘ್ ಪೊರಾದಲ್ಲಿ CRPF ಯೋಧರಿಂದಲೇ ಸಿಖ್ಖರ ಮಾರಣಹೋಮ (2000)
4. ನಂದಿಗ್ರಾಮದಲ್ಲಿ ಕಾಶ್ಮೀರಿ ಪಂಡಿತರ ಮಾರಣಹೋಮ (2003)
5. ಅಮರನಾಥ ಯಾತ್ರಿಗಳ ಮೇಲೆ ಪ್ರಪ್ರಥಮ ಬಾರಿಗೆ ಭಯೋತ್ಪಾದಕರಿಂದ ದಾಳಿ (1999)
6. ಸಂಸತ್ತಿನ ಮೇಲೆ ಭಯೋತ್ಪಾದಕರ ದಾಳಿ (2001)
7. ಗೋಧ್ರಾ ದುರಂತ ಮತ್ತು ಆನಂತರ ಗುಜರಾತಿನಲ್ಲಿ ನಡೆದ ಮುಸಲ್ಮಾನರ ಮಾರಣಹೋಮ (2002)
8. ಅಕ್ಷರಧಾಮ ಮತ್ತು ರಘುನಾಥ ದೇವಾಲಯದ ಮೇಲೆ ಭಯೋತ್ಪಾದಕರ ದಾಳಿ (2002)

▶▶▶ 8



ಬರಲಿದೆ ಚೆಡ್ಡಿಗಳ ಒಳ ಸಮರ

ಯಡ್ಡಿಯ ಸರಕಾರ 'ಯಶಸ್ವೀ' ಆಗಿರುವುದು ನಿಜವೇ ಆದರೆ ಕಳೆದ ಬಾರಿಯ ಹದಿನೆಂಟು ಸ್ಥಾನಗಳಿಗಿಂತ ಈ ಬಾರಿ ಬಿಜೆಪಿ ಹೆಚ್ಚು ಸ್ಥಾನಗಳನ್ನು ಗಳಿಸಲೇಬೇಕು ಎಂಬುದು ಪಕ್ಷದಲ್ಲಿನ ಯಡ್ಡಿ ವಿರೋಧಿಗಳ ವಾದ. ಆದರೆ ಕಳೆದ 18 ಸ್ಥಾನಗಳನ್ನು ಉಳಿಸಿಕೊಂಡರೂ ಸಾಕು, ಯಡ್ಡಿ ರಾಜ್ಯದ ಬಿಜೆಪಿಯ ಪ್ರಶ್ನಾತೀತ ನಾಯಕರಾಗುತ್ತಾರೆ ಎಂಬುದು ಯಡ್ಡಿ ಗುಂಪಿನ ಪ್ರತಿವಾದ. ಬಿಜೆಪಿಯವರ ಪಾಲಿಗೆ - ಅದರಲ್ಲೂ ಯಡ್ಡಿಗೆ - ಈ 18 ಎಂಬುದೇ ಈಗ ದುಸ್ವಪ್ನವಾಗಿದೆ.

ಬರುವ ಮೇ 16ರಂದು ಲೋಕಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಕರ್ನಾಟಕದ ಬಿಜೆಪಿಯಲ್ಲಿ ಹಲವಾರು 'ತಲೆದಂಡ' ಕಾರ್ಯಾಚರಣೆಗಳು ನಡೆಯಲಿರುವುದು ಶತಸಿದ್ಧ. ಆದರೆ ಯಾರಿಂದ ಯಾರ ತಲೆದಂಡ ನಡೆಯಲಿದೆ ಎಂಬುದರ ಬಗ್ಗೆ ಈಗ ಚೆಡ್ಡಿಗಳ ನಡುವೆಯೇ ಜೋರಾಗಿ ಚರ್ಚೆ ನಡೆಯುತ್ತಿರುವುದು ವಿಶೇಷ.

ರಾಜ್ಯದ ಮುಖ್ಯಮಂತ್ರಿ ಯಡ್ಡಿ ಪಾಲಿಗೆ ಈ ಲೋಕಸಭಾ ಚುನಾವಣೆ ಒಂದು ಅಗ್ನಿ ಪರೀಕ್ಷೆ. ಹಾಗೆಂದು ನಾವು ಮಾತ್ರ ಹೇಳುತ್ತಿಲ್ಲ. ಅವರದೇ ಪಕ್ಷದ ನಾಯಕರಾದ ಅನಂತಕುಮಾರ್, ಬಸನಗೌಡ ಪಾಟೀಲ್ ಯತ್ನಾಳ್, ಜಗದೀಶ್ ಶೆಟ್ಟರ್ ಮೊದಲಾದ ಮುಖಂಡರುಗಳ ಪಡಸಾಲೆಗಳಲ್ಲಿ ಕೇಳಿಬರುತ್ತಿರುವ ಮಾತಿದು.

ಅವರೆಲ್ಲರ ವಾದದ ತಿರುಳು ಇಷ್ಟೆ: ಕಳೆದ ಬಾರಿ ಬಿಜೆಪಿ ಅಧಿಕಾರದಲ್ಲಿಲ್ಲದಿದ್ದರೂ ರಾಜ್ಯದಲ್ಲಿರುವ 24 ಸೀಟುಗಳಲ್ಲಿ ಹದಿನೆಂಟು ಸೀಟುಗಳನ್ನು ಗೆದ್ದುಕೊಂಡಿತ್ತು. ಆ ಚುನಾವಣೆಯಲ್ಲಿ ಅನಂತಕುಮಾರ್ ಮತ್ತು ಯಡಿಯೂರಪ್ಪ ಲವಕುಶರಂತೆ ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು ಚುನಾವಣಾ ಪ್ರಚಾರದ ತಂತ್ರದ ತನಕ ಎಲ್ಲಾ ಜವಾಬ್ದಾರಿಯನ್ನು ಜೊತೆಜೊತೆಗೆ ಹೆಗಲಿಗೇರಿಸಿಕೊಂಡಿದ್ದರು.

ಆದರೆ ಈ ಬಾರಿ ಎಲ್ಲವೂ ನಡೆಯುತ್ತಿರುವುದು ಯಡಿಯೂರಪ್ಪನವರ ಮೂಗಿನ ನೇರಕ್ಕೆ. ಅಭ್ಯರ್ಥಿಗಳ ಆಯ್ಕೆಯಲ್ಲೂ ಅನಂತಕುಮಾರ್‌ಗಿಂತ ಯಡಿಯೂರಪ್ಪನವರ ಮಾತಿಗೆ ಹೆಚ್ಚು ತೂಕ ನೀಡಲಾಗಿತ್ತು. ಎಷ್ಟರಮಟ್ಟಿಗೆ ಅಂದರೆ ಸುಮಾರು 20 ಕ್ಷೇತ್ರಗಳಲ್ಲಿ ಯಡ್ಡಿ ಭಂಟರಿಗೇ ಟಿಕೆಟ್ ಸಿಕ್ಕಿದ್ದವು. ಅದರರ್ಥ ಸುಮಾರು ಐದು ಕ್ಷೇತ್ರಗಳಲ್ಲಿ ಅನಂತಕುಮಾರ್ ಭಂಟರಿಗೆ ಟಿಕೆಟ್ ತಪ್ಪಿಸಿ ಯಡ್ಡಿ ತನ್ನ ಹಿಂಬಾಲಕರಿಗೆ ನೀಡುವಲ್ಲಿ ಯಶಸ್ವಿಯಾಗಿದ್ದರು. ಅದಕ್ಕಿಂತಲೂ ಮುಖ್ಯವಾಗಿ "11 ತಿಂಗಳ ಕಾಲ ಯಡ್ಡಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಆಧಾರದ" ಮೇಲೆಯೇ ರಾಜ್ಯದಲ್ಲಿ ಮತ ಭಿಕ್ಷೆಯನ್ನು ಬಿಜೆಪಿಯವರು ಬೇಡಿದ್ದರು.

ಯಡ್ಡಿಯ ಸರಕಾರ 'ಯಶಸ್ವೀ' ಆಗಿರುವುದು ನಿಜವೇ ಆದರೆ ಕಳೆದ ಬಾರಿಯ ಹದಿನೆಂಟು ಸ್ಥಾನಗಳಿಗಿಂತ ಈ ಬಾರಿ ಬಿಜೆಪಿ ಹೆಚ್ಚು ಸ್ಥಾನಗಳನ್ನು ಗಳಿಸಲೇಬೇಕು ಎಂಬುದು ಪಕ್ಷದಲ್ಲಿನ ಯಡ್ಡಿ ವಿರೋಧಿಗಳ ವಾದ. ಆದರೆ ಕಳೆದ 18 ಸ್ಥಾನಗಳನ್ನು ಉಳಿಸಿಕೊಂಡರೂ ಸಾಕು, ಯಡ್ಡಿ ರಾಜ್ಯದ ಬಿಜೆಪಿಯ ಪ್ರಶ್ನಾತೀತ ನಾಯಕರಾಗುತ್ತಾರೆ ಎಂಬುದು ಯಡ್ಡಿ ಗುಂಪಿನ ಪ್ರತಿವಾದ.

ಬಿಜೆಪಿಯವರ ಪಾಲಿಗೆ - ಅದರಲ್ಲೂ ಯಡ್ಡಿಗೆ - ಈ 18 ಎಂಬುದೇ ಈಗ ದುಸ್ವಪ್ನವಾಗಿದೆ. ಯಡ್ಡಿ 18ರ ಗಡಿಯನ್ನು ತಲುಪದಿದ್ದರೆ ಅವರು ಹೈ ಕಮಾಂಡ್‌ನ ಅವಕೃಪೆಗೆ ಒಳಗಾಗುವುದು ಗ್ಯಾರಂಟಿ. ಆದ್ದರಿಂದ ಅವರು 18 ಸೀಟುಗಳನ್ನು ಗೆಲ್ಲಿಸಿ, ಕರ್ನಾಟಕ ಬಿಜೆಪಿಯ ಸಾರ್ವಭೌಮ ನಾಯಕನಾಗಿ ಮೆರೆಯುತ್ತಾರೋ ಅಥವಾ 18ಕ್ಕಿಂತ ಕಡಿಮೆ ಸ್ಥಾನ ಗಳಿಸಿ ದುರಂತ ನಾಯಕನಾಗುತ್ತಾರೋ ಮೇ 16 ರಂದು ಗೊತ್ತಾಗಲಿದೆ.

ಅನಂತು ಎಂಬ ಸವಾಲು

ಈ ಬಾರಿಯ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣದಿಂದ ಅನಂತಕುಮಾರ್ ಸೋಲು ಖಚಿತ ಎಂಬ ಮಾತು ಚಾಮರಾಜಪೇಟೆಯ ಕೇಶವಕೃಪಾದಿಂದಲೇ ಕೇಳಿಬರುತ್ತಿದೆ. ಹಾಗೊಮ್ಮೆ ಅನಂತಕುಮಾರ್ ಸೋತಿದ್ದೇ ಆದರೆ ಯಡ್ಡಿ ಬಿಜೆಪಿಯ ಹೈಕಮಾಂಡ್ ಮತ್ತು ಭಾವಿ ಪ್ರಧಾನಿ ಎಂದು ಬಿಂಬಿಸಲ್ಪಟ್ಟಿರುವ ಅಡ್ವಾಣಿಯ ಕೆಂಗಣ್ಣಿಗೆ ಗುರಿಯಾಗಲಿದ್ದಾರೆ. ಯಾಕೆಂದರೆ ಅನಂತಕುಮಾರ್ ಸೋಲು ಬರೀ ಅವರ ವ್ಯೆಯಕ್ತಿಕ ಸೋಲಾಗಿರುವುದಿಲ್ಲ. ಬದಲಾಗಿ ಅವರ ಸೋಲಿನಲ್ಲಿ ಯಡ್ಡಿಯ ಪಾತ್ರವೂ ಇರುತ್ತದೆ. ಆದ್ದರಿಂದ ಅನಂತ್‌ಕುಮಾರ್ ಸೋಲು ಬಿಜೆಪಿಯ ರಾಜ್ಯ ಘಟಕದ ಮೇಲೆ ಹಲವಾರು ಪರಿಣಾಮಗಳನ್ನು ಬೀರಲಿದೆ, ಮಾತ್ರವಲ್ಲ, ಯಡ್ಡಿಯ ಮುಖ್ಯಮಂತ್ರಿ ಗಾದಿಯನ್ನೇ ಅಲ್ಲಾಡಿಸಿದರೂ ಅಚ್ಚರಿಯಿಲ್ಲ ಎಂಬ ಮಾತು ಕೇಳಿಬರುತ್ತಿವೆ.

ಇಷ್ಟಕ್ಕೂ "ಯಾವುದೇ ಕಾರಣಕ್ಕೂ ಅನಂತಕುಮಾರ್ ಸೋಲಬಾರದು" ಎಂದು ಯಡ್ಡಿಗೆ ಸ್ವತಃ ಅಡ್ವಾಣಿ ಸಂದೇಶ ಕಳುಹಿಸಿದ್ದಾರಂತೆ. ಆದರೂ ಅನಂತು ವಿರುದ್ಧ ಒಳಗೊಳಗೇ ಪಿತೂರಿ ನಡೆಸಿದ ಯಡ್ಡಿ ಮೊನ್ನಿನ ಮತದಾನದ ಒಂದೆರಡು ದಿನಕ್ಕೆ ಮುನ್ನ ವೀರಶೈವ ಜನಾಂಗದ ಕೆಲ ನಾಯಕರು ಪತ್ರಿಕಾಗೋಷ್ಠಿ ಕರೆದು "ಅನಂತಕುಮಾರ್ ಲಿಂಗಾಯತರ ವಿರೋಧಿ" ಎಂದು ಆರೋಪಿಸುವಂತೆ ಮಾಡಿದ್ದರು. ಇಂತಹ ಕುಚೋದ್ಯಗಳಿಂದಾಗಿಯೇ ಅನಂತಕುಮಾರ್ ಸೋಲು ಯಡಿಯೂರಪ್ಪನ ಅಧಃಪತನಕ್ಕೆ ನಾಂದಿಯಾಡಲಿದೆ ಎನ್ನುವುದು ಅನಂತ್ ಗ್ಯಾಂಗ್‌ನ ದೃಢವಾದ ನಂಬಿಕೆ.

ಯಡ್ಡಿ ಸ್ಥಾನಕ್ಕೆ ಶೆಟ್ಟರ್?

ಅನಂತು ಚುನಾವಣೆಯಲ್ಲಿ ಸೋತರೆ ಅವರು ಫುಲ್‌ಟೈಂ ರಾಜ್ಯ ರಾಜಕೀಯಕ್ಕೆ ಇಳಿಯುತ್ತಾರೆ. ಆಗ ಯಡ್ಡಿಗೆ ಬಸನಗೌಡ ಯತ್ನಾಳ್, ಜಗದೀಶ್ ಶೆಟ್ಟರ್ ಮತ್ತು ಇತ್ಯಾದಿ ಭಂಟರ ಮುಖಾಂತರ ಕಿರಿಕಿರಿ ಮಾಡುವುದು ಅವರ ದಿನಚರಿಯಾಗಲಿದೆ. ಮಾತ್ರವಲ್ಲ, ಕೆಲವರ ಪ್ರಕಾರ ಯಡಿಯೂರಪ್ಪನವರ ಸ್ಥಾನಪಲ್ಲಟಕ್ಕೆ ಅನಂತ್ ಈಗಾಗಲೇ ಕೆಲವು ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಅದರಲ್ಲಿ ಮುಖ್ಯವಾಗಿ ಯಡ್ಡಿ ಸ್ಥಾನದಲ್ಲಿ ಜಗದೀಶ್ ಶೆಟ್ಟರನ್ನು ಕುಳ್ಳಿರಿಸಬೇಕೆಂಬ ಕಾರ್ಯತಂತ್ರ ಈಗಾಗಲೇ ಚಾಲ್ತಿ ಪಡೆದಿದೆ.


ಹೇಳಿಕೇಳಿ, ಯಡಿಯೂರಪ್ಪ ಮಂಡ್ಯ ಕಡೆಯ ಲಿಂಗಾಯತರು. ಆ ಕ್ಷೇತ್ರದಿಂದ ಕನಿಷ್ಠ ಐದಾರು ಲಿಂಗಾಯತ ಸಂಸದರನ್ನೂ ಗೆಲ್ಲಿಸಿಕೊಂಡು ಬರುವ ತಾಕತ್ತು ಯಡ್ಡಿಗಿಲ್ಲ. ಮಾತ್ರವಲ್ಲ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿ ಅಧಿಕಾರಕ್ಕೆ ತಂದವರು ಹಳೇ ಮೈಸೂರು ಪ್ರಾಂತ್ಯದ ಲಿಂಗಾಯತರಲ್ಲ, ಬದಲಾಗಿ ಉತ್ತರ ಕರ್ನಾಟಕದ ಲಿಂಗಾಯತರು. ಹಾಗಾಗಿ ಉತ್ತರ ಕರ್ನಾಟಕದ ಲಿಂಗಾಯತರೇ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಬೇಕು ಎಂಬ ಹೊಸ ಸ್ಲೋಗನ್ ಈಗಾಗಲೇ ಪಕ್ಷದ ಒಳಗೆ ಆರಂಭವಾಗಿದೆ.

ಯಡ್ಡಿ ಏನೋ ಭವಿಷ್ಯದಲ್ಲಿ ಶೆಟ್ಟರು ತನಗೆ ಮುಳ್ಳಾಗಬಹುದೆಂಬ ದೂರದೃಷ್ಟಿಯಿಂದಲೇ ಅವರನ್ನು ಸ್ಪೀಕರ್ ಕುರ್ಚಿಯಲ್ಲಿ ಬಲವಂತವಾಗಿ ಕುಳ್ಳಿರಿಸಿದ್ದರು. ಆದರೆ ಉತ್ತರ ಕರ್ನಾಟಕದ ಲಿಂಗಾಯತ ಶಾಸಕರೇ ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿರುವುದರಿಂದ ಮತ್ತು ಅವರೆಲ್ಲ ಜಗದೀಶ್ ಶೆಟ್ಟರ್‌ಗೆ ಆತ್ಮೀಯರಾಗಿರುವುದರಿಂದ ಈ ಹೊಸ ಸ್ಲೋಗನ್‌ಗೆ ಅವರ‍್ಯಾರೂ ವಿರೋಧ ವ್ಯಕ್ತಪಡಿಸಲಾರರು. ಆದ್ದರಿಂದ ನಾಳೆ ಅನಂತಕುಮಾರರ ಕುಮ್ಮಕ್ಕಿನಿಂದ ಉತ್ತರ ಕರ್ನಾಟಕದ ಬಿಜೆಪಿ ಲಿಂಗವಂತರೆಲ್ಲ ಜೊತೆಗೂಡಿ ಶೆಟ್ಟರನ್ನೇ ಮುಖ್ಯಮಂತ್ರಿ ಸ್ಥಾನಕ್ಕೇರಿಸಿ, ಯಡ್ಡಿಯನ್ನೇ ಸ್ಪೀಕರ್ ಸ್ಥಾನದಲ್ಲಿ ಮೂಲೆಗುಂಪು ಮಾಡುವ ಹುನ್ನಾರವೊಂದು ನಡೆದಿದೆ. ಅದರಲ್ಲಿ ಅವರು ಯಶಸ್ವಿಯಾದರೆ ಬಿಜೆಪಿಯನ್ನು ಬೆಂಬಲಿಸಿದ್ದ ಲಿಂಗಾಯತ ಮತದಾರರಿಗೆ ಏನೇನೂ ಬೇಜಾರಾಗುವುದಿಲ್ಲ, ಯಾಕೆಂದರೆ ಲಿಂಗಾಯತನೋರ್ವನೇ ಮುಖ್ಯಮಂತ್ರಿ ಹುದ್ದೆಯನ್ನು ಅಲಂಕರಿಸಿರುತ್ತಾನೆ! ಅದು ಲಿಂಗಾಯತರ ಅಂತಃಕಲಹದಿಂದ ಬಿಜೆಪಿ ಒಡೆದ ಮನೆಯಾಗುವ ಸಾಧ್ಯತೆಯಂತೂ ಇದ್ದೇ ಇದೆ.

ಲಿಂಗಾಯತರ ಜಗಳದಲ್ಲಿ ಬ್ರಾಹ್ಮಣನಿಗೆ ಪಟ್ಟ?

ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬಳ್ಳಾರಿ ಜೈಲಿನಲ್ಲಿ ಅಡ್ವಾಣಿಯವರೊಂದಿಗೆ ಜೈಲುವಾಸ ಅನುಭವಿಸಿದ ಉಡುಪಿಯ ವಿ.ಎಸ್. ಆಚಾರ್ಯ

▶▶▶



ಜೆಡಿಎಸ್: ಉತ್ತರಾಧಿಕಾರಿ ಮಗನೋ, ಸೊಸೆಯೋ?

ಬಿಜೆಪಿಯಲ್ಲಿ ನಡೆಯುತ್ತಿರುವ 'ತಲೆದಂಡ' ನಾಟಕದಂತೆ ಜೆಡಿಎಸ್‌ನಲ್ಲಿ ನಡೆಯುತ್ತಿರುವ 'ತುಘಲಕ್' ನಾಟಕವೂ ರಂಜಕವಾಗಿದೆ.


ಒಂದೆಡೆ ಜನತಾದಳದ ಮಹಾದಂಡನಾಯಕ ದೇವೇಗೌಡ, ಇನ್ನೊಂದೆಡೆ ದಂಡನಾಯಕ ಕುಮಾರಸ್ವಾಮಿ, ಮಗದೊಂದೆಡೆ ತುಂಡುನಾಯಕ ಚೆಲುವರಾಯಸ್ವಾಮಿ ಸದ್ಯಕ್ಕೆ ಈ ಪಕ್ಷದ ರಾಜಕೀಯ ನಾಟಕದ ಮುಖ್ಯ ಪಾತ್ರಧಾರಿಗಳಾಗಿದ್ದಾರೆ.

ದೇವೇಗೌಡರು ದೆಹಲಿ ಗದ್ದುಗೆಯ ಕನಸು ಕಾಣುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ತನ್ನ ಜೊತೆಗೆ ಪುತ್ರ ಕುಮಾರಸ್ವಾಮಿಯನ್ನು ಮತ್ತು ಇತರೆ ಮೂರ್ನಾಲ್ಕು ನಾಯಕರನ್ನು ಸಂಸದರಾಗಿ ದೆಹಲಿಗೆ ಕರೆದುಕೊಂಡು ಹೋಗುವ ಸೂಚನೆಗಳನ್ನು ಪಡೆದಿರುವ ಗೌಡರು ಅಲ್ಲಿ ಯಾವುದಾದರೂ ಮುಖ್ಯ ಖಾತೆಯ ಮೇಲೆ ಹಿಡಿತ ಪಡೆದು ತನ್ನ ವೈರಿಗಳನ್ನು ಸದೆ ಬಡಿಯುವ ಹುನ್ನಾರದಲ್ಲಿದ್ದಾರೆ.




ಆದರೆ ಗೌಡರಾದಿಯಾಗಿ ಪಕ್ಷದ ಹಿರಿಯ ನಾಯಕರು ದೆಹಲಿಗೆ ಹೋದರೆ ಇಲ್ಲಿ ಜನತಾದಳದ ನಾಯಕನ ಗದ್ದುಗೆಯಲ್ಲಿ ಕುಳಿತುಕೊಳ್ಳುವವರು ಯಾರು ಎಂಬ ಜಿಜ್ಞಾಸೆ ಜೆಡಿಎಸ್‌ನಲ್ಲಿ ಆರಂಭವಾಗಿದೆ. ಗೌಡರಿಗೆ ರಾಜ್ಯದ ಜವಾಬ್ದಾರಿಯನ್ನು ತಮ್ಮ ಹಿರಿಯ ಮಗ ರೇವಣ್ಣನಿಗೆ ಬಿಟ್ಟುಕೊಡಲು ಮನಸ್ಸಿದೆ. ಆದರೆ ಅದಕ್ಕೆ ಕುಮಾರಸ್ವಾಮಿ ಒಪ್ಪಬೇಕಲ್ಲ?! ಅಂತಹ ಸನ್ನಿವೇಶ ಎದುರಾದರೆ ಚತುರ ರಾಜಕಾರಣಿಯೆಂದೇ ಹೆಸರಾಗಿರುವ ದೊಡ್ಡ ಗೌಡರ ಮಗ ಕುಮಾರಸ್ವಾಮಿ ಹಿಂಬಾಗಿಲಿನಿಂದ ತಮ್ಮ ಪತ್ನಿ ಅನಿತಾರನ್ನೇ ಅಧಿನಾಯಕಿಯನ್ನಾಗಿ ಮಾಡಿದರೂ ಆಶ್ಚರ್ಯವಿಲ್ಲ ಎನ್ನುತ್ತಿದ್ದಾರೆ ಕೆಲ 'ದಳ'ವಾಯಿಗಳು.


ಇದೆಲ್ಲದರ ಮಧ್ಯೆ ಗೌಡರ ಕುಟುಂಬದ ಹೊರತಾಗಿ ಕೇಳಿಬರುತ್ತಿರುವ ಹೆಸರೆಂದರೆ ಬಸವರಾಜ ಹೊರಟ್ಟಿ ಅವರದ್ದು. ಆದರೆ ಅದು ಅಷ್ಟು ಸುಲಭವಲ್ಲ ಎಂದೂ ಜನತಾ ದಳದ ಕಚೇರಿಯಿಂದಲೇ ಅಪಸ್ವರಗಳು ಕೇಳಿ ಬರುತ್ತಿವೆ.




ಅದೇನೇ ಇದ್ದರೂ ಅಪ್ಪ-ಮಕ್ಕಳ ಪಕ್ಷಕ್ಕೆ ಮತ್ತೊಬ್ಬ ಮಗ ಅಧಿನಾಯಕನಾಗಿ ಬರುತ್ತಾನೋ ಅಥವಾ ಸೊಸೆಯೇ ಅಧಿನಾಯಕಿಯಾಗುತ್ತಾಳೇ, ಕೊನೆಗೆ ಕುಟುಂಬದ ಹೊರಗಿನವರು ನಾಯಕರಾಗುತ್ತಾರೋ ಎಂಬ ಚರ್ಚೆಯಂತೂ ಚುನಾವಣಾ ಫಲಿತಾಂಶದಷ್ಟೇ ಕುತೂಹಲಕರವಾಗಿದೆ.

ಕಾಂಗ್ರೆಸ್: ಹಲವರು ದೆಲ್ಲಿಗೆ ಕೆಲವರು ಗಲ್ಲಿಗೆ








100 ವರ್ಷಕ್ಕಿಂತಲೂ ಉದ್ದನೆ ಇತಿಹಾಸವಿರುವ ಕಾಂಗ್ರೆಸ್ ಪಕ್ಷದ ಹಣೆಬರಹ ಜೆಡಿಎಸ್‌ಗಿಂತ ಭಿನ್ನವಾಗೇನೂ ಇಲ್ಲ. ಮುಖ್ಯವಾಗಿ ಲೋಕಸಭೆಗೆ ಬಹುತೇಕ ಆಯ್ಕೆಯಾಗುವ ಮಲ್ಲಿಕಾರ್ಜುನ ಖರ್ಗೆ ಮನಸ್ಸಿಲ್ಲದ ಮನಸ್ಸಿನಿಂದ ಗಂಟುಮೂಟೆ ಕಟ್ಟಿಕೊಂಡು ದಿಲ್ಲಿಗೆ ಹೋಗಲೇಬೇಕಾಗಿದೆ. ಅವರ ಜೊತೆ ಆಪ್ತ ಸ್ನೇಹಿತ ಧರ್ಮಸಿಂಗ್ ಕೂಡಾ ದೆಹಲಿ ಚಲೋ ಮಾಡುವ ಸೂಚನೆಗಳಿವೆ. ಇವರಿಬ್ಬರ ಮೂರು ದಶಕಗಳ 'ಬೆಂಗಳೂರು ಮೊಕ್ಕಾಂ' ಕೊನೆಗೊಳ್ಳುತ್ತಿರುವುದು ರಾಜ್ಯದ ಅನೇಕ ನಾಯಕರ ಕನಸುಗಳು ಚಿಗುರಲು ಕಾರಣವಾಗಿದೆ.

ಮುಖ್ಯವಾಗಿ ಎರಡು ವರ್ಷಗಳ ಹಿಂದೆ ಕಾಂಗ್ರೆಸ್ ಸೇರಿದ ಸಿದ್ದರಾಮಯ್ಯನವರಿಗೆ ಚುನಾವಣಾ ನಂತರ ಬಂಪರ್ ಪ್ರೈಜ್ ಸಿಗುವ ನಿರೀಕ್ಷೆ ಇದೆ. ಅವರು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗುವ ಮೂಲಕ ಖರ್ಗೆಯವರ ಸ್ಥಾನವನ್ನಲಂಕರಿಸಲಿದ್ದಾರೆ. ಆದರೆ ಒಂದು ಷರತ್ತಿನ ಮೇಲೆ: ಕುರುಬರೇ ಅತ್ಯಧಿಕ ಸಂಖ್ಯೆಯಲ್ಲಿರುವ ಕ್ಷೇತ್ರಗಳಿಂದ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದರೆ ಮಾತ್ರ ಅವರಿಗೆ ಆ ಸ್ಥಾನ ಸಿಗಲಿದೆ. ಇಲ್ಲದಿದ್ದರೆ ಸ್ವಲ್ಪ ಕಷ್ಟವಾದೀತು.

ಅದಕ್ಕಿಂತ ಮುಖ್ಯವಾದ ಇನ್ನೊಂದು ಅಂಶವಿದೆ. ಅಕಸ್ಮಾತ್ ಕೇಂದ್ರದಲ್ಲಿ ದೇವೇಗೌಡರ ನೆರವು ಪಡೆದು ಕಾಂಗ್ರೆಸ್ ನೇತೃತ್ವದ ಒಕ್ಕೂಟ ಅಧಿಕಾರಕ್ಕೆ ಬಂದರೆ? ಆಗ ಸಿದ್ದರಾಮಯ್ಯನವರ ಪರಿಸ್ಥಿತಿ ದೇವೇಗೌಡರ 'ಮೂಡ್' ಮತ್ತು 'ಲೆಕ್ಕಾಚಾರ'ವನ್ನು ಅವಲಂಬಿಸಿರುತ್ತದೆ.

ಅಂದಹಾಗೆ ಕಾಂಗ್ರೆಸ್‌ನ ಹಲವು ನಾಯಕರು ದೆಲ್ಲಿಗೆ ಹೋದರೆ ಇನ್ನೂ ಅನೇಕರು 'ಗಲ್ಲಿ' ಸೇರಲಿದ್ದಾರೆ. ಆಗ ರಾಜ್ಯ ಕಾಂಗ್ರೆಸ್ಸಲ್ಲಿ 'ಗಲ್ಲಿ' ಮಟ್ಟದ ರಾಜಕೀಯವಂತೂ ರಾರಾಜಿಸಿ ಜನರಿಗೆ ಪುಕ್ಕಟೆ ಮನರಂಜನೆ ನೀಡುವುದು ಗ್ಯಾರಂಟಿಯಾಗಿದೆ.

ಸಂಚು ಒಳ ಸಂಚುಗಳು



ಅಭ್ಯರ್ಥಿಯೊಬ್ಬನ ಜೊತೆಯಲ್ಲಿದ್ದುಕೊಂಡೇ ಆತನನ್ನು ಸೋಲಿಸಲು ಸ್ಕೆಚ್ ಹಾಕಿರುವುದು, ಜೈಕಾರ ಹಾಕುತ್ತಲೇ ಆತನ ವಿರೋಧಿಗಳ ಜೊತೆ ಕೈಜೋಡಿಸಿರುವ ಅನೇಕ ಘಟನೆಗಳು ಈ ಬಾರಿ ನಡೆದಿವೆ. ಈ ರೀತಿಯ ಸಂಚು, ಒಳಸಂಚುಗಳಿಗೆ ಕಾರಣವಾಗಿದ್ದು ಜಾತಿ ಪ್ರೇಮ, ಹಣ ಹಾಗೂ ಯಾವುದೋ ಗತಕಾಲದ ಸೇಡುಗಳು. ಉದಾಹರಣೆಗೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅನಂತ್‌ಕುಮಾರ್ ಬಗ್ಗೆ ಹೇಳಬೇಕೆಂದರೆ....

ಅನಂತ್ ಈ ಬಾರಿ ಸೋಲುವ ಸಾಧ್ಯತೆಯಿದೆ.

ಅದಕ್ಕೆ ಬಿಜೆಪಿಗಳೇ ಏನೇನೆಲ್ಲಾ ಪಿತೂರಿ ಮಾಡಿದ್ದಾರೆ ಗೊತ್ತೆ?

ಹೇಮಚಂದ್ರ ಸಾಗರ್



ಚಿಕ್ಕಪೇಟೆಯ ಬಿಜೆಪಿ ಶಾಸಕ ಹೇಮಚಂದ್ರ ಸಾಗರ್ ಅನಂತ್ ಪರ ಹಣ ಖರ್ಚು ಮಾಡಿ ಓಡಾಡುವುದಿರಲಿ, ಒಂದೇ ಒಂದು ಮಾತೂ ಖರ್ಚು ಮಾಡಲಿಲ್ಲ, ಮನೆ ಬಿಟ್ಟು ಆಚೆಗೂ ಬರಲಿಲ್ಲ. ವಾಸ್ತವವಾಗಿ ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಹೇಮಚಂದ್ರಗೆ ಚಿಕ್ಕಪೇಟೆಯ ಬಿಜೆಪಿ ಟಿಕೆಟ್ ಕೊಡಿಸಿ ಗೆಲ್ಲಿಸಿದ್ದೇ ಅನಂತ್‌ಕುಮಾರ್. ಮೊದಲಿಗೆ ಚಿಕ್ಕಪೇಟೆ ಪಿ.ಸಿ. ಮೋಹನ್‌ರ ಕ್ಷೇತ್ರವಾಗಿತ್ತು. ಕಳೆದ ಬಾರಿ ಆರ್.ವಿ. ದೇವರಾಜ್ ಕಾಂಗ್ರೆಸ್‌ನಿಂದ ಚಿಕ್ಕಪೇಟೆಯಿಂದ ಸ್ಪರ್ಧಿಸಲು ಹೊರಟಾಗ ಅನಂತ್ ನಡುವೆ ನಿಂತು ಒಂದೇ ಜಾತಿಯ ಮೋಹನ್ ಹಾಗೂ ದೇವರಾಜ್ ಎದುರಾಳಿಗಳಾಗದಂತೆ ತಡೆದಿದ್ದರು. ಹಾಗಾಗಿ ಮೋಹನ್ ಗಾಂಧಿನಗರದಿಂದಲೂ ದೇವರಾಜ್ ಚಿಕ್ಕಪೇಟೆಯಿಂದಲೂ ಸ್ಪರ್ಧಿಸಿದ್ದರು. ಕೊನೆಗೂ ಎರಡೂ ಕಡೆ ಬಿಜೆಪಿಯೇ ಗೆದ್ದು ಹೇಮಚಂದ್ರ ಸಾಗರ್ ಅಂಡ್ ಮೋಹನ್ ಶಾಸಕರಾಗಿದ್ದರು.

ಆದರೆ ಹೇಮಚಂದ್ರ ಬಹಳ ಬೇಗನೆ ಅನಂತ್‌ಕುಮಾರ್ ಮಾಡಿದ ಉಪಕಾರ ಮರೆತರು. ಜಾತಿ ಕಾರಣಕ್ಕೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಕೃಷ್ಣಬೈರೇಗೌಡ ಪರ ನಿಂತರು. ಹೇಮಚಂದ್ರರ ರಕ್ತಸಂಬಂಧಿ ಕನಕನಪಾಳ್ಯದ ಕೆ.ಎಂ. ನಾಗರಾಜ್ ಈಗಲೂ ಒಬ್ಬ ಬಲಿಷ್ಠ ಕಾಂಗ್ರೆಸ್ ನಾಯಕ. ಆತನ ಮಾತಿಗೆ ಬೆಲೆ ನೀಡಿ ಈ ಬಾರಿ ಹೇಮಚಂದ್ರ ಅನಂತ್‌ಗೆ ಕೈಕೊಟ್ಟಿದ್ದಾರೆ. ಚಿಕ್ಕಪೇಟೆ ವಿಧಾನಸಭಾ ಏರಿಯಾದ ಬಹುತೇಕ ಕಡೆ ಅನಂತ್‌ಕುಮಾರ್ ಪರವಾಗಿ ಕರಪತ್ರ ಹಂಚಲೂ ಕಾರ್ಯಕರ್ತರಿರಲಿಲ್ಲ ಎಂದರೆ ಹೇಮಚಂದ್ರರ ನಿಷ್ಕ್ರಿಯತೆ ಯಾವ ಮಟ್ಟದಲ್ಲಿತ್ತು ಯೋಚಿಸಿ.



ಸತೀಶ್ ರೆಡ್ಡಿ




ಬೊಮ್ಮನಹಳ್ಳಿಯ ಬಿಜೆಪಿ ಶಾಸಕನೀತ. ಅನಂತ್ ಪರ ಎಲ್ಲೂ ಕಾಣಿಸಿಕೊಳ್ಳದೆ ತಪ್ಪಿಸಿಕೊಂಡವ. ಕೊನೆಗೆ ಸಚಿವ ಅಶೋಕ್ ಖುದ್ದಾಗಿ ಹೋಗಿ 50 ಲಕ್ಷ ರೂಪಾಯಿ ತಲುಪಿಸಿದ ಮೇಲೆ ಅರೆಮನಸಿನಿಂದ ಪ್ರಚಾರ ಮಾಡಿದರು. ಆದರೆ ಅನಂತ್‌ಗೆ ಓಟು ಬೀಳುವಂತೆ ತಕ್ಕ ಬಂದೋಬಸ್ತ್ ಮಾಡಲಿಲ್ಲ, ಯಡ್ಡಿ ಸೂಚನೆಯೇ ಇದಕ್ಕೆ ಕಾರಣ ಎನ್ನಲಾಗುತ್ತಿದೆ.

ಚಂದ್ರಪ್ಪ

ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಕಾರ್ಪೊರೇಟರ್ ಚಂದ್ರಪ್ಪ ಈಗ ಬಿಜೆಪಿ ನಾಯಕ. ಮಜಾ ಅಂದರೆ ಈತ ಬೆಂಗಳೂರು ಸೆಂಟ್ರಲ್‌ನಲ್ಲಿ ಜೆಡಿಎಸ್‌ನ ಜಮೀರ್ ಪರ ಹಾಗೂ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಕೃಷ್ಣಬೈರೇಗೌಡ ಪರ ಕೆಲಸ ಮಾಡಿಬಿಟ್ಟರು.

ಈತ ಕಾಂಗ್ರೆಸ್‌ನ ರಾಮಲಿಂಗಾರೆಡ್ಡಿ ವಿರೋಧಿಯಾದರೂ ಕೃಷ್ಣಬೈರೇಗೌಡರಿಗೆ ಹಣ ತರಿಸಿಕೊಟ್ಟನೆಂಬ ವರದಿಗಳಿವೆ. ಈ ಹಣ ಯಾರು ಕೊಟ್ಟರು, ಯಾಕೆ ಕೊಟ್ಟರೆಂಬ ವಿಚಾರ ಸ್ವತಃ ಅನಂತ್‌ಕುಮಾರ್ ಬಣಕ್ಕೆ ಈಗಲೂ ಗೊತ್ತಾಗಿಲ್ಲ!

ಪ್ರಸಾದ್ ರೆಡ್ಡಿ



ಈತ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಬಿಟಿಎಂ ಲೇಔಟ್‌ನಿಂದ ಬಿಜೆಪಿಯಿಂದ ಸ್ಪರ್ಧಿಸಿ ಕಾಂಗ್ರೆಸ್‌ನ ರಾಮಲಿಂಗಾರೆಡ್ಡಿ ವಿರುದ್ಧ ಸೋತಿದ್ದಾತ. ಈ ಬಾರಿ ಬೆಂಗಳೂರು ಉತ್ತರ ಸಂಸತ್ ಟಿಕೆಟ್ ಕೇಳಿ ಕೊನೆಗೆ ಚಿಕ್ಕಬಳ್ಳಾಪುರಕ್ಕೂ ಟ್ರೈ ಮಾಡಿದರಾದರೂ ಬಿಜೆಪಿಗಳು ಒಪ್ಪಿರಲಿಲ್ಲ. ಆ ಸಿಟ್ಟಿಗೆ ಪ್ರಸಾದ್ ರೆಡ್ಡಿ ಈ ಬಾರಿ ಕಾಂಗ್ರೆಸ್‌ಗೆ ಒಳಗಿಂದೊಳಗೇ ಸಪೋರ್ಟ್ ಮಾಡಿದ್ದೇ ಅಲ್ಲದೆ ಕೃಷ್ಣಬೈರೇಗೌಡರಿಗೆ 2 ಕೋಟಿ ರೂಪಾಯಿ ಹಣವನ್ನು ನೀಡಿದರೆಂಬ ಸುದ್ದಿ ಇದೆ.

ಇನ್ನು ಜಯನಗರದ ಬಿಜೆಪಿ ಲೀಡರ್ ನಟರಾಜ್ ಥೇಟ್ ಕಾಂಗ್ರೆ ಕಾರ್ಯಕರ್ತನಂತೆ ಓಡಾಡಿದ್ದು ಎಲ್ಲರಿಗೂ ಕಾಣುತ್ತಿತ್ತು. ಈತ ಮೂರು ಸಾರಿ ಕಾರ್ಪೊರೇಟರ್ ಆಗಿದ್ದಾತ. ಕಳೆದ ಬಾರಿ ಜಯನಗರಕ್ಕೆ ಬಿಜೆಪಿ ಟಿಕೆಟ್ ಕೇಳಿ ಇಲ್ಲಾ ಅನ್ನಿಸಿಕೊಂಡು ಬಂಡಾಯವೆದ್ದಿದ್ದ. ಈ ಬಾರಿ ಒಕ್ಕಲಿಗ ಜಾತಿಪ್ರೇಮದಿಂದ ಒಳಗೊಳಗೇ ಕಾಂಗ್ರೆ ಪರ ವಿಪರೀತ ಕೆಲಸ ಮಾಡಿ, ಹಣ ಸರಬರಾಜೂ ಮಾಡಿಸಿ ಬಿಜೆಪಿಗೆ ಕೈಕೊಟ್ಟಿದ್ದಾನೆ.

ಆದರೆ ಇವರೆಲ್ಲರಿಗಿಂತ ಅನಂತ್‌ಕುಮಾರ್‌ಗೆ ಅತೀ ಹೆಚ್ಚಿನ ಮೋಸ ಮಾಡಿದ್ದು ಆರ್. ಅಶೋಕ್!

ಆರ್. ಅಶೋಕ್

ಅಸೆಂಬ್ಲಿ ಚುನಾವಣೆಯಲ್ಲಿ ಪದ್ಮನಾಭನಗರದಿಂದ 32 ಸಾವಿರ ಲೀಡ್‌ನಲ್ಲಿ ಗೆದ್ದಿದ್ದ ಆರ್. ಅಶೋಕ್ ಈ ಬಾರಿ ಅನಂತ್ ಪರ ಜನತೆಗೆ ಮುಖವನ್ನೇ ತೋರಿಸಲಿಲ್ಲ. ಆ ಕಾರಣಕ್ಕಾಗಿ ಅನಂತ್‌ಗೆ ಇಲ್ಲಿ 15 ಸಾವಿರ ಲೀಡ್ ಸಿಕ್ಕರೆ ಅದೇ ಹೆಚ್ಚು ಅನ್ನಲಾಗುತ್ತಿದೆ. ಅದೇಕೋ ಏನೋ ಬಿಜೆಪಿ ಶಾಸಕರಾದ ಎಲ್. ಶ್ರೀನಿವಾಸ್ ಹಾಗೂ ಕೃಷ್ಣಪ್ಪ ಅನಂತ್ ಪರ ಓಟು ಕೇಳಲಿಲ್ಲ, ಪ್ರಚಾರವನ್ನೂ ಮಾಡಲಿಲ್ಲ. ಬಸವನಗುಡಿಯ ರವಿಸುಬ್ರಮಣ್ಯ ಹಾಗೂ ಜಯನಗರದ ವಿಜಯಕುಮಾರ್ ಎಂಬ ಇಬ್ಬರು ಬ್ರಾಹ್ಮಣ ಶಾಸಕರು ಮಾತ್ರ ಅನಂತ್ ಪರ ಹಗಲು ರಾತ್ರಿ ದುಡಿದರು. ಅದೇ ರೀತಿ ಯಡಿಯೂರು ವಾರ್ಡಿನ ಎನ್.ಆರ್. ರಮೇಶ್ ಒಬ್ಬರು ಅನಂತ್ ಪರ ಕೆಲಸ ಮಾಡಿದ್ದು ಬಿಟ್ಟರೆ ಉಳಿದೆಲ್ಲಾ ಬಿಜೆಪಿಗಳು ಕೈಕೊಟ್ಟಿದ್ದಾರೆ.

ಯಡ್ಡಿ ವಿರೋಧಿಯೆಂಬ ಕಾರಣಕ್ಕೆ ಕ್ಷೇತ್ರದ ಲಿಂಗಾಯತರು ಅನಂತ್‌ಗೆ ಓಟು ಹಾಕಲಿಲ್ಲ. ಇನ್ನು ಕಾಂಗ್ರೆಸ್‌ನ ಕೃಷ್ಣಬೈರೇಗೌಡ ಒಕ್ಕಲಿಗರೆಂಬ ಕಾರಣಕ್ಕೆ ದಳ-ಬಿಜೆಪಿಯ ಒಕ್ಕಲಿಗ ಲೀಡರ್‌ಗಳೂ ಕಾಂಗ್ರೆಸ್ ಪರ ನಿಂತರು.

ಇದರಿಂದಾಗಿ ಒಂಟಿ ಬ್ರಾಹ್ಮಣನಂತೆ ಅನಂತ್‌ಕುಮಾರ್ ಅಸಹಾಯಕರಾಗಿ ಈ ಬಾರಿ ಚುನಾವಣಾ ಹೋರಾಟ ಮುಗಿಸಿದ್ದಾರೆ. ■

ತೇಜಮ್ಮನ ದುಡ್ಡು ಕದ್ದಿದ್ಯಾರು?



ಎಲೆಕ್ಷನ್ ಖರ್ಚಿಗೆಂದು ತೇಜಮ್ಮ ಕಳುಹಿಸಿದ್ದ ಹನ್ನೆರಡೂವರೆ ಲಕ್ಷ ರೂಪಾಯಿಗಳನ್ನು ಯಾರೋ ಐನಾತಿಗಳು ಕಿತ್ತುಕೊಂಡು ಹೋಗಿರುವುದೊಂದು ಮಜಾ ಘಟನೆ. ಕಾಂಗ್ರೆಸ್ ಪಕ್ಷದಿಂದ ಬಂದಿದ್ದ ಹಣದ ಪೈಕಿ ಈ ತೇಜಮ್ಮ 12.5 ಲಕ್ಷವನ್ನು ಮಾಗಡಿ ಏರಿಯಾದ ಕಾರ್ಯಕರ್ತರ ಖರ್ಚಿಗೆಂದು ತಲುಪಿಸಲು ತನ್ನ ಸಹಾಯಕಿ ಕಾತ್ಯಾಯಿನಿ ಕೈಲಿ ಕಳುಹಿಸಿದ್ದಳು. ಈ ಕಾತ್ಯಾಯಿನಿ ಕಾರಿನಲ್ಲಿ ಹೋಗುತ್ತಿರುವಾಗ ಬೆಂಗಳೂರು ಹೊರವಲಯದ ನೈಸ್ ರೋಡಿನ ಹತ್ತಿರ ಎಲೆಕ್ಷನ್ ಆಫೀಸರ್‌ಗಳೆಂದು ಹೇಳಿಕೊಂಡ ಮೂವರು ಕಾರು ಚೆಕ್ ಮಾಡಿ ಹಣ ಕಿತ್ತುಕೊಂಡು ಹೋಗಿದ್ದಾರೆ.

ಆಮೇಲಿನ ತಮಾಷೆ ಏನೆಂದರೆ ಈ ಕಳ್ಳತನದ ಬಗ್ಗೆ ಅಂದೇ ತಲಘಟ್ಟಪುರ ಪೊಲೀಸರಿಗೆ ಕಂಪ್ಲೆಂಟ್ ಕೊಡಿಸಿದ ತೇಜಮ್ಮ ಮಾರನೆ ದಿನವೇ ದೂರು ವಾಪಸ್ ಪಡೆದಳು! ಆ ಹಣ ಎಲ್ಲಿಂದ ಬಂತು ಅಂತ ಚುನಾವಣಾ ಅಧಿಕಾರಿಗಳು ಕೇಳಿದರೆ ಹೇಳಲಿಕ್ಕೆ ಉತ್ತರ ಎಲ್ಲಿದೆ ಅಂತ!

ಇದಕ್ಕೂ ತಮಾಷೆಯ ವಿಚಾರ ಯಾವುದೆಂದರೆ ಚುನಾವಣಾ ಆಯೋಗ ಈಗ ತೇಜಮ್ಮನ ವಿರುದ್ಧವೇ "ಕಂಪ್ಲೆಂಟ್ ಕೊಟ್ಟು ವಾಪಸ್ ತೆಗೆಸಿದ ಬಗ್ಗೆ" ಹೊಸ ತನಿಖೆ ಆರಂಭಿಸಿದೆ! ಅಂದಹಾಗೆ ತೇಜಮ್ಮನ ಹಣ ಕಿತ್ತುಕೊಂಡವರು ಬೇರೆ ಯಾರೋ ಅಪರಿಚಿತರಲ್ಲ, ಹಣ ಸಾಗಾಣಿಕೆ ಬಗ್ಗೆ ಮಾಹಿತಿ ತಿಳಿದಿದ್ದ ಕಾಂಗ್ರೆಗಳೇ ಅಂತೆ!

ಕಾಂಗ್ರೆಸ್‌ನಲ್ಲಿ ತೇಜಮ್ಮನಿಗೆ ಶತ್ರುಗಳೇನು ಒಬ್ಬರಾ, ಇಬ್ಬರಾ....?!

ಶಿವರಾಮೇಗೌಡನ ಕರಪತ್ರ ಸಮರ



ಇದು ಮಂಡ್ಯದ ಶಿವರಾಮೇಗೌಡರಿಗೆ ಬಿಜೆಪಿ ಟಿಕೆಟ್ ಸಿಗುವ ಮುನ್ನ ನಡೆದದ್ದು. ಆಗಿನ್ನೂ ಗೌಡರು ಪಾಪ ಕಾಂಗ್ರೆಸ್ ಟಿಕೆಟ್‌ಗಾಗಿ ಓಡಾಡುತ್ತಿದ್ದರು.

ಹಾಗೊಮ್ಮೆ ಶಿವರಾಮೇಗೌಡರು ಕಾಂಗ್ರೆಸ್ ಲೀಡರ್‌ಗಳನ್ನು ಇಂಪ್ರೆಸ್ ಮಾಡಲು ಒಂದು ಪಾಂಪ್ಲೆಟ್ ಪ್ರಿಂಟಾಕಿಸಿದ್ದರು.

"ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿಗಳ ಹಿಂದೂ ಕೋಮುವಾದ ಬೆಳೆಯದಂತೆ ಸದೆಬಡಿಯಬೇಕಿದೆ. ಹಿಂದೂತ್ವವಾದಿಗಳು ಸಮಾಜದ್ರೋಹಿಗಳು..." ಎಂಬಿತ್ಯಾದಿ ಸಾಲುಗಳಿದ್ದ ಐದು ಲಕ್ಷ ಕರಪತ್ರ ಪ್ರಿಂಟ್ ಮಾಡಿಸಿದ ಶಿವರಾಮೇಗೌಡರು ಇನ್ನೇನು ಅವನ್ನು ಎಲ್ಲಾ ಕಡೆ ಹಂಚಿಸಬೇಕು. ಅಷ್ಟರಲ್ಲಿ ಕಾಂಗ್ರೆಸ್ ಟಿಕೆಟ್ ಅಂಬರೀಷ್‌ಗೆ ಸಿಕ್ಕಿಬಿಟ್ಟಿತು. ಕೂಡಲೇ ಶಿವರಾಮೇಗೌಡ ಬಿಜೆಪಿಗೆ ನೆಗೆದು ಟಿಕೆಟ್ ಗಿಟ್ಟಿಸಿದರು. ತಕ್ಷಣ ಹಳೇ ಕರಪತ್ರ ಅಷ್ಟಕ್ಕೂ ಬೆಂಕಿಹಚ್ಚಿ ಸುಡಿಸಿ ಹೊಸ ಕರಪತ್ರ ಹಾಕಿಸಿದರು.

ಅದರಲ್ಲಿ;

"ಹಿಂದೂತ್ವವಾದವೇ ಭಾರತೀಯ ಧರ್ಮ. ಹಿಂದೂಗಳೆಲ್ಲಾ ಒಂದಾಗಿ ಭಾರತ ಉಳಿಸಿ" ಇತ್ಯಾದಿ ಪ್ರಿಂಟಿಸಲಾಗಿತ್ತು.


ಸದ್ಯ ಈ ಶಿವರಾಮೇಗೌಡ ಎರಡೂ ಕರಪತ್ರ ಹಂಚಲಿಲ್ಲ ಎಂಬುದೇ ಮಂಡ್ಯಾದವರ ಪುಣ್ಯ!!

▶▶

...ಬಗ್ಗೆ ಹೈ ಕಮಾಂಡಿಗೆ ಒಳ್ಳೆಯ ಅಭಿಪ್ರಾಯವಿದೆ. ಯಡ್ಡಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ಸಂದರ್ಭದಲ್ಲಿ ಗೃಹಮಂತ್ರಿ ಸ್ಥಾನಕ್ಕಾಗಿ ಅನೇಕ ಶಾಸಕರು ಭಾರೀ ಲಾಬಿ ನಡೆಸಿದ್ದರು. ಆದರೆ ಗೃಹಮಂತ್ರಿ ಸ್ಥಾನವನ್ನು ಪಕ್ಕಾ ಆರೆಸ್ಸೆಸ್ ಅನುಯಾಯಿಯಾದ ಆಚಾರ್ಯಗೆ ನೀಡಬೇಕೆಂದು ಸ್ವತಃ ಅಡ್ವಾಣಿಯವರೇ ಯಡ್ಡಿಗೆ ಆದೇಶಿಸಿದ್ದರು.

ರಾಜ್ಯದ ಜನರ ಪಾಲಿಗೆ ಈ ಆಚಾರ್ಯ ನಾಲಾಯಕ್ ಎಂದು ಸಾಬೀತಾಗಿರಬಹುದು. ಆದರೆ ಈಗ ಹೈಕಮಾಂಡಿನ ಕ್ಯಾಂಡಿಡೇಟ್ ಆಗಿರುವುದರಿಂದಲೇ ಉಡುಪಿ ಶಾಸಕ ರಘುಪತಿ ಭಟ್ಟರ ಪತ್ನಿ ಪದ್ಮಪ್ರಿಯಳ ಆತ್ಮಹತ್ಯೆ, ಬೆಂಗಳೂರಿನಲ್ಲಿ ಬಾಂಬ್ ಸ್ಫೋಟ, ಮಂಗಳೂರು ಪಬ್‌ನಲ್ಲಿ ಹುಡುಗಿಯರ ಮೇಲೆ ದಾಳಿ, ರಾಜ್ಯದ ವಿವಿಧೆಡೆ ಚರ್ಚ್‌ಗಳ ನಾಶದಂತಹ ಆಘಾತಕಾರಿ ಪ್ರಕರಣಗಳು ನಡೆದಿದ್ದರೂ ಯಾರೂ ಈ ಆಚಾರ್ಯರನ್ನು ಗೃಹ ಮಂತ್ರಿ ಸ್ಥಾನದಿಂದ ಅಲ್ಲಾಡಿಸಲು ಸಾಧ್ಯವಾಗಿಲ್ಲ.

ಒಂದೊಮ್ಮೆ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಮ್ಯಾಜಿಕ್ ಸಂಖ್ಯೆಯಾದ 18ನ್ನು ತಲುಪದೆ ಯಡಿಯೂರಪ್ಪ ಪದತ್ಯಾಗ ಮಾಡಬೇಕಾದ ಅನಿವಾರ್ಯ ಸಂದರ್ಭ ಸೃಷ್ಟಿಯಾದಲ್ಲಿ, ಹೈಕಮಾಂಡ್‌ಗೆ ಪ್ರಿಯವಾದ ಈ ನಿಷ್ಪ್ರಯೋಜಕ ಆಚಾರ್ಯನನ್ನು ಅತ್ಯುನ್ನತ ಸ್ಥಾನಕ್ಕೇರಿಸಲೂ ಅನಂತ್‌ಕುಮಾರ್ ಗುಂಪು ಕಾರ್ಯನಿರತವಾಗಿದೆ.



ಅವರ ಪ್ರಕಾರ ಅದಕ್ಕೆ ಒಂದು ತರ್ಕವೂ ಇದೆ. ಅದೇನೆಂದರೆ ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷ ಮೊದಲ ಬಾರಿಗೆ 'ಅಧಿಕಾರ ಪಡೆದದ್ದು' ಆಚಾರ್ಯರ ನೇತೃತ್ವದಲ್ಲಿ ಉಡುಪಿ ನಗರಸಭೆಯನ್ನು ತನ್ನ ಪಾಲಾಗಿಸಿಕೊಂಡಾಗ. ಆದ್ದರಿಂದ ಅವರು ಯಡ್ಡಿಗಿಂತಲೂ 'ಹಿರಿಯರು'! ಬಿಡಿ, ಬಿಜೆಪಿ ಎಂಬ ಮನು ಸಂಸ್ಕೃತಿಯ ಪಕ್ಷದಲ್ಲಿ ಜನಿವಾರಿಯೊಬ್ಬನಿಗೆ ಅಧಿಕಾರ ನೀಡಲು ಎಂತಹ ತರ್ಕವನ್ನಾದರೂ ಉಪಯೋಗಿಸಿಕೊಳ್ಳುತ್ತಾರೆ!

'ಬಂ ಎಂಬ ಬಾಂಬ್!

ಅನಂತು ಸೃಷ್ಟಿಸುತ್ತಿರುವ ಆತಂಕದ ನಡುವೆಯೇ ಯಡ್ಡಿಗೆ ಪ್ರಕಟಗೊಳ್ಳಲಿರುವ ಫಲಿತಾಂಶದಲ್ಲಿ ಬಂಗಾರಪ್ಪ ಎಂಬ 'ಬಾಂಬ್' ಸ್ಫೋಟಗೊಂಡು ತನ್ನ ವಂಶೋದ್ಧಾರದ ರಾಜಕೀಯವನ್ನೇ ಅಂತ್ಯಗೊಳಿಸುವ ಆತಂಕವೂ ಕಾಡುತ್ತಿದೆ.

ತನ್ನ ಪುತ್ರ ರಾಘವೇಂದ್ರನ ಗೆಲುವಿಗೆಂದು ಯಡ್ಡಿ ಶಿವಮೊಗ್ಗೆಯಲ್ಲಿ ಹಣದ ಹೊಳೆಯನ್ನೇ ಹರಿಸಿದ್ದರೂ, ಮದ್ಯದ ಮಳೆಯನ್ನೇ ಸುರಿಸಿದ್ದರೂ ತಾವೇ ಅಲ್ಲಿ ಕಟ್ಟಿಕೊಂಡಿರುವ ವೈರಿಗಳ ಕೃಪೆಯಿಂದ ಸೋಲಿನ ಭೀತಿಯಲ್ಲಿದ್ದಾರೆ. ಇದಕ್ಕೆ ತಕ್ಕಂತೆ ಎಲ್ಲ ಸಮೀಕ್ಷೆಗಳು, ಜಾತಿ ಲೆಕ್ಕಾಚಾರಗಳು, ಕೇಶವಕೃಪಾದ ಚೆಡ್ಡಿ ನಾಯಕರೂ "ಬಂಗಾರಪ್ಪನ ಎದುರು ರಾಘವೇಂದ್ರ ಗೆಲ್ಲುವುದು ಕಷ್ಟ, ಕಷ್ಟ" ಎಂದು ಗೊಣಗುತ್ತಿದ್ದಾರೆ. ಹಾಗೊಮ್ಮೆ ಮಗ ಸೋತರೆ ಅದು ಯಡ್ಡಿ ಸೋತಂತೆಯೇ ಲೆಕ್ಕ. ಯಾಕೆಂದರೆ ಪಕ್ಷದ ಸ್ಥಳೀಯ ನಾಯಕರಿಂದ ಹಿಡಿದು, ರಾಜ್ಯ ಮಟ್ಟದ ನಾಯಕರ ಅಭಿಪ್ರಾಯಗಳನ್ನು ವಿರೋಧಿಸಿದ ಯಡ್ಡಿ ತಮ್ಮ ಮಗನಿಗೇ ಪಕ್ಷದ ಟಿಕೇಟ್ ಸಿಗುವಂತೆ ಮಾಡಿದ್ದರು.


ಮೊದಲೇ ಹೇಳಿದಂತೆ ಯಡ್ಡಿಗೆ ಇದು ಅಗ್ನಿಪರೀಕ್ಷೆ. ಅನಂತಕುಮಾರ್ ಚುನಾವಣೆಯಲ್ಲಿ ಗೆದ್ದರೆ ದೆಲ್ಲಿಯಲ್ಲಿ ತನ್ನ ಮಗ ರಾಘವೇಂದ್ರನಿಗೆ ಕಿರುಕುಳ ನೀಡಬಹುದೆಂಬ ಭಯ ಒಂದೆಡೆ. ಅಕಸ್ಮಾತ್ ಸೋತರೆ ಇಲ್ಲೇ ಇದ್ದು ತನಗೇ ಸಮಸ್ಯೆಯಾಗುವ ಭೀತಿ ಇನ್ನೊಂದೆಡೆ. ತಾನು ಎಷ್ಟೇ ಬೊಂಬಡಾ ಬಜಾಯಿಸಿದರೂ ಈ ಬಾರಿ 18 ಕ್ಷೇತ್ರಗಳಲ್ಲಿ ಗೆಲ್ಲುವುದು ಅಸಾಧ್ಯ ಎಂಬ ಅರಿವು ಮಗದೊಂದೆಡೆ.

ಅದೇನೇ ಆದರೂ, ಫಲಿತಾಂಶಗಳು ಬಂದನಂತರ ರಾಜ್ಯದ ಬಿಜೆಪಿ ಒಳಗಡೆ ಮಾರಾಮಾರಿ ನಡೆಯಲಿದೆ. ಅದು ಪಕ್ಷದ ಹಿರಿಕಿರಿ ಚೆಡ್ಡಿಗಳಿಗೂ ಗೊತ್ತಾಗಿದೆ. ಆದ್ದರಿಂದಲೇ ಆ ಮಾರಾಮಾರಿಯಲ್ಲಿ ಉಪಯೋಗಿಸಲು ಅವರೆಲ್ಲಾ ತಮ್ಮ ತ್ರಿಶೂಲಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ..

● ಸದಾಶಿವ ಶೆಣೈ

ಹಿರಿಯ ಗಾಂಧಿವಾದಿ ಮತ್ತು ಕನ್ನಡ ಲೇಖಕ ಬಿ.ಎಂ. ಇದ್ದಿನಬ್ಬ ಅವರು ಇತ್ತೀಚೆಗೆ ನಿಧನರಾದರು. ಕೊನೆಯ ತನಕ ಕಾಂಗ್ರೆಸ್‌ವಾದಿ ಆಗಿದ್ದ ಅವರು ಮೂರು ಬಾರಿ ಶಾಸಕರಾಗಿಯೂ ಗೆದ್ದಿದ್ದರು. ಆದರ್ಶಗಳು ಇನ್ನೂ ಉಳಿದಿದ್ದ ಕಾಲದಲ್ಲಿ ಹೇಗೆ ಹಣಬಲ ಅಥವಾ ತೋಳ್ಬಲವಿಲ್ಲದೆ ಕೇವಲ ಜನಬಲದಿಂದ ಚುನಾವಣೆಗಳಲ್ಲಿ ಗೆಲ್ಲಬಹುದಿತ್ತು ಎಂಬುದರ ಬಗ್ಗೆ ಇದ್ದಿನಬ್ಬನವರ ನೆನಪುಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಇವತ್ತಿನ ಚುನಾವಣೆಯ ಅಬ್ಬರದಲ್ಲಿ ಈ ಲೇಖನ ಪ್ರಸ್ತುತವೆನಿಸುತ್ತದೆ.

ಇದು ಇದ್ದಿನಬ್ಬನವರಿಗೆ ನಮ್ಮ ಶ್ರದ್ಧಾಂಜಲಿ.



ನಾನು ಗೆದ್ದ ಚುನಾವಣೆ

ನಿರೂಪಣೆ: ಬಿ.ಎಂ.ಬಶೀರ್

ನನ್ನ ಬದುಕಿನಲ್ಲಿ ನಾನು ನಾಲ್ಕು ಚುನಾವಣೆಗಳನ್ನು ಎದುರಿಸಿದ್ದೇನೆ. ಮೂರೂ ಚುನಾವಣೆಗಳಲ್ಲಿ ನಾನು ನನ್ನ ಕಾಂಗ್ರೆಸ್ ನಿಷ್ಠೆ ಆದರ್ಶ ಮತ್ತು ಕನ್ನಡ ಪ್ರೇಮವನ್ನು ಒರೆಗೆ ಹಚ್ಚಿದ್ದೇನೆ. ಮತ್ತು ಅದರ ಅಸಲಿಯತ್ತಿನ ಬಲದಿಂದಲೇ ಗೆದ್ದಿದ್ದೇನೆ. ಈಗ ಚುನಾವಣೆಯಲ್ಲಿ ಗೆಲ್ಲುವುದು ಬಿಡಿ, ಟಿಕೆಟ್‌ಗಾಗಿ ನಡೆಯುವ ಲಾಬಿಯನ್ನು ಗಮನಿಸಿದರೆ, ನನಗೆ ನಾನು ಗೆದ್ದ ಚುನಾವಣೆಯ ಕುರಿತಂತೆ ವಿಸ್ಮಯವಾಗುತ್ತದೆ.

1967ರಲ್ಲಿ ಚುನಾವಣೆಯಲ್ಲಿ ನಿಲ್ಲುವಾಗ ನನ್ನ ಕೈಯಲ್ಲಿ ಹಣವಿದ್ದಿರಲಿಲ್ಲ ಆದರೂ ಆ ಚುನಾವಣೆಯನ್ನು ಅತ್ಯಂತ ಸುಲಭವಾಗಿ ಗೆದ್ದೆ. 1962, 67ರಲ್ಲಿ ಎರಡು ಬಾರಿ ಸ್ಪರ್ಧಿಸಿದಾಗಲೂ ನನ್ನ ಬಳಿ ಠೇವಣಿ ಕಟ್ಟಲು ಹಣವಿರಲಿಲ್ಲ. 1962ರಲ್ಲಿ ಆ ಕಾರಣಕ್ಕಾಗಿಯೇ ನಾನು ಚುನಾವಣೆಗೆ ನಿಲ್ಲಲು ಹಿಂದೇಟು ಹಾಕಿದಾಗ ನನ್ನ ಠೇವಣಿಯನ್ನು ಕಟ್ಟಿದವರು ಪೈಲೂರು ಲಕ್ಷ್ಮಣರಾಯರು. ಮೊದಲ ಬಾರಿಗೆ ಚುನಾವಣೆಗೆ ನಿಂತು ಸುಮಾರು 800 ಮತಗಳ ಅಂತರದಲ್ಲಿ ನಾನು ಸೋತೆ. ಆದರೆ 1967ರಲ್ಲಿ ಟಿಕೆಟ್ ಮತ್ತೆ ಅದಾಗಿಯೇ ಹುಡುಕಿಕೊಂಡು ಬಂತು. ನಿಜಲಿಂಗಪ್ಪ ಮತ್ತೆ ಚುನಾವಣೆಗೆ ನಿಲ್ಲಲು ಒತ್ತಾಯಿಸಿದರು. ಆಗಲೂ ನನ್ನ ಠೇವಣಿ ಹಣವನ್ನು ಕಟ್ಟಿದವರು ಪೈಲೂರು ಲಕ್ಷ್ಮಣರಾಯರೇ. 8000 ಮತಗಳ ಅಂತರದಲ್ಲಿ ಗೆದ್ದೆ. ಆಗ ಕಾಂಗ್ರೆಸ್‌ನ ಆದರ್ಶಗಳಿಗೆ ಬೆಲೆಯಿತ್ತು, ಅದೇ ನನ್ನನ್ನು ಗೆಲ್ಲಿಸಿತು. ಆದರೆ 1985ರಲ್ಲಿ ಚುನಾವಣೆಗೆ ಸ್ಪರ್ಧಿಸುವಾಗ ಇದ್ದ ಸ್ಥಿತಿ ಅದಕ್ಕಿಂತ ಭಿನ್ನವಾದದ್ದು. ನಾನು ಚುನಾವಣೆಗೆ ನಿಲ್ಲುವ ಉದ್ದೇಶವನ್ನೇ ಹೊಂದಿರಲಿಲ್ಲ. 70ರ ದಶಕದ ರಾಜಕೀಯ ಗೊಂದಲಗಳು ನನ್ನನ್ನು ಕಂಗೆಡಿಸಿತು. ಕಾಂಗ್ರೆಸ್ ನನ್ನ ಪಾಲಿಗೆ ಒಂದು ಪಕ್ಷ ಮಾತ್ರವಾಗಿರಲಿಲ್ಲ. ನಾನು ಅಧಿಕಾರದ ಆಸೆಯಿಂದ ಅಥವಾ ನಾಯಕನಾಗುವ ಆಸೆಯಿಂದ ಕಾಂಗ್ರೆಸ್ ಪ್ರವೇಶಿಸಿದ್ದಲ್ಲ. ನನ್ನ ಯೌವ್ವನದ ಆದರ್ಶ, ಕನಸುಗಳಿಗೆ ಕಾಂಗ್ರೆಸ್ ಒಂದು ವೇದಿಕೆಯಾಗಿತ್ತು. ಕಾಂಗ್ರೆಸ್ ಎನ್ನುವಾಗ ನನ್ನ ಕಣ್ಣಮುಂದಿದ್ದದ್ದು ಸ್ವಾತಂತ್ರ್ಯ ಹೋರಾಟ ಮತ್ತು ಅದರ ಜಾತ್ಯತೀತ ಮೌಲ್ಯ. ನನಗೆ ಆಗ ಕಾಂಗ್ರೆಸ್‌ಗಿಂತ ಇನ್ನೊಂದು ಉತ್ತಮ ಸಂಘಟನೆ ಇದೆಯೆಂದು ಅನ್ನಿಸಿಯೇ ಇರಲಿಲ್ಲ. ಈಗಲೂ ನನ್ನ ನಿಲುವು ಅದೇ. ಸಮಯಸಾಧಕ ನಾಯಕರಿಂದಾಗಿ ಕಾಂಗ್ರೆಸ್‌ನ ಹೆಸರು ಕೆಟ್ಟಿದೆಯೇ ಹೊರತು, ಅದಕ್ಕಾಗಿ ಕಾಂಗ್ರೆಸ್ ತತ್ವವನ್ನು ಹೊಣೆ ಮಾಡುವಂತಿಲ್ಲ.

70ರ ದಶಕದಲ್ಲಿ ಸಂಸ್ಥಾ ಕಾಂಗ್ರೆಸ್ ಮತ್ತು ಇಂದಿರಾ ಕಾಂಗ್ರೆಸ್ ಎಂದು ಹೋಳಾದಾಗ ನನಗೆ ಅತ್ಯಂತ ದುಃಖವಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ಭ್ರಮನಿರಸನವಾಯಿತು. ನಾನು ನನ್ನ ಯೌವ್ವನದ ಕಾಲದಿಂದ ಕಟ್ಟಿಕೊಂಡು ಬಂದ ಆದರ್ಶಗಳಿಗೆ ಬಿದ್ದ ಪೆಟ್ಟು ಅದು. ಕಾಂಗ್ರೆಸ್ ಜತೆಗೆ ನಾನು ಎಂತಹ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಿಕೊಂಡು ಬಂದಿದ್ದೆ ಎಂದರೆ, ನನಗೆ ನನ್ನ ಸಾರ್ವಜನಿಕ ಜೀವನವನ್ನು ಕಾಂಗ್ರೆಸ್ ಹೊರತುಪಡಿಸಿ ನೋಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಏಕಾಏಕಿ ಸಂಸ್ಥಾ ಕಾಂಗ್ರೆಸ್–ಇಂದಿರಾ ಕಾಂಗ್ರೆಸ್ ಎಂದು ನನ್ನ ಕಣ್ಮುಂದೆಯೇ ಒಡೆದಾಗ ನಾನು ಯಾರ ಪರ ನಿಲ್ಲಬೇಕು ಎನ್ನುವುದು ನನ್ನನ್ನು ಅತೀವವಾಗಿ ಕಾಡಿತು. ಕಾಂಗ್ರೆಸ್ ನಾಯಕರಾಗಿ ನಿಜಲಿಂಗಪ್ಪರನ್ನು ನಾನು ತುಂಬಾ ಇಷ್ಟಪಟ್ಟಿದ್ದೆ. ಆದರೆ ದೇವರಾಜ ಅರಸು ಇಂದಿರಾ ಗಾಂಧಿಯ ಜತೆಗಿದ್ದರು. ನಿಜಲಿಂಗಪ್ಪ ನನ್ನನ್ನು ನಿಜವಾದ ಕಾಂಗ್ರೆಸ್ಸಿಗನೆಂಬ ಕಾರಣಕ್ಕಾಗಿಯೇ ಗುರುತಿಸಿ ಎರಡು ಬಾರಿ ಟಿಕೆಟ್ ನೀಡಿದ್ದರು. ನಾನಾಗ ಬಾಡಿಗೆ ಮನೆಯಲ್ಲಿದ್ದೆ. ಕೈಯಲ್ಲಿ ಹಣವೂ ಇದ್ದಿರಲಿಲ್ಲ, ಹಿಂಬಾಲಕರಂತೂ ಇದ್ದಿರಲೇ ಇಲ್ಲ. ಆದರೂ ನನ್ನನ್ನು ಗುರುತಿಸಿ ಎರಡು ಬಾರಿ ಟಿಕೆಟ್ ನೀಡಿದ್ದರು. ಅವರ ಸರಳತೆ, ಕಾಂಗ್ರೆಸ್ ಕುರಿತ ಬದ್ಧತೆ ನನಗೆ ಇಷ್ಟವಾಗಿತ್ತು. ಈ ಕಾರಣದಿಂದ ಆರಂಭದಲ್ಲಿ ನಿಜಲಿಂಗಪ್ಪ ಜತೆಗೆ ನಿಂತೆ. ಬಳಿಕ ಇಂದಿರಾ ಗಾಂಧಿಯ ಕಾಂಗ್ರೆಸ್ ಜತೆಗೆ ಸೇರಿದೆ. ಕಾಂಗ್ರೆಸ್ ಇಬ್ಭಾಗವಾಗಿ, ಛಿದ್ರವಾಗುವುದು ನನಗೆ ಇಷ್ಟವಿಲ್ಲದ ಸಂಗತಿಯಾಗಿತ್ತು.

ಕಾಂಗ್ರೆಸ್ ಒಡೆದ ಬೆನ್ನಿಗೇ ಕಾಂಗ್ರೆಸ್‌ನೊಳಗೆ ಚೇಲಾಗಳು, ಹಿಂಬಾಲಕರು, ಭಟ್ಟಂಗಿಗಳ ಸಂಖ್ಯೆ ಹೆಚ್ಚಿತು. ಯಾರು ಒಳ್ಳೆಯ ಕಾಂಗ್ರೆಸ್ಸಿಗ ಎನ್ನುವುದಕ್ಕಿಂತ ಇಲ್ಲಿ ಚಮಚಾಗಿರಿಯೇ ಮುಖ್ಯವಾಯಿತು. ಹಣ, ಗೂಂಡಾ ಪಡೆ ಪ್ರಾಮುಖ್ಯವನ್ನು ಪಡೆಯಿತು. ನಾಯಕರು ತಮ್ಮ ತಮ್ಮ ಅಭ್ಯರ್ಥಿಗಳನ್ನು ಗುರುತಿಸುವಾಗ ಇದನ್ನು ಮುಖ್ಯವಾಗಿ ಪರಿಗಣಿಸಲಾರಂಭಿಸಿದರು. 1967ರಲ್ಲಿ ಶಾಸಕನಾಗಿದ್ದರೂ ನನ್ನ ಬಳಿ ಹಣವೂ ಇದ್ದಿರಲಿಲ್ಲ, ಗೂಂಡಾ ಪಡೆಯೂ ಇದ್ದಿರಲಿಲ್ಲ. ನಾನು ಶಾಸಕನಾಗಿದ್ದ ಹೊತ್ತಿನಲ್ಲಿ ಕ್ಷೇತ್ರದ ಕೆಲವು ಕಾಳಸಂತೆಕೋರರ ವೈರವನ್ನೂ ಕಟ್ಟಿಕೊಂಡಿದ್ದೆ. ಕಾಂಗ್ರೆಸ್‌ನೊಳಗಿನ ಬದಲಾವಣೆ ಅವರಿಗೆ ಹೆಚ್ಚು ಅನುಕೂಲ ಮಾಡಿಕೊಟ್ಟಿತು. ನನ್ನ ವಿರುದ್ಧ ಕತ್ತಿ ಮಸೆಯಲು ಸಿದ್ಧರಾಗಿ ನಿಂತಿದ್ದರು. ವಾತಾವರಣ ಎಲ್ಲ ರೀತಿಯಲ್ಲೂ ನನ್ನ ವಿರುದ್ಧವಾಗಿತ್ತು. ಇಂತಹ ಹೊತ್ತಿನಲ್ಲಿ ಟಿಕೆಟ್‌ಗಾಗಿ ಲಾಬಿ ನಡೆಸುವುದಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ.

ಈ ಗೊಂದಲದ ಸಂದರ್ಭದಲ್ಲಿ ನನ್ನ ಜತೆ ನಿಂತು ನನಗೆ ಮಾರ್ಗದರ್ಶಿಯಾದವಳು ನನ್ನ ಪತ್ನಿ ಹಲೀಮಾ. "ಒಮ್ಮೆ ಚುನಾವಣೆಗೆ ನಿಂತಿರಿ. ಗೆದ್ದಿರಿ. ಸಾಕು. ನೀವಾಗಿ ಮತ್ತೆ ಮುಂದೆ ಹೋಗಬೇಡಿ" ಎಂದು ಸ್ಪಷ್ಟವಾಗಿ ನುಡಿದಳು. ಈ ಮಾತು ನನ್ನ ರಾಜಕೀಯ ಬದುಕಿಗೆ ದಾರಿದೀಪವಾಯಿತು. ಕಾಂಗ್ರೆಸ್ ಪಕ್ಷದ ಆದರ್ಶ, ಇತಿಹಾಸ ಯಾವುದರ ಮೇಲೆ ಕುರಿತೂ ಅರಿವಿಲ್ಲದ ಜನ ಬೆಂಗಳೂರಿನಲ್ಲಿ ಟಿಕೆಟ್‌ಗಾಗಿ ಲಾಬಿ ನಡೆಸುತ್ತಿದ್ದಾಗ ನಾನು, ಶಾಸಕರ ಭವನದಿಂದ ಗಂಟುಮೂಟೆಯೊಂದಿಗೆ ಉಳ್ಳಾಲದ ಕೋಡಿಯಲ್ಲಿರುವ ನನ್ನ ಬಾಡಿಗೆಮನೆಗೆ ಮರಳಿದೆ. ಹಾಗೆ ಮರಳಿದವನು ಸುಮಾರು 15 ವರ್ಷಗಳ ಕಾಲ ವಿಧಾನ ಸೌಧದೆಡೆಗೆ ತಿರುಗಿ ನೋಡಲಿಲ್ಲ. ಆದರೆ ಇತರ ಕಾಂಗ್ರೆಸ್ ಅಭ್ಯರ್ಥಿಗಳಿಗಾಗಿ ಸಾಮಾನ್ಯ ಕಾರ್ಯಕರ್ತನಂತೆ ದುಡಿದಿದ್ದೇನೆ. ವೇದಿಕೆ ಹತ್ತಿ ನೂರಾರು ಭಾಷಣಗಳನ್ನು ಮಾಡಿದ್ದೇನೆ.

ನನ್ನ ಬಳಿಕ ಉಳ್ಳಾಲ ಕ್ಷೇತ್ರದ ಶಾಸಕರಾಗಿ ಎರಡು ಬಾರಿ ಉಪ್ಪಳ ತುರ್ಕಿ ಫರೀದ್ ಆಯ್ಕೆಯಾದರು. ಇವರಿಗಾಗಿ ನಾನು 30ಕ್ಕೂ ಅಧಿಕ ವೇದಿಕೆಗಳಲ್ಲಿ ಭಾಷಣ ಮಾಡಿದ್ದೆ. ಆ ಸಂದರ್ಭದಲ್ಲಿ ನನ್ನ ಮುಂದಿದ್ದದ್ದು ಕಾಂಗ್ರೆಸ್ ಮಾತ್ರ. ದುರಂತವೆಂದರೆ, 78ರ ಬಳಿಕ 80ರ ದಶಕದಲ್ಲಿ ಯು.ಟಿ. ಫರೀದ್ ಬದಲಿಗೆ ಮಸೂದ್‌ಗೆ ಕಾಂಗ್ರೆಸ್ ಟಿಕೆಟ್ ನೀಡಿದಾಗ ಇದೇ ಯು.ಟಿ. ಫರೀದರು ಪಕ್ಷದ ಕಚೇರಿಯ ಸಮೀಪವೂ ಸುಳಿಯಲಿಲ್ಲ. ಅಷ್ಟೇ ಅಲ್ಲ ಒಳಗೊಳಗೆ ಉಳ್ಳಾಲದ ಮುಸ್ಲಿಂ ಲೀಗ್ ಪರವಾಗಿ ಕೆಲಸ ಮಾಡಿದರು. ಉಳ್ಳಾಲದಲ್ಲಿ ಮುಸ್ಲಿಂ ಲೀಗ್ 13 ಸಾವಿರ ಮತಗಳನ್ನು ಪಡೆದಿದ್ದರೆ ಅದಕ್ಕೆ ಕಾರಣ ಲೀಗ್ ಅಭ್ಯರ್ಥಿ ಮುಹಮ್ಮದಾಲಿ ಅಲ್ಲ. ಎರಡು ಬಾರಿ ಕಾಂಗ್ರೆಸ್ ಶಾಸಕರಾಗಿದ್ದ ಯು.ಟಿ. ಫರೀದ್. ಕಾಂಗ್ರೆಸ್‌ನೊಳಗಿನ ದ್ರೋಹಕ್ಕೆ ಮಸೂದ್ ಹೀನಾಯ ಸೋಲನ್ನನುಭವಿಸಬೇಕಾಯಿತು.

ರಾಜ್ಯದಲ್ಲಿ ಆಗ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಆದರೆ ರಾಮಕೃಷ್ಣ ಹೆಗಡೆ ಸರ್ಕಾರ ಎರಡೇ ವರ್ಷಗಳಲ್ಲಿ ಕುಸಿದ ಕಾರಣದಿಂದ ಮತ್ತೆ ಚುನಾವಣೆ ಎದುರಾಯಿತು.

ಅದು ರಾಜೀವ್ ಗಾಂಧಿಯ ಕಾಲ. 1985ರಲ್ಲಿ ಚುನಾವಣೆ ಘೋಷಣೆಯಾದದ್ದೇ, ಉಳ್ಳಾಲದಲ್ಲಿ ಟಿಕೆಟ್‌ಗಾಗಿ 'ಕಾಂಗ್ರೆಸ್ ನಾಯಕ'ರೆನಿಸಿಕೊಂಡ ವರು ಮತ್ತೆ ಲಾಬಿಗೆ ಸಿದ್ಧರಾದರು. ನಾನು ಮಾತ್ರ ಈ ಬಾರಿಯೂ ಈ ಸ್ಪರ್ಧೆಯಿಂದ ದೂರವುಳಿದಿದ್ದೆ.

ಉಳ್ಳಾಲದಲ್ಲಿ ಯಾರಿಗೆ ಟಿಕೆಟ್ ಸಿಗಬಹುದು? ಎನ್ನುವುದು ನನಗೂ ಕುತೂಹಲಕರ ವಿಷಯವಾಗಿತ್ತು. ಎಲ್ಲರಂತೆ ನಾನು ನನ್ನ ಮನೆಯಲ್ಲಿ ಮಕ್ಕಳ ಜೊತೆಗೆ ಆ ಕುರಿತು ಚರ್ಚಿಸುತ್ತಿದ್ದೆ. ಮಸೂದ್, ಫರೀದ್, ಬಿ.ಎ.ಮೊಯ್ದಿನ್, ಎಂ.ಬಿ. ಅಬ್ದುರ್ರಹ್ಮಾನ್ ಹೀಗೆ ಹೆಸರುಗಳು ಒಂದೊಂದಾಗಿ ಹೊರಬೀಳುತ್ತಿದ್ದವು. ಈ ಹಿಂದಿನ ಅಭ್ಯರ್ಥಿ ಮಸೂದ್ ಆಗಿರುವುದರಿಂದ, ಅವರಿಗೆ ಮತ್ತೆ ಟಿಕೆಟ್ ಸಿಗಬಹುದು ಎನ್ನುವುದು ಸಾರ್ವಜನಿಕ ವಲಯದ ಅಭಿಪ್ರಾಯವಾಗಿತ್ತು. ಆದರೆ ಆ ಸಂದರ್ಭದಲ್ಲಿಯೇ ನಡೆದ ಒಂದು ಘಟನೆ ಮಸೂದ್‌ರ ವರ್ಚಸ್ಸನ್ನು ಕಳಾಹೀನಗೊಳಿಸಿತು.

ಕರಾವಳಿಯಲ್ಲಿ ಆಗ ಮಹಮ್ಮದ್ ಕಮಾಲ್‌ರ ಹೆಸರಿಗೆ ವಿಶಿಷ್ಟ ಶಕ್ತಿಯಿತ್ತು. ಮಿಂಚಿನ ವ್ಯಕ್ತಿತ್ವ ಅವರದು. ಅತ್ಯಂತ ಚಟುವಟಿಕೆಯ ನಿರ್ಭೀತ ಮುಸ್ಲಿಂ ನಾಯಕರು ಇವರು. 85ರ ಹೊತ್ತಿಗೆ ಮಸೂದ್ ಅವರ ಸಂಬಂಧಿಕರ ಒಂದು ಭಾರಿ ಹೋಟೆಲ್ ಉದ್ಘಾಟನೆ ಮಂಗಳೂರಿನಲ್ಲಿ ನಡೆಯಿತು. ಈ ಸಮಾರಂಭದ ಅಧ್ಯಕ್ಷರಿತನ, ಇಲ್ಲಿ ಭಾಗವಹಿಸಿದ ನಾಯಕರು, ಈ ಹೋಟೆಲ್ ಹಿಂದಿರುವ ಕಪ್ಪು ಹಣ ಇತ್ಯಾದಿಗಳ ಕುರಿತಂತೆ ದಾಖಲೆಗಳನ್ನು, ಫೋಟೋಗಳನ್ನು ಸಿದ್ಧಪಡಿಸಿದ ಮಹಮ್ಮದ್ ಕಮಾಲ್ ಇದನ್ನು ಹೈಕಮಾಂಡಿಗೆ ಕಳುಹಿಸಿದರಂತೆ. ಇದೊಂದು ರೀತಿಯಲ್ಲಿ ಮಂಗಳೂರು ರಾಜಕೀಯದ 'ಸೀಡಿ' ಎಂದೇ ಕರೆಯಬಹುದು. ಆ 'ಸೀಡಿ'ಯಲ್ಲಿ ಮಸೂದ್ ಅವರ ಮೇಲೆ ಆರೋಪಗಳ ಸುರಿಮಳೆಯೇ ಇತ್ತು. ಕಪ್ಪುಹಣ, ಕಾಳಸಂತೆಕೋರರ ಸಂಪರ್ಕ ಇತ್ಯಾದಿಗಳನ್ನು ಅದರಲ್ಲಿ ಉಲ್ಲೇಖಿಸಲಾಗಿತ್ತು.


1985ರ ಆ ಒಂದು ಶುಕ್ರವಾರ ನನಗಿನ್ನೂ ನೆನಪಿದೆ. ನಾನು ಸ್ನಾನ ಮಾಡಿ ಶುಕ್ರವಾರದ ನಮಾಜಿಗೆಂದು ಮಸೀದಿಗೆ ತೆರಳಲು ಅಣಿಯಾಗುತ್ತಿದ್ದೆ. ಅಂದು ನಾಮಪತ್ರ ಸಲ್ಲಿಸಲು ಕಡೆಯ ದಿನ. ಇನ್ನೇನು ಮಸೀದಿಗೆ ತೆರಳಬೇಕು ಎನ್ನುವಷ್ಟರಲ್ಲಿ ದಿಲ್ಲಿಯಿಂದ ಜನಾರ್ದನ ಪೂಜಾರಿಯವರಿಂದ ಫೋನ್ ಬಂತು. "ಉಳ್ಳಾಲ ಕ್ಷೇತ್ರದಲ್ಲಿ ಸ್ಪರ್ಧಿಸಲು ಟಿಕೆಟ್ ನಿಮಗೆ ಸಿಕ್ಕಿದೆ. ತಕ್ಷಣ ಹೋಗಿ ನಾಮಪತ್ರ ಸಲ್ಲಿಸಿ."

ನನ್ನ ಫೋನ್ ಹಿಡಿದ ಕೈ ನಡುಗಿತು. ನಾನು ನಿರೀಕ್ಷಿಸಿರಲೇ ಇಲ್ಲ. 1967ರಲ್ಲಿ ಟಿಕೆಟ್ ಹೇಗೆ ನನ್ನನ್ನು ಹುಡುಕಿಕೊಂಡು ಬಂತೋ, ಹಾಗೆಯೇ ಇದೀಗ ಮತ್ತೊಮ್ಮೆ ನನ್ನನ್ನು ಹುಡುಕಿಕೊಂಡು ಬಂದಿದೆ. ಆದರೆ ಇದಕ್ಕೆ ತಕ್ಷಣ ಹೇಗೆ ಪ್ರತಿಕ್ರಿಯಿಸುವುದು ಎನ್ನುವುದು ನನಗೆ ತಿಳಿಯಲಿಲ್ಲ. ಯಾಕೆಂದರೆ ನನ್ನ ಕೈಯಲ್ಲಿ ಹಣವಿರಲಿಲ್ಲ. ನನಗೆ ಹಿಂಬಾಲಕರೂ ಇದ್ದಿರಲಿಲ್ಲ. 'ಆಗಲಿ' ಎಂದು ಹೇಳಿ ಫೋನ್ ಇಟ್ಟೆ. ಮುಂದೇನು ಎನ್ನುವುದು ಅರ್ಥವಾಗದೆ, ತುಸು ಹೊತ್ತು ಹಾಗೆಯೇ ಕುಳಿತಿದ್ದೆ. ಬಳಿಕ ನನ್ನ ಪತ್ನಿಯನ್ನು ಕರೆದೆ. ಅವಳಿಗೆ ವಿಷಯ ವಿವರಿಸಿ "ಏನು ಮಾಡಲಿ?" ಎಂದು ಕೇಳಿದೆ. ಯಾಕೆಂದರೆ ನನ್ನ ರಾಜಕೀಯದಿಂದ ಆಗುವ ದುಷ್ಪರಿಣಾಮಗಳನ್ನು ಮೊದಲು ಅನುಭವಿಸಿದವಳು ಅವಳು. ಆದುದರಿಂದ ಆಕೆಯ ಒಪ್ಪಿಗೆ ಅತ್ಯಗತ್ಯವಾಗಿತ್ತು. "ತಾನಾಗಿಯೇ ಬಂದಿದೆ ಮುಂದುವರೆಯಿರಿ" ಎಂದಳು. ಮನಸ್ಸಿಗೇನೋ ಒಂದು ಧೈರ್ಯ. ಸರಿ ಎಂದು ಹೊರಟೆ. ಮನೆಯ ಹತ್ತಿರದಲ್ಲೇ ಮಾಸ್ತಿಕಟ್ಟೆ ಬಸ್‌ಸ್ಟಾಪ್. ನಾಮಪತ್ರ ಸಲ್ಲಿಸುವುದೆಂದರೆ ಸುಲಭವೇ? ಅರ್ಜಿ ಬರೆಯಬೇಕು. ಅದಕ್ಕೆ ಸೂಚನೆ, ಅನುಮೋದನೆಗಳು ಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಇಂದು ಸಂಜೆಯೇ ಎಲ್ಲ ಮುಗಿಯಬೇಕು.


ನಾನು ಮಾಸ್ತಿಕಟ್ಟೆಯಲ್ಲಿ ಬಸ್ಸು ಹತ್ತಿ ನೇರ ಕಾಂಗ್ರೆಸ್ ಕಚೇರಿಗೆ ಹೋದೆ. ಅಲ್ಲಿ ನೋಡಿದರೆ ಯಾರೂ ಇದ್ದಿರಲಿಲ್ಲ. ಕಾಂಗ್ರೆಸ್ ಕಾರ್ಯಕರ್ತರೆಂದು ಕರೆಸಿಕೊಂಡವರೆಲ್ಲ ಮಸೂದ್ ಜತೆಗಿದ್ದರು. ಆಗ ನನಗೆ ಗೊತ್ತಾಯಿತು. ಜನಾರ್ದನ ಪೂಜಾರಿ ನನಗೆ ಮಾತ್ರವಲ್ಲ, ಮಸೂದ್‌ಗೂ ದೂರವಾಣಿ ಮೂಲಕ 'ನಾಮಪತ್ರ' ಸಲ್ಲಿಸಲು ಸೂಚಿಸಿದ್ದಾರೆ ಎನ್ನುವುದು. ಉಳ್ಳಾಲದ ಕಾಂಗ್ರೆಸ್ ಮಸೂದ್ ಹಿಂದೆ ತಿರುಗಾಡುತ್ತಿತ್ತು. ಮಸೂದ್ ಅವರೇ ಅಭ್ಯರ್ಥಿ ಎಂದು ಉಳ್ಳಾಲದಾದ್ಯಂತ ಆದಾಗಲೇ ಪ್ರಚಾರ ಮಾಡಿಯಾಗಿತ್ತು. ಕಾಂಗ್ರೆಸ್‌ಗಾಗಿ ತಳಮಟ್ಟದಿಂದ ಕೆಲಸಮಾಡಿ, ಓಡಾಡಿದ ನಾನು ಕಚೇರಿಯಲ್ಲಿ ಒಬ್ಬಂಟಿಯಾಗಿ ಕುಳಿತಿದ್ದೆ. ನನ್ನ ದೇವರನ್ನು ಬಿಟ್ಟರೆ ನನ್ನೊಂದಿಗೆ ಅಲ್ಲಿ ಯಾರೂ ಇರಲಿಲ್ಲ. ಕನಿಷ್ಠ ಒಬ್ಬ ಸೂಚಕನಾದರೂ ಬೇಕಲ್ಲವೆ? ಆಗ ನನ್ನ ಕಣ್ಣಿಗೆ ಬಿದ್ದದ್ದು ಹರೇಕಲ ಬೇಬಿ ಶೆಟ್ಟಿ ಎಂಬ ಕಾಂಗ್ರೆಸ್ ಕಾರ್ಯಕರ್ತ. ತಕ್ಷಣ ಆತನನ್ನು ಕೂಗಿ ಕರೆದೆ. ನನ್ನ ಪರವಾಗಿ ಸೂಚಕನಾಗಬೇಕು ಎಂದು ಹೇಳಿದೆ. ಅವನು ಯಾವುದೋ ತುರ್ತು ಕೆಲಸದ ಮೇಲಿದ್ದ. ನನ್ನ ಕೋರಿಕೆಗೆ ಮಣಿದು ನಿಂತ. ಆದರೆ ನಾನು ಮಸೀದಿಗೆ ಹೋಗಿ ನಮಾಜ್ ಮುಗಿಸಿ ಬರುವಷ್ಟರಲ್ಲಿ ಆತ ತಪ್ಪಿಸಿಕೊಂಡಿದ್ದ.


ಆದರೆ ಮಸೀದಿಯಿಂದ ಕಚೇರಿಗೆ ತಲುಪಿದಾಗ, ನನ್ನ ಅದೃಷ್ಟಕ್ಕೆ ಮಸೂದರ ಹಿಂದೆ ಓಡಾಡಿಕೊಂಡಿದ್ದ ಬಾಬ್ಬಿಸ್ ಡಿಸೋಜ ಎಂಬಾತ ಅಲ್ಲಿಗೆ ಬಂದಿದ್ದ. ಆತ ನನ್ನ ಸೂಚಕನಾಗಲು ಒಪ್ಪಿದ. ವಿಶೇಷವೆಂದರೆ ಆತನಿಗೆ ಅರ್ಜಿಯ ನಮೂನೆ ಸಂಪೂರ್ಣ ಬಾಯಿಪಾಠವಾಗಿತ್ತು. ಆತನೇ ಅರ್ಜಿ ತುಂಬಿಸಲು ನನಗೆ ಮಾರ್ಗದರ್ಶಕನಾಗಿದ್ದ. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಕೆ.ಪಿ. ಅಬ್ದುಲ್ಲಾ ಅಲ್ಲಿಗೆ ಬಂದರು. ಹೀಗೆ ನನ್ನ ಅರ್ಜಿಗಳಿಗೆ ಸೂಚಕರು ಸಿಕ್ಕಿದರು. ಇನ್ನು ನಾಮಪತ್ರಗಳನ್ನು ತಾಲ್ಲೂಕು ಕಚೇರಿಗೆ ಸಲ್ಲಿಸಬೇಕು. ತಾಲ್ಲೂಕು ಆಫೀಸಿಗೆ ಒಬ್ಬನೇ ಹೊರಟೆ. ಅಲ್ಲಿ ನೋಡಿದರೆ ಮಸೂದ್ ಬಣ ಒಳ-ಹೊರಗೆ ನೆರೆದಿತ್ತು. ನಾನು ಕಚೇರಿಗೆ ಕಾಲಿಟ್ಟಾಗ ಎಲ್ಲರೂ ನನ್ನನ್ನು ಕೆಕ್ಕರಿಸಿ ನೋಡತೊಡಗಿದರು. ಯಾರೂ ಮಾತನಾಡುತ್ತಿಲ್ಲ. ಅವರಲ್ಲಿ ಹೆಚ್ಚಿನ ನಾಯಕರು ನಾನು ಸಿದ್ಧಪಡಿಸಿದ ತರುಣರೇ ಆಗಿದ್ದರು. ಯಾರೂ ಕೂಡ ನನ್ನೊಂದಿಗೆ ಮಾತನಾಡುತ್ತಿಲ್ಲ.

▶▶▶ 18


ಆಶೋಕ್


ಸುರೇಶ್ ಕುಮಾರ್


ಹಾಲಪ್ಪ


ಲಿಂಬಾವಳಿ

ಬಿಜೆಪಿ ಸೋಲಿಗೆ ಬಲಿ ಯಾರು?

ರಾಜ್ಯದಲ್ಲಿ ಚುನಾವಣೆ ಮುಗಿದಿದೆ. ಮತದಾರರು, ...ಕೀಯ ಪಕ್ಷಗಳ ಕಾರ್ಯಕರ್ತರು, ಮುಖಂಡರು ...ರು ಗೆಲ್ಲುತ್ತಾರೆ, ಯಾರೆಲ್ಲಾ ಸೋಲುತ್ತಾರೆ ಎಂಬ ...ಚಾರದಲ್ಲಿ ತೊಡಗಿದ್ದಾರೆ. ಆದರೆ ಬಿಜೆಪಿಯ ಕೆಲ ...ವರು ಮಾತ್ರ ತಮ್ಮ ಸ್ಥಾನ ಉಳಿಸಿಕೊಳ್ಳಲು ಯಾರ ... ಹಿಡಿಯಬೇಕು, ಏನೆಲ್ಲಾ 'ರಾಜಕೀಯ' ಮಾಡಬೇಕು ... ಚಿಂತನೆಯಲ್ಲಿದ್ದಾರೆ!

...ಚುನಾವಣೆಯ ಫಲಿತಾಂಶ ಹೊರಬಿದ್ದ ನಂತರ ಯಡ್ಡಿ ...ಖ್ಯಮಂತ್ರಿಯಾಗಿಯೇ ಮುಂದುವರೆದರೂ ಅವರ ...ವ ಸಂಪುಟಕ್ಕೆ ಮೇಜರ್ ಸರ್ಜರಿ ಆಗುವುದು ...ಂಟಿಯಾಗಿದೆ. ಮಾತ್ರವಲ್ಲ ಆ ಸರ್ಜರಿಯಲ್ಲಿ ಕನಿಷ್ಠ ... ಮಂದಿ ಸಚಿವರನ್ನು ತೆಗೆದುಹಾಕುವುದೂ ಅಷ್ಟೇ ...ವಾಗಿದೆ. ಆದರೆ ಯಾರ್‍ಯಾರಿಗೆ ಗೇಟ್‌ಪಾಸ್ ಸಿಗಲಿದೆ ...ಬುದೇ ಈಗ ಬಿಜೆಪಿ ವಲಯದಲ್ಲಿ ಬಿಸಿಬಿಸಿ ಚರ್ಚೆ ...ಯವಾಗಿದೆ.

...ಈ ಮೊದಲೇ ನಿರ್ಧಾರವಾಗಿರುವಂತೆ ವಿಧಾನಸಭಾಧ್ಯಕ್ಷ ... ಈ ಚುನಾವಣೆಯಲ್ಲಿ ಸಂಪೂರ್ಣ ಮೂಲೆಗುಂಪಾ... ಜಗದೀಶ್ ಶೆಟ್ಟರ್‌ಗೂ ಸಂಪುಟದಲ್ಲಿ ಅವಕಾಶ ...ಬೇಕು. ಇನ್ನು ಬಿಜೆಪಿಯಲ್ಲಿನ ಭಿನ್ನಮತೀಯರನ್ನು ...ಧಾನಪಡಿಸಲು ಅವರಿಗೆ ಒಂದೆರಡು ಸ್ಥಾನಗಳನ್ನು ...ಬೇಕು. ಇದು ಯಡ್ಡಿ ಮುಂದಿರುವ ಕಠಿಣ ಸವಾಲು. ...ವಾಗಿ, ಸಮರ್ಥವಾಗಿ ಕೆಲಸ ಮಾಡದ, ಚುನಾವಣೆ... ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸದ ಕೆಲ ಸಚಿವರ ...ಯನ್ನು ಈಗಾಗಲೇ ಯಡ್ಡಿ ಸಿದ್ಧಪಡಿಸಿಟ್ಟುಕೊಂಡಿದ್ದು ... ಮೇಲೆ ಕತ್ತಿ ಬೀಸಲು ಮುಂದಾಗಿದ್ದಾರೆ.

...ಈ ಮಧ್ಯೆ ತಾವೆಷ್ಟೇ ಪ್ರಯತ್ನ ಪಟ್ಟರೂ ಫಲಿತಾಂಶ ...ಬಯಸಿಕೊಂಡಂತೆ ಬರಲಿಕ್ಕಿಲ್ಲ ಎಂಬುದು ಗೊತ್ತಾಗಿದ್ದೇ ...ಕೆಲ ಸಚಿವರು ಈಗ ಯಡ್ಡಿ ಮನೆಮುಂದೆ ಬಿಡಾರ ...ತಲು ಸಿದ್ಧತೆ ನಡೆಸಿದ್ದಾರೆ. "ನೀವೇ ನಮ್ಮ ನಾಯಕರು, ...ದೆ ಸರಿಯಾಗಿ ಕೆಲಸ ಮಾಡುತ್ತೇವೆ'' ಎಂಬ ...ಿಂಗ್ ಹೊಡೆದು ತಮ್ಮ ಕುರ್ಚಿಯನ್ನು ಭದ್ರ ...ಕೊಳ್ಳುವ ಹುನ್ನಾರದಲ್ಲಿದ್ದಾರೆ.

...ರೇಶ್ ಕುಮಾರ್ ಸ್ಥಾನಕ್ಕೆ ಸೋಮಣ್ಣ

...ಯಡ್ಡಿ ಕೊಟ್ಟ ಮಾತಿಗೆ ತಪ್ಪುವುದಿಲ್ಲವೆಂದಾದರೆ, ...ವಣೆ ಸಂದರ್ಭದಲ್ಲಿ ಕಾಂಗ್ರೆಸ್‌ಗೆ ರಾಜೀನಾಮೆ ... ಬಿಜೆಪಿ ಸೇರಿದ ವಿ. ಸೋಮಣ್ಣನಿಗೆ ಸಚಿವ ಸ್ಥಾನ ...ಬೇಕಾಗುತ್ತದೆ. ಸೋಮಣ್ಣ ಕೂಡ ಇದಕ್ಕಾಗಿಯೇ ...ಯ ಚೆಡ್ಡಿ ತೊಟ್ಟಿದ್ದು ಎಂಬುದು ಈಗ ...ಜಾಹೀರಾಗಿರುವ ವಿಚಾರ. ಆದರೆ ಸೋಮಣ್ಣನಿಗೆ ... ಸಂಪುಟದಲ್ಲಿ ಸ್ಥಾನವಹಿಸಬೇಕಾದರೆ ಸುರೇಶ್ ...ಾರ್‌ಗೆ ಕೊಕ್ ಕೊಡಬೇಕಿದೆ.

...ಬಿಜೆಪಿ ವಕ್ತಾರರಾಗಿ ಹಲವಾರು ವರ್ಷ ಮಣ್ಣು ...ತ್ತಿರುವ ಹಾಲಿ ಕಾನೂನು ಸಚಿವ ಎಸ್. ಸುರೇಶ್ ...ಾರ್ ತುಮಕೂರು ಜಿಲ್ಲಾ ಉಸ್ತವಾರಿ ಸಚಿವರೂ ... ಆದರೆ ಇವರು ಅಧಿಕಾರದಲ್ಲಿದ್ದು ಮಾಡಿದ್ದು ... ಇಲ್ಲ. ಅನಂತ್ ಕುಮಾರ್ ಬಣದೊಂದಿಗೆ ಗುರುತಿಸಿ...ರುವ ಸುರೇಶ್ ಕುಮಾರ್‌ಗೆ ಒಲ್ಲದ ಮನಸ್ಸಿನಿಂದಲೇ ... ಸಚಿವ ಸ್ಥಾನ ನೀಡಿದ್ದರು. ಸುರೇಶ್ ಕುಮಾರ್ ... ವಾರ್ತಾ ಮತ್ತು ಪ್ರಚಾರ ಇಲಾಖೆ ಗ್ಯಾರಂಟಿ ...ಕೊಂಡಿದ್ದಾಗಲೇ ಅವರಿಗೆ ಕಾನೂನು ಮತ್ತು ...ೀಯ ವ್ಯವಹಾರಗಳ ಖಾತೆ ಕೊಟ್ಟು ಮೂಲೆಗುಂಪು ...ದ್ದರು ಯಡ್ಡಿ.

...ದರಿಂದ ಬೇಜಾರು ಮಾಡಿಕೊಂಡಿದ್ದ ಸುರೇಶ್ ...ಾರ್, ಕೆಲ ತಿಂಗಳುಗಳ ತಮಗೆ ಉಸ್ತುವಾರಿ ವಹಿಸಿದ್ದ ...ಕೂರಿನತ್ತ ಮುಖ ಕೂಡಾ ಹಾಕಿರಲಿಲ್ಲ. ಕೊನೆಗೆ ...ಹೋದರೂ ನೆಪ ಮಾತ್ರಕ್ಕೆ ಸಭೆ ನಡೆಸಿ ಬರುತ್ತಿದ್ದರು. ...ವಣೆ ಸಂದರ್ಭದಲ್ಲಿಯೂ ಅವರೇನೂ ಅಲ್ಲಿ ಕೆಲಸ ...ಲಿಲ್ಲ. ಗೌರಿಶಂಕರ ಸ್ವಾಮೀಜಿಯ ಸ್ಪರ್ಧೆಯಿಂದ ...ಯ 'ಕಾಂಗ್ರೆಸ್ ಅಭ್ಯರ್ಥಿ' ಬಸವರಾಜು ಸೋಲು ... ಬಹುತೇಕ ಖಚಿತವಾಗಿದೆ. ಹೀಗಾಗಿ ಸುರೇಶ್ ...ಾರ್ ಈಗ ಯಡ್ಡಿ ಲೆಕ್ಕದಲ್ಲಿ 'ಕೆಲಸಕ್ಕೆ ಬಾರದ ... ಅಲ್ಲದೆ, ಯಡ್ಡಿ ವಿರುದ್ಧ ಪಕ್ಷದ ವಲಯದಲ್ಲಿ ... ಕುಮಾರ್ ಬಹಿರಂಗವಾಗಿಯೇ ಮಾತನಾಡಿದ್ದೂ ... ಹೀಗಾಗಿ ಸೋಮಣ್ಣಗೆ ಸ್ಥಾನ ಕೊಡಲು ಸುರೇಶ್ ...ಾರ್ 'ಬಲಿ ಕ ಬಕ್ರಾ' ಆಗುವುದು ಗ್ಯಾರಂಟಿ ...ವೆ ಪಕ್ಷದ ಮೂಲಗಳು.

...ಶೇಷವೆಂದರೆ ಇದಕ್ಕೆ ಅನಂತ್ ಕುಮಾರ್ ಕೂಡ ...ಎಂದಿದ್ದಾರಂತೆ. ಚುನಾವಣೆ ಸಂದರ್ಭದಲ್ಲಿ ಸೋಲಿನ ...ಬಲ್ಲಿದ್ದ ಅನಂತು "ಸೋಮಣ್ಣನನ್ನು ಪಕ್ಷಕ್ಕೆ ...ಕೊಳ್ಳಿ, ಇಲ್ಲವಾದಲ್ಲಿ ನಾನು ಸೋಲುವುದು ...'' ಎಂದು ಯಡ್ಡಿಗೆ ದುಂಬಾಲು ಬಿದ್ದಿದ್ದರು. ... ಸರಿಯಾದ ಸಮಯ ಎಂದುಕೊಂಡ ಯಡ್ಡಿ "...ನ್ನು ಪಕ್ಷಕ್ಕೆ ಸೇರಿಸಿಕೊಂಡರೆ, ಸಚಿವ ಸ್ಥಾನ ...ಕಾಗುತ್ತದೆ, ಅದಕ್ಕೆ ಸುರೇಶ್ ಕುಮಾರ್‌ರವರನ್ನು ... ನೀವು ಒಪ್ಪುವುದಾದರೆ ಅವರಿಗೆ ಪಕ್ಷಕ್ಕೆ ...ಸ್ಕೊಳ್ಳುತ್ತೇನೆ'' ಎಂದು ಅನಂತುಗೆ ಬ್ಲ್ಯಾಕ್‌ಮೇಲ್ ...ದರು. ಏನಾದರೂ ಆಗಲಿ, ತಾನು ಈ ಬಾರಿ ...ಬೇಕು ಎಂದುಕೊಂಡ ಅನಂತು "ಅಯ್ಯೊ, ಹಾಗೇ ಮಾಡಿ'' ಎಂದಿದ್ದರಂತೆ. ಹೀಗಾಗಿ ಸೋಮಣ್ಣ ಸಚಿವರಾಗಲಿದ್ದಾರೆ ಮಾತ್ರವಲ್ಲ ಅವರಿಗೆ ತುಮಕೂರು ಜಿಲ್ಲಾ ಉಸ್ತುವಾರಿಯನ್ನೂ ನೀಡಲಾಗುತ್ತದೆ ಎನ್ನುತ್ತಿವೆ ಬಿಜೆಪಿ ಮೂಲಗಳು.

ಹಾಲಪ್ಪನ ಮೇಲೂ ತೂಗುಕತ್ತಿ

ಶಿವಮೊಗ್ಗದಲ್ಲಿ ಮಗ ರಾಘವೇಂದ್ರನನ್ನು ಕಣಕ್ಕಿಳಿಸಿದ ಯಡ್ಡಿ ತಮ್ಮ ಕುಟುಂಬದ ರಾಜಕೀಯ ಭವಿಷ್ಯವನ್ನೇ ಅಲ್ಲಿ ಪಣಕಟ್ಟಿದ್ದಾರೆ. ಆದ್ದರಿಂದ ರಾಘವೇಂದ್ರ ಸೋತರೆ ಸಚಿವ ಹಾಲಪ್ಪನ ತಲೆದಂಡ ಗ್ಯಾರಂಟಿ.

ಶಿವಮೊಗ್ಗದಲ್ಲಿ ಈಡಿಗ ಸಮುದಾಯದ ಮತಗಳೇ ನಿರ್ಣಾಯಕ. ಈ ಓಟ್‌ಬ್ಯಾಂಕ್ ಮೇಲೆ ಕಣ್ಣಿಟ್ಟೇ ಯಡ್ಡಿ ಜಿಲ್ಲೆಯ ಬಿಜೆಪಿ ನಾಯಕರ ತೀವ್ರ ವಿರೋಧದ ನಡುವೆಯೂ ಹಾಲಪ್ಪನಿಗೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಸ್ಥಾನ ನೀಡಿದ್ದರು. ಆದರೆ ಈಗ ಈಡಿಗ ಸಮುದಾಯ ಸಂಪೂರ್ಣವಾಗಿ ಬಂಗಾರಪ್ಪರ ಪರ ನಿಂತಿದೆ. ಇದರಿಂದ ಕೆರಳಿದ ಯಡ್ಡಿ ಹಾಲಪ್ಪರನ್ನು ಕರೆಸಿಕೊಂಡು "ರಾಘವೇಂದ್ರ ಸೋತರೆ ನಿನ್ನ ಸಚಿವ ಸ್ಥಾನ ಕಸಿದುಕೊಳ್ಳುತ್ತೇನೆ'' ಎಂದು ನೇರವಾಗಿ ಎಚ್ಚರಿಕೆ ನೀಡಿದ್ದಾರೆ. ಇದನ್ನು ಕೇಳಿ ಬೆಚ್ಚಿ ಬಿದ್ದ ಹಾಲಪ್ಪ ಈಡಿಗ ನಾಯಕರ ಮುಂದೆ "ಬಿಜೆಪಿಗೆ ಓಟು ಹಾಕಿ ನನ್ನ ಸಚಿವ ಸ್ಥಾನ ಉಳಿಸಿ'' ಎಂದು ಕಣ್ಣೀರಿಟ್ಟಿದ್ದರು. ಈಡಿಗರು ಹಾಲಪ್ಪನ ಮುಖ ನೋಡಿ ಮರುಕಪಟ್ಟರೋ, ಬಂಗಾರಪ್ಪರ ಕೈಹಿಡಿದರೋ ಅದು ಮೇ 16ರಂದು ಗೊತ್ತಾಗಲಿದೆ. ಅಲ್ಲಿಯವರೆಗೆ ಹಾಲಪ್ಪಗೆ ಟೆನ್ಷನ್ನೋ ಟೆನ್ಷನ್.

ಸಚಿವರಾಗಿ ಹಾಲಪ್ಪ ಕಡಿದು ಕಟ್ಟೆ ಹಾಕಿದ್ದು ಕಡಿಮೆ. ಅಲ್ಲದೆ ಅವರು ಉಸ್ತುವಾರಿ ಸಚಿವರಾಗಿರುವ ಚಾಮರಾಜನಗರದಲ್ಲಿ ಪಕ್ಷವನ್ನು ಕಟ್ಟಲು ಪ್ರಯತ್ನಿಸಲೇ ಇಲ್ಲ. ಇದು ಚುನಾವಣೆ ಸಂದರ್ಭದಲ್ಲಿ ಎಲ್ಲರಿಗೂ ಮನದಟ್ಟಾಗಿದೆ. ಇದು ಕೂಡ ಪಕ್ಷದ ನಾಯಕರ ಅಸಮಾಧಾನಕ್ಕೆ ಕಾರಣವಾಗಿದೆ. ಹೀಗಾಗಿ ರಾಘವೇಂದ್ರ ಸೋತರೆ ಹಾಲಪ್ಪ ಮನೆಗೆ ಹೋಗುವುದು ಗ್ಯಾರಂಟಿಯಂತೆ.

ಲಿಂಬಾವಳಿ ಬದಲಿಗೆ ಸಿ.ಟಿ.ರವಿ

'ಕೆಲಸಕ್ಕೆ ಬಾರದವರು'' ಎಂದು ಯಡ್ಡಿ ತೀರ್ಮಾನಿಸಿರುವ ಇನ್ನೋರ್ವ ಸಚಿವ ಎಂದರೆ ಅದು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ. ಇವರು ಹಾಸನದ ಉಸ್ತುವಾರಿ ಸಚಿವರೂ ಹೌದು. ಆದರೆ ಇವರು ಹಾಸನಕ್ಕೆ ಹೋಗಿದ್ದು ಒಂದೋ ಎರಡೋ ಬಾರಿ. ಹೀಗಾಗಿ ಅಲ್ಲಿಯ ಸಮಸ್ಯೆಗಳ ಬಗೆಗಿನ ಅರಿವು ಇರಲಿ, ಜಿಲ್ಲಾಡಳಿತದ ಉನ್ನತ ಅಧಿಕಾರಿಗಳ ಪರಿಚಯವೂ ಈ ಲಿಂಬಾವಳಿಗೆ ಇಲ್ಲವಂತೆ.

ಹೀಗಾಗಿ ಇವರ ನೇತೃತ್ವದಲ್ಲಿ ಚುನಾವಣೆ ನಡೆದರೆ ಈ ಕ್ಷೇತ್ರದಲ್ಲಿ ಠೇವಣಿ ಹೋಗುವುದು ಗ್ಯಾರಂಟಿ ಎಂದು ನಿರ್ಧರಿಸಿದ ಪಕ್ಷ, ಬಾಯಿಬಡುಕ ಸಿ.ಟಿ.ರವಿಗೆ ಹಾಸನದ ಜವಾಬ್ದಾರಿ ವಹಿಸಿತ್ತು. ಆದರೆ ಆ ರವಿಯೋ, ಅಧಿಕೃತ ಅಭ್ಯರ್ಥಿ ಹನುಮೇಗೌಡರನ್ನು ಮೂಲೆಗುಂಪು ಮಾಡಿ ತಾನೇ ಪಕ್ಷದ ಅಭ್ಯರ್ಥಿಯಂತೆ ಓಡಾಡಿದ ರವಿ ಚುನಾವಣಾ ವೆಚ್ಚಕ್ಕೆಂದು ಪಕ್ಷ ಕೊಟ್ಟ ದುಡ್ಡನ್ನೆಲ್ಲಾ ಗುಳುಂ ಮಾಡಿರುವ ಸುದ್ದಿ ಇದೆ.

ಅದೇನೇ ಇರಲಿ, ಅರವಿಂದ ಲಿಂಬಾವಳಿ ನಾಪತ್ತೆಯಾಗಿರುವುದನ್ನು ಗಮನಿಸಿದ ಹಾಸನದ ಬಿಜೆಪಿ ನಾಯಕರು "ನಮಗೆ ಈ ಉಸ್ತುವಾರಿ ಸಚಿವರು ಬೇಡ'' ಎಂದು ಪಟ್ಟು ಹಿಡಿದಿದ್ದಾರಂತೆ. ಹೀಗಾಗಿ ಲಿಂಬಾವಳಿಯನ್ನು ಮನೆಗೆ ಕಳುಹಿಸುವ ಧೈರ್ಯವನ್ನು ಯಡ್ಡಿ ತೋರಿಸಿದರೂ ಆಶ್ಚರ್ಯವಿಲ್ಲ. ಹಿಂದೆ ಅನಂತ್‌ಕುಮಾರ್‌ಗೆ ನಿಷ್ಠರಾಗಿದ್ದ ಲಿಂಬಾವಳಿ ಇತ್ತೀಚಿಗೆ ಯಡ್ಡಿ ಬಣ ಸೇರಿದ್ದಾರೆಂಬ ಸುದ್ದಿ ಇದೆ. ಅವರ ಸಚಿವ ಸ್ಥಾನವನ್ನು ಈ ನಿಷ್ಠೆಯೇ ಕಾಪಾಡಬೇಕು!

ಅಶೋಕ್ ವಿರುದ್ಧ ಅನಂತು

ಸಾರಿಗೆ ಸಚಿವ ಅಶೋಕ್ ವಿರುದ್ಧ ಅನಂತು ಬಣ ಭಯಂಕರ ಸಿಟ್ಟು ಮಾಡಿಕೊಂಡಿರುವ ಸುದ್ದಿ ಪಕ್ಷದ ವಲಯದಿಂದ ಹೊರಬಿದ್ದಿದೆ. ಪದ್ಮನಾಭನಗರದ ಶಾಸಕರೂ ಆಗಿರುವ ಅಶೋಕ್ ಅನಂತು ಪರವಾಗಿ ಸರಿಯಾಗಿ ಪ್ರಚಾರ ನಡೆಸಿಲ್ಲ ಎಂಬುದು ಅನಂತು ಆರೋಪ.

ಒಕ್ಕಲಿಗರೇ ಹೆಚ್ಚಾಗಿರುವ ಪದ್ಮನಾಭನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮತದಾನವಾಗಿದೆ. ಇದರಿಂದ ಕಾಂಗ್ರೆಸ್‌ಗೆ ಲಾಭವಾಗಲಿದೆ ಎಂಬುದು ಅನಂತು ಬಣಕ್ಕೆ ಗೊತ್ತಾಗಿ ಹೋಗಿದೆ. ಈ ವಿಷಯವಂತೂ ಕೂತಲ್ಲಿ, ನಿಂತಲ್ಲಿ ಅನಂತು ತಲೆತಿನ್ನುತ್ತಿದ್ದು "ಅಶೋಕ್ ಸರಿಯಾಗಿ ಕೆಲಸ ಮಾಡಿದ್ದರೆ ನಾವು ಭಯಪಡುವ ಅವಶ್ಯಕತೆ ಇರುತ್ತಿರಲಿಲ್ಲ'' ಎನ್ನುತ್ತಿದ್ದಾರಂತೆ.

ಅಷ್ಟೇಅಲ್ಲ, ಚುನಾವಣೆ ಹಿಂದಿನ ದಿನ ತಮ್ಮ ಕ್ಷೇತ್ರದ ಪ್ರಮುಖರ ಸಭೆ ನಡೆಸಿದ್ದ ಅಶೋಕ್ "ಒಳ್ಳೆಯ ಗಾಳಿ ಬೀಸುತ್ತಿಲ್ಲ'' ಎಂದು ಬಹಿರಂಗವಾಗಿಯೇ ಒಪ್ಪಿಕೊಂಡಿದ್ದರು. ಈ ಸುದ್ದಿ ಅನಂತುಗೆ ತಲುಪಿದ್ದು, ತಮ್ಮನ್ನು ಸೋಲಿಸಲು ಅಶೋಕ್ ಸಂಚು ರೂಪಿಸಿದ್ದಾರೆ ಎಂದು ಅನುಮಾನಿಸುತ್ತಿದ್ದಾರೆ. ಒಂದು ವೇಳೆ ಅನಂತು ಸೋತಲ್ಲಿ, ಅಶೋಕ್‌ರನ್ನು ಸಚಿವ ಸಂಪುಟದಿಂದ ಕೈಬಿಡಿ ಎಂದು ಯಡ್ಡಿಯ ಮೇಲೆ ಒತ್ತಡ ಹೇರುವ ನಿರೀಕ್ಷೆ ಇದೆ. ಅಶೋಕ್ ಮೇಲೆ ಯಡ್ಡಿಗೆ ಹೆಚ್ಚಿನ ಪ್ರೀತಿಯೇನೂ ಇಲ್ಲವಾದ್ದರಿಂದ, ಈ ಒತ್ತಡಕ್ಕೆ ಮಣಿಯಬಹುದು. ಒಟ್ಟಾರೆ ಅಶೋಕ್ ಭವಿಷ್ಯ ಅನಂತು ಗೆಲುವಿನಲ್ಲಿದೆ.

ಹಿಟ್ ಲೀಸ್ಟ್‌ನಲ್ಲಿರುವವರು...

ಕೃಷಿ ಸಚಿವ ರವೀಂದ್ರನಾಥ್‌ಗೆ ಬೇರೆ ವಿಷಯ ಬೇಡ ತಮ್ಮ ಖಾತೆಯ ಬಗ್ಗೆಯೇ ಏನೂ ಗೊತ್ತಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ. ಒಂದು ವೇಳೆ ದಾವಣಗೆರೆಯಲ್ಲಿ ಸಿದ್ದೇಶ್ ಸೋತರೆ ಇದನ್ನೇ ಕಾರಣವಾಗಿಟ್ಟುಕೊಂಡು ರವೀಂದ್ರನಾಥ್‌ರನ್ನು ಮನೆಗೆ ಕಳುಹಿಸುವ ಸಾಧ್ಯತೆ ಇದೆ.

ಇನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಸಚಿವ ಗೋವಿಂದ ಕಾರಜೋಳ, ವಸತಿ ಮತ್ತು ಮುಜರಾಯಿ ಸಚಿವ ಕೃಷ್ಣಯ್ಯ ಶೆಟ್ಟಿ, ಕಾರ್ಮಿಕ ಸಚಿವ ಬಚ್ಚೇಗೌಡ, ತೋಟಗಾರಿಕಾ ಸಚಿವ ಬೆಳ್ಳುಬ್ಬಿ ಸಹಕಾರ ಸಚಿವ ಲಕ್ಷ್ಮಣ್ ಸವದಿ, ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಮುಮ್ತಾಜ್ ಅಲಿಖಾನ್, ಪ್ರೌಢ ಶಿಕ್ಷಣ ಸಚಿವ ರಾಮಚಂದ್ರಗೌಡ ಮತ್ತಿತರರು ಪ್ರಚಾರದ ಸಂದರ್ಭದಲ್ಲಿ ಎಲ್ಲಿದ್ದರು, ಏನು ಮಾಡಿದರು ಎಂಬುದು ಪಕ್ಷದ ನಾಯಕರಿಗೇ ಗೊತ್ತಿಲ್ಲ. ಸಚಿವರಾಗಿ ಗಮನ ಸೆಳೆಯದ ಇವರಲ್ಲಿ ಯಾರ ಕೈ ಬಿಟ್ಟರೂ ಹೆಚ್ಚಿನ ವಿರೋಧ ವ್ಯಕ್ತವಾಗದು.

ಪಾರಾಗಲಿರುವ ಸಚಿವರು

ಹಾಗೆ ನೋಡುತ್ತಾ ಹೋದರೆ, ಬಿಜೆಪಿ ಸೋತರೆ ಮೇಲೆ ಹೆಸರಿಸಿರುವ ಸಚಿವರು ಹೆಚ್ಚಿನ ಹೊಣೆಗಾರರೇನೂ ಆಗಿರುವುದಿಲ್ಲ. ಆದರೆ ಸಚಿವರಾದ ಶೋಭಾ ಕರಂದ್ಲಾಜೆ, ಕೆ.ಎಸ್. ಈಶ್ವರಪ್ಪ, ಕಟ್ಟಾ ಸುಬ್ರಮಣ್ಯ ನಾಯ್ಡು ಸಿ.ಎಂ.ಉದಾಸಿ, ವಿ.ಎಸ್. ಆಚಾರ್ಯ ಮತ್ತಿತರರು ನೇರವಾಗಿ ಹೊಣೆಗಾರರಾಗಿರುತ್ತಾರೆ.

ಮೈಸೂರಿನಲ್ಲಿ ಬಿಜೆಪಿಯ ವಿಜಯಶಂಕರ್ ಸೋತರೆ ಅದು ಪಕ್ಷದವರಿಂದಲೇ ಸಂಭವಿಸಿದ ಸೋಲಾಗಿರುತ್ತದೆ. ಏಕೆಂದರೆ ಮೈಸೂರು ಉಸ್ತುವಾರಿ ಸಚಿವೆ ಶೋಭಾ ಕರಂದ್ಲಾಜೆ ಅಲ್ಲಿ ಸರ್ವಾಧಿಕಾರಿಯಂತೆ ವರ್ತಿಸುತ್ತಾ ಇತರೆ ಬಿಜೆಪಿ ನಾಯಕರನ್ನು ದೂರ ಸರಿಸಿದ್ದಾರೆ. ಇದರಿಂದಾಗಿ ಪಕ್ಷ ಒಡೆದಮನೆಯಾಗಿದ್ದು, ಕೆಲನಾಯಕರು ಶೋಭಾಗೆ ಬುದ್ಧಿ ಕಲಿಸಲೆಂದೇ ಒಳಗೊಳಗೇ ಬೇರೆ ಪಕ್ಷದ ಪರವಾಗಿ ಕೆಲಸ ಮಾಡಿದ್ದಾರೆ. ಹೀಗಾಗಿ ಪಕ್ಷ ಸೋತಲ್ಲಿ ಅದಕ್ಕೆ ನೇರ ಹೊಣೆ ಸಚಿವೆ ಶೋಭಾ ಕರಂದ್ಲಾಜೆ. ಆದರೆ ಇದೇ ಕಾರಣ ನೀಡಿ ಆಕೆಯನ್ನು ಸಚಿವ ಸಂಪುಟದಿಂದ ಯಡ್ಡಿ ಕೈ ಬಿಡುವುದುಂಟೇ?!

ಇನ್ನು ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು ವರ್ತನೆಯಿಂದ ಬೇಸತ್ತ ಬಿಜೆಪಿ ಕಾರ್ಯಕರ್ತರು ಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ಭಾರಿ ಸಂಖ್ಯೆಯಲ್ಲಿ ಕಾಂಗ್ರೆಸ್‌ಗೆ ಒಲಸೆ ಹೋಗಿದ್ದರು. ಇದರಿಂದಾಗಿ ಅವರ ಸ್ವಕ್ಷೇತ್ರದಲ್ಲಿ ಪಕ್ಷ ಪ್ರಚಾರ ನಡೆಸಲು ಪರದಾಡಬೇಕಾಗಿತ್ತು. ಆದರೆ ಒಂದು ವೇಳೆ ಬೆಂಗಳೂರು ಉತ್ತರಧಿಂದ ಡಿ.ಬಿ. ಚಂದ್ರೇಗೌಡ ಸೋತರೆ ಕಟ್ಟಾ ಏನೂ ಸಚಿವ ಸ್ಥಾನ ಕಳೆದುಕೊಳ್ಳುವುದಿಲ್ಲ. ಏಕೆಂದರೆ ಯಡ್ಡಿ-ಕಟ್ಟಾ ಸಂಬಂಧ ಕಮಿಷನ್ನು, ಪರ್ಸೆಂಟೇಜು, ಇತ್ಯಾದಿಗಳ ಮೇಲೆ ನಿಂತಿರುವಂತದ್ದು.

ರಾಜ್ಯ ಬಿಜೆಪಿ ಅಧ್ಯಕ್ಷ ಸದಾನಂದ ಗೌಡರು ಸೋತರೆ ಅದರ ಹೊಣೆಯನ್ನು ಗೃಹ ಸಚಿವ ವಿ.ಎಸ್. ಆಚಾರ್ಯ ಹೊರುವುದಿಲ್ಲ. ಏಕೆಂದರೆ ಅವರು ಪ್ರಚಾರ ಮಾಡಿದ್ದು ಕಾಂಗ್ರೆಸ್ ಸಭೆಯಲ್ಲಿ ತಾನೆ?! ಇನ್ನು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್. ಈಶ್ವರಪ್ಪನಂತೂ ತಮಗೂ ಈ ಚುನಾವಣೆಗೂ ಸಂಬಂಧವಿಲ್ಲದಂತೆ ಇದ್ದರು. ಜೊತೆಗೆ ಶಿವಮೊಗ್ಗದಲ್ಲಿ ಬಿಜೆಪಿ ಅಭ್ಯರ್ಥಿ ರಾಘವೇಂದ್ರನ ಗೆಲುವಿಗಾಗಿ ಯಡ್ಡಿ ಕೊಟ್ಟ ದುಡ್ಡನ್ನು ನುಂಗಿದ ಆರೋಪವೂ ಇವರ ಮೇಲಿದೆ. ಆದರೆ ಕುರುಬ ಈಶ್ವರಪ್ಪನನ್ನು ಸಚಿವ ಸಂಪುಟದಿಂದ ಕೈಬಿಡುವ ಧೈರ್ಯ ಲಿಂಗವಂತ ಯಡ್ಡಿಗೆ ಖಂಡಿತಾ ಇಲ್ಲ.

ಪಟ್ಟು ಹಿಡಿದು ತಮ್ಮ ಮಗನಿಗೆ ಟಿಕೆಟ್ ಕೊಡಿಸಿದ ಸಿ.ಎಂ. ಉದಾಸಿ ಆಕಸ್ಮಾತ್ ತಮ್ಮ ಪುತ್ರ ಶಿವಕುಮಾರ್ ಸೋತರೆ ಅದರ ಹೊಣೆಯನ್ನು ಹೊತ್ತು ಸಚಿವ ಸಂಪುಟದಿಂದ ಹೊರನಡೆಯುವಷ್ಟು ರಾಜಕೀಯ ಮೌಲ್ಯಗಳನ್ನು ಹೊಂದಿರುವವರಲ್ಲ. ಇನ್ನು ಬಳ್ಳಾರಿಯ ರೆಡ್ಡಿ ಗ್ಯಾಂಗ್ ಯಾರ ಮಾತಿಗೂ ಕೇರ್ ಮಾಡುವುದಿಲ್ಲ.

ಅದೆಲ್ಲ ಬದಿಗಿರಲಿ. ಆಕಸ್ಮಾತ್ ರಾಘವೇಂದ್ರ ಸೋತರೆ ಅದರ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಯಡ್ಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆಯೇ?! ■

ಇವರನ್ನು ಮುಟ್ಟುವ ಧೈರ್ಯ ಯಡ್ಡಿಗಿಲ್ಲ!

ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಯಾರೇ ಗೆಲ್ಲಲಿ, ಆದರೆ ಚುನಾವಣೆಗಿಂತ ಮೊದಲು ನಡೆದ ಮಹತ್ವದ ರಾಜಕೀಯ ಘಟನೆಯೊಂದನ್ನು ಯಾರೂ ನಿರ್ಲಕ್ಷಿಸುವಂತಿಲ್ಲ. ಇತ್ತೀಚೆಗೆ ಬಿಜೆಪಿ ಸೇರಿ ಸಚಿವರಾದ ಆನಂದ್ ಅಸ್ನೋಟಿಕರ್, ಕಾಂಗ್ರೆಸ್ ಅಭ್ಯರ್ಥಿ ಮಾರ್ಗರೆಟ್ ಆಳ್ವಾರೊಂದಿಗೆ ಗೋಪ್ಯ ಸಭೆ ನಡೆಸಿ ಅವರಿಗೆ ಬೆಂಬಲ ಘೋಷಿಸಿದರು. ಆ ಸಭೆಯಲ್ಲಿ ಜೆಡಿಎಸ್ ಅಭ್ಯರ್ಥಿ ಕೂಡ ಭಾಗವಹಿಸಿದ್ದರೆಂಬ ಸುದ್ದಿ ಇದೆ.


ಬಿಜೆಪಿ ಅಭ್ಯರ್ಥಿ ಅನಂತಕುಮಾರ್ ಹೆಗಡೆ ಕಳೆದ ಚುನಾವಣೆಯಲ್ಲಿ ತಮ್ಮ ವಿರುದ್ಧ ಕೆಲಸ ಮಾಡಿದ್ದರೆಂಬ ಸಿಟ್ಟು ಆನಂದ್ ಅಸ್ನೋಟಿಕರ್‌ಗೆ ಇದೆ. ಅಲ್ಲದೆ ತಮ್ಮ ರಾಜಕೀಯ ಶತ್ರು ಆರ್.ವಿ.ದೇಶಪಾಂಡೆ ಮತ್ತು ಕಾಂಗ್ರೆಸ್ ಅಭ್ಯರ್ಥಿ ಮಾರ್ಗರೆಟ್ ಆಳ್ವಾರಿಗೂ ಆಗಿಬರುವುದಿಲ್ಲವಾದ್ದರಿಂದ ತಮ್ಮ ಶತ್ರುವನ್ನು ಮಣಿಸಲು ಆಳ್ವಾರಿಗೆ ಬೆಂಬಲ ನೀಡುವುದೇ ಸರಿ ಎಂದು ಸಚಿವ ಅಸ್ನೋಟಿಕರ್ ತೀರ್ಮಾನಿಸಿ ಆಳ್ವಾ ಪರ ಕೆಲಸ ಮಾಡಿದ್ದಾರೆ. ತಾವು ಪ್ರಬಲವಾಗಿರುವ ಪ್ರದೇಶದಲ್ಲಿ ತಮ್ಮ ಬೆಂಬಲಿಗರು ಕಾಂಗ್ರೆಸ್‌ಗೆ ಕೆಲಸ ಮಾಡುವಂತೆ ನೋಡಿಕೊಂಡಿದ್ದಾರೆ. ಗೋಪ್ಯವಾಗಿ ನಡೆದ ಈ ಹೊಂದಾಣಿಕೆ ಬಹಿರಂಗ ಗೊಂಡಾಗ "ನನ್ನನ್ನು ಸಚಿವ ಸಂಪುಟದಿಂದ ಕೈ ಬಿಟ್ಟರೆ, ಕಾಂಗ್ರೆಸ್ ಸೇರುತ್ತೇನೆ. ಇದಕ್ಕೆಲ್ಲಾ ನಾನು ಹೆದರುವುದಿಲ್ಲ'' ಎಂದು ಅಸ್ನೋಟಿಕರ್ ಅವಾಜ್ ಕೂಡ ಹಾಕಿದ್ದಾರೆ.

ಅನಂತಕುಮಾರ್ ಹೆಗಡೆ ಸೋತರೆ ಆನಂದ್ ಅಸ್ನೋಟಿಕರ್ ಅವರನ್ನು ಕೈ ಬಿಡುವ ಧೈರ್ಯ ಯಡ್ಡಿಗಿದೆಯೇ?

ಇನ್ನು ರೆಡ್ಡಿ ಗ್ಯಾಂಗಿನ ಗುಲಾಮ ಸಚಿವ ಶ್ರೀರಾಮುಲು ಬಳ್ಳಾರಿ ಕ್ಷೇತ್ರದಲ್ಲಿ ತಾನೇ ಅಭ್ಯರ್ಥಿ ಎಂಬಂತೆ ಓಡಾಡಿದ್ದಾರೆ. ಅಲ್ಲಿ ಚುನಾವಣೆ ಮುಗಿದ ಮೇಲೆ ನೆಪ ಮಾತ್ರಕ್ಕೆ ದಾವಣಗೆರೆ ಮತ್ತಿತರ ಕಡೆ ಒಂದು ಸುತ್ತು ಹೊಡೆದು ವಾಪಸ್ಸಾಗಿದ್ದಾರೆ. ಈ ಚುನಾವಣೆಯಲ್ಲಿ ಆಸಕ್ತಿ ಇಲ್ಲದ ಸಚಿವ ಜನಾರ್ದನ ರೆಡ್ಡಿ ನಿರೀಕ್ಷೆಯಂತೆ ಭರದ ಪ್ರಚಾರ ನಡೆಸಲಿಲ್ಲ. ರಾಜ್ಯದ ಕೆಲ ಭಾಗಗಳಲ್ಲಿ ನೆಪಮಾತ್ರಕ್ಕೆ ರೋಡ್ ಶೋ ಮಾಡಿ ಮನೆ ಸೇರಿಕೊಂಡಿದ್ದರು. ಇನ್ನು ಕಂದಾಯ ಸಚಿವ ಕರುಣಾಕರ ರೆಡ್ಡಿಯಂತೂ ನಾಪತ್ತೆ ಆಗಿದ್ದರು. ಬಳ್ಳಾರಿಯಲ್ಲಿಯೂ ಅವರು ಕಾಣಿಸಿಕೊಂಡಿದ್ದು ಅಪರೂಪ.

ಈ ಮೂವರು ಸಚಿವರ ಕಿವಿ ಹಿಂಡುವ ತಾಕತ್ತು ಯಡ್ಡಿಗಿಲ್ಲ, ಅಧ್ಯಾನಿಗೂ ಇಲ್ಲ ಬಿಡಿ!


ಗಣಿಕಳ್ಳ ಮಂತ್ರಿಗೆ ಪಿಳ್ಳೇನೆಪದ ಮುಖ್ಯಮಂತ್ರಿ



ಓಬಳಾಪುರಂ ಮೈನಿಂಗ್ ಕಂಪನಿಯ ಲೈಸೆನ್ಸ್ ರದ್ದುಪಡಿಸುವಂತೆ ಕೇಂದ್ರ ಸರ್ಕಾರವೇ ಹೊರಡಿಸಿದ್ದ ಆದೇಶವನ್ನು ಕಾಲಕಸಕ್ಕಿಂತ ಕೀಳಾಗಿ ಕಾಣುವ ಪ್ರವಾಸೋದ್ಯಮ ಮಂತ್ರಿ ಮತ್ತು ಈ ಬಗ್ಗೆ ರಾಜ್ಯ ಸರ್ಕಾರ ಹಸ್ತಕ್ಷೇಪ ಮಾಡೋಲ್ಲ ಎಂದು ನುಣುಚಿಕೊಳ್ಳುವ ಮುಖ್ಯಮಂತ್ರಿ ಇಬ್ಬರ ವರ್ತನೆಯೂ ಏನನ್ನು ಸೂಚಿಸುತ್ತದೆ?

ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ ಎಂಬ ಮಾತು ನೆನಪಾಗುವುದಿಲ್ಲವೇ?

ಬಿಜೆಪಿ ಸರ್ಕಾರದ ಮಂತ್ರಿಗಳಾದ ಜನಾರ್ದನ ರೆಡ್ಡಿ, ಕರುಣಾಕರರೆಡ್ಡಿ ಮತ್ತು ಶ್ರೀರಾಮುಲು ಒಡೆತನದ ಓಬಳಾಪುರಂ ಮೈನಿಂಗ್ ಕಂಪನಿ ಸೇರಿದಂತೆ ಕರ್ನಾಟಕದ ಗಡಿಯ ಐದು ಅಕ್ರಮಗಣಿಗಳ ಲೈಸೆನ್ಸ್ ರದ್ದುಪಡಿಸಿದ್ದು ಕೇಂದ್ರದ ಅರಣ್ಯ ಮತ್ತು ಪರಿಸರ ಇಲಾಖೆಯ ಐಜಿಪಿ ಬಿ.ಕೆ.ಸಿಂಗ್. ಅದೂ ಕೇಂದ್ರ ಅರಣ್ಯ ಇಲಾಖೆಯ ಬೆಂಗಳೂರು ಪ್ರಾದೇಶಿಕ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ನೀಡಿದ ಸ್ಥಳ ಪರಿಶೀಲನಾ ವರದಿಯ ಆಧಾರದ ಮೇಲೆ. ಅನಂತಪುರ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಯು ಅಂತರರಾಜ್ಯದ ಗಡಿ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವಲ್ಲಿ ಲೋಪ ಎಸಗಿದ ಆರೋಪದ ಮೇಲೆಯೇ ಕೇಂದ್ರ ಸರ್ಕಾರದ ಬೆಂಗಳೂರು ಪ್ರಾದೇಶಿಕ ಅರಣ್ಯ ಸಂರಕ್ಷಣಾಧಿಕಾರಿಯವರು ಇದೇ 2009 ಜನವರಿ 30 ರಂದು ನಡೆಸಿದ ಪ್ರತ್ಯಕ್ಷ ತಪಾಸಣೆಯ ವರದಿಯನ್ನು ಆಧರಿಸಿಯೇ ಬಿ.ಕೆ.ಸಿಂಗ್ ಆದೇಶ ಹೊರಬಿದ್ದಿದೆ.



ಅದು ಕೇವಲ ಜನಾರ್ದನ ರೆಡ್ಡಿ ಒಡೆತನದ ಓಬಳಾಪುರಂ ಮೈನಿಂಗ್ ಕಂಪನಿಯೊಂದನ್ನೇ ಉದ್ದೇಶವಾಗಿಟ್ಟುಕೊಂಡು ಹೊರಡಿಸಿದ ಆದೇಶವಷ್ಟೇ ಅಲ್ಲ, ಬಳ್ಳಾರಿ ಕಬ್ಬಿಣದ ಅದಿರು ಕಂಪನಿ, ವೈ.ಮಹಾಬಲೇಶ್ವರಪ್ಪ ಅಂಡ್ ಸನ್ಸ್, ಅನಂತಪುರ ಮೈನಿಂಗ್ ಕಾರ್ಪೊರೇಷನ್-ಹೀಗೆ ಐದು ವಿವಿಧ ಗಣಿಗಳ (ಓಬಳಾಪುರಂ ಮೈನಿಂಗ್ ಕಂಪನಿಯದೇ ಎರಡು ಗಣಿಗಳು) ಗುತ್ತಿಗೆಗಳನ್ನು ಅಮಾನತುಗೊಳಿಸುವಂತೆ ಕೇಂದ್ರ ಸರ್ಕಾರ ಆದೇಶ ಕೊಟ್ಟಿದೆ. ಜನಾರ್ದನ ರೆಡ್ಡಿ ಮಂತ್ರಿಯಾಗಿ ಬೇಡ ಕನಿಷ್ಠ ಭಾರತದ ಒಬ್ಬ ಪ್ರಜೆಯಾಗಿ ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕು?

"ಯಾವುದೇ ಕಾರಣಕ್ಕೂ ನಮ್ಮ ಕಂಪನಿ ಗಣಿಗಾರಿಕೆಯನ್ನು ನಿಲ್ಲಿಸೋಲ್ಲ, ಅದು ಕಲ್ಪನೆಗೂ ಮೀರಿದ ವಿಷಯ...!"

ಇದು ಮಂತ್ರಿ ಜನಾರ್ದನ ರೆಡ್ಡಿ ಕೇಂದ್ರದ ಆದೇಶಕ್ಕೆ ನೀಡಿದ ಪ್ರತಿಕ್ರಿಯೆ. ಈ ಬಗ್ಗೆ ಹತ್ತಾರು ಸಂಘಟನೆಗಳು ಬೀದಿಗಿಳಿದು ಪ್ರತಿಭಟಿಸಿವೆ. ರೆಡ್ಡಿ ಸಹೋದರರ ರಾಜೀನಾಮೆಗೂ ಒತ್ತಾಯಿಸಿವೆ. ಸ್ವತಃ ವಿರೋಧಿನಾಯಕ ಉಗ್ರಪ್ಪನವರು "ಮುಖ್ಯಮಂತ್ರಿಗಳೇ ಗಣಿ ಲೂಟಿಯಲ್ಲಿ ಶಾಮೀಲಾಗಿದ್ದಾರೆ" ಎಂದು ಆರೋಪಿಸುತ್ತಾರೆ. ಆದರೆ ಮುಖ್ಯಮಂತ್ರಿ ಯಡಿಯೂರಪ್ಪ ಮಾತ್ರ ಈ ವಿಷಯದಲ್ಲಿ ರಾಜ್ಯ ಸರ್ಕಾರ ಮಧ್ಯ ಪ್ರವೇಶ ಮಾಡುವುದಿಲ್ಲ ಎನ್ನುತ್ತಿದ್ದಾರೆ.

ತನ್ನದೇ ಸರ್ಕಾರದ ಮಂತ್ರಿಯೊಬ್ಬ ಕೇಂದ್ರ ಸರ್ಕಾರದ ಆದೇಶವನ್ನು ಧಿಕ್ಕರಿಸಿ ಮಾತನಾಡಿದ್ದನ್ನು ಮುಖ್ಯಮಂತ್ರಿಯೊಬ್ಬ ಯಾವುದೇ ಕಾರಣಕ್ಕೂ ಸಮರ್ಥಿಸುವುದಿಲ್ಲ. ಕನಿಷ್ಠ ಸಂವಿಧಾನಬದ್ಧ ವ್ಯವಸ್ಥೆಯೊಂದರ ಮುಖ್ಯಸ್ಥರಾಗಿ ಮುಖ್ಯಮಂತ್ರಿ ಯಡ್ಡಿ ಕೇಂದ್ರದ ಆದೇಶವನ್ನು ಗೌರವಿಸುವಂತೆ ತನ್ನ ಸಂಪುಟದ ಸಚಿವನಾದ ಜನಾರ್ದನ ರೆಡ್ಡಿಯ ಕಿವಿ ಹಿಂಡಬೇಕಿತ್ತು. ಹಾಗೊಮ್ಮೆ ಕಳ್ಳ ಗಣಿ ದಂಧೆಯಲ್ಲಿ ಓಬಳಾಪುರಂ ಮೈನಿಂಗ್ ಕಂಪನಿ ಇಲ್ಲದ ಪಕ್ಷದಲ್ಲಿ ಅದನ್ನೇ ಕೇಂದ್ರ ಸರ್ಕಾರಕ್ಕೆ ಮನದಟ್ಟು ಮಾಡಿಕೊಡಬಹುದು. ತನ್ನದೇ ಸಂಪುಟದ ಮಂತ್ರಿಯೊಬ್ಬ ಕೇಂದ್ರ ಸರ್ಕಾರವನ್ನೇ ಧಿಕ್ಕರಿಸಿ ಮಾತನಾಡಿದಾಗಲೂ ಆ ಬಗ್ಗೆ ಮುಖ್ಯಮಂತ್ರಿ ಚಕಾರವೆತ್ತದೇ ನುಣುಚಿಕೊಳ್ಳುತ್ತಿರುವುದರ ಉದ್ದೇಶವೇನು?

ಗಣಿ ರೆಡ್ಡಿಗಳ ಡಕಾಯತಿಯ ಬಗ್ಗೆ ಮುಖ್ಯಮಂತ್ರಿಗೆ ಸ್ಪಷ್ಟ ಮಾಹಿತಿಯಿದೆ. ಅನಂತಪುರದ ರಾಯದುರ್ಗ ತಾಲ್ಲೂಕಿನ ಕರ್ನಾಟಕದ ಗಡಿಗೆ ಹೊಂದಿಕೊಂಡಂತೆ ಹಲಕುಂದಿ, ಹೊನ್ನಳ್ಳಿ ಮತ್ತು ಬೆಳಗಲ್ ಪ್ರದೇಶದ ಗಡಿ ನಕಾಶೆಯನ್ನು ತಿದ್ದಿದ ಗಡಿ ರೆಡ್ಡಿಗಳು ಆ ಭಾಗವೊಂದರಲ್ಲೇ ಹದಿನಾರು ಕಿಲೋಮೀಟರ್‌ನಷ್ಟು ಕರ್ನಾಟಕದ ಭೂಪ್ರದೇಶವನ್ನು ಆಕ್ರಮಿಸಿ ಆಂಧ್ರಕ್ಕೆ ಸೇರಿಸಿದ್ದು ಮುಖ್ಯಮಂತ್ರಿ ಯಡ್ಡಿಗೆ ಚೆನ್ನಾಗಿ ಗೊತ್ತಿದೆ.

ಇದಿಷ್ಟೇ ಅಲ್ಲದೇ ಸಂಕೂರು ತಾಲ್ಲೂಕಿನ ತುಮಟೆ, ವಿಠಲಾಪುರ ಮತ್ತು ಸಿದ್ದಾಪುರ ಭಾಗದಲ್ಲಿ ಮತ್ತೆ ಹದಿನೆಂಟು ಕಿ.ಮೀ.ಗಳಷ್ಟು ಕರ್ನಾಟಕದ ಭೂಪ್ರದೇಶದ ನಕಾಶೆ ತಿದ್ದಿ ಆಂಧ್ರಕ್ಕೆ ಸೇರಿಸಿದ ರೆಡ್ಡಿಗಳ ದುರಾಚಾರವೂ ಮುಖ್ಯಮಂತ್ರಿಗೆ ಮನದಟ್ಟಾಗಿದೆ.

ಅಸಲಿಗೆ ಆಂಧ್ರ ಮತ್ತು ಕರ್ನಾಟಕದ ಮಧ್ಯೆ ಗಡಿವಿವಾದವನ್ನು ಹುಟ್ಟು ಹಾಕಿದ್ದೇ ಖದೀಮ ಜನಾರ್ದನರೆಡ್ಡಿ. 2007ರಲ್ಲಿ ಓಬಳಾಪುರಂ ಮೈನಿಂಗ್ ಕಂಪನಿ ಸಂಕೂರಿನ ಗಡಿಯ ತುಮಟೆ, ವಿಠಲಾಪುರ ಮತ್ತು ಮಲಪನ ಗುಡಿಗೆ ಹೊಂದಿಕೊಂಡಂತೆ ನಕಾಶೆ ತಿದ್ದಿ ಗಣಿಗುತ್ತಿಗೆ ಪಡೆದಾಗಲೇ ಆಗ ಬಳ್ಳಾರಿ ವಲಯಕ್ಕೆ ಡಿಎಫ್‌ಓ ಆಗಿದ್ದ ರಾಜಶೇಖರ್ ಸರ್ಕಾರಕ್ಕೆ ಸವಿಸ್ತಾರವಾದ ದೂರು ಕೊಟ್ಟರು. ಅಲಕುಂದಿ, ಬೆಳಗಲ್, ಹೊನ್ನಾಳಿ ಭಾಗದ ಹದಿನಾರು ಕಿ.ಮೀ. ಮತ್ತು ಮಲಪನ ಗುಡಿ, ತುಮಟೆ, ವಿಠಲಾಪುರ ಭಾಗದ ಹದಿನೆಂಟು ಕಿ.ಮೀ. ಒಟ್ಟುವರಿ ಸೇರಿದರೆ ಗಣಿ ರೆಡ್ಡಿಗಳು ನಕಾಶೆ ತಿದ್ದಿ ಕರ್ನಾಟಕದ ಒಟ್ಟು ಮೂವತ್ನಾಲ್ಕು ಕಿ.ಮೀ. ಭೂಪ್ರದೇಶವನ್ನು ಆಂಧ್ರಕ್ಕೆ ಸೇರಿಸಿದ್ದರೆಂದು ಅರಣ್ಯಾಧಿಕಾರಿ ರಾಜಶೇಖರ್‌ರವರೇ ವರದಿ ಕೊಟ್ಟದ್ದನ್ನು ಸರ್ಕಾರ ಲೆಕ್ಕಕ್ಕಿಡಲೇ ಇಲ್ಲ.

ಅರಣ್ಯಾಧಿಕಾರಿ ರಾಜಶೇಖರ್ ನೀಡಿದ ವರದಿ ಒತ್ತಟ್ಟಿಗಿರಲಿ, ಬಿಜೆಪಿ ಅಧಿಕಾರಕ್ಕೆ ಬಂದು ಯಡ್ಡಿಯೇ ಮುಖ್ಯಮಂತ್ರಿಯಾದ ನಂತರವೂ ಲೋಕಾಯುಕ್ತ ವರದಿ ನೀಡಿದೆ. ತುಮಟೆ, ವಿಠಲಾಪುರ ಭಾಗದಲ್ಲಿ ರೆಡ್ಡಿಗಳು ಬ್ರಿಟಿಷ್ ಕಾಲದ ಟ್ರೈ ಜಂಕ್ಷನ್ ಪಾಯಿಂಟ್‌ಗಳನ್ನೇ ಧ್ವಂಸಗೊಳಿಸಿ ಟೋಪಶೀಟ್ ನಕಾಶೆಯನ್ನೇ ಹಾಳುಗೆಡವಿದ ಬಗ್ಗೆ ಲೋಕಾಯುಕ್ತರ ವರದಿಯಲ್ಲಿ ಸ್ಪಷ್ಟ ವಿವರಗಳಿದ್ದವು. ಹಾಗೇ ಕರ್ನಾಟಕದ ಗಡಿನಕಾಶೆಯನ್ನು ತಿದ್ದಿದ ರೆಡ್ಡಿ ಖದೀಮರು ಸಹಸ್ರಾರು ಕೋಟಿ ರೂಪಾಯಿಗಳ ಮೊತ್ತದ ಅದಿರು ದೋಚಿದ್ದನ್ನೂ ಲೋಕಾಯುಕ್ತರೇ ಪತ್ತೇ ಹಚ್ಚಿ ಯಡ್ಡಿ ಸರ್ಕಾರಕ್ಕೆ ವರದಿ ಒಪ್ಪಿಸಿದಾಗಲೂ ಮುಖ್ಯಮಂತ್ರಿ ಯಡಿಯೂರಪ್ಪ ಈ ಬಗ್ಗೆ ಏಕೆ ಮುಗುಮ್ಮಾದರು?

ಇದು ಇಡೀ ಗಣಿಲೂಟಿ ಹಗರಣದ ಮೂಲಪ್ರಶ್ನೆ. ತನ್ನದೇ ಸರ್ಕಾರದ ಹಿರಿಯ ಅರಣ್ಯಾಧಿಕಾರಿ ರಾಜಶೇಖರ್ ನೀಡಿದ ವರದಿಯ ಬಗ್ಗೆ ಮುಖ್ಯಮಂತ್ರಿ ಯಡ್ಡಿಗೆ ನಂಬಿಕೆಯಿಲ್ಲ. ಸ್ವತಃ ಲೋಕಾಯುಕ್ತರೇ ಇಡೀ ಗಣಿ ಲೂಟಿಯ ವಿರುದ್ಧ ಸಾಕ್ಷ್ಯಾಧಾರಗಳ ಸಮೇತ ದೂರು ಕೊಟ್ಟಾಗಲೂ ಮುಖ್ಯಮಂತ್ರಿಗದು ಬೇಕಿಲ್ಲ. ಈಗ ಕೇಂದ್ರ ಸರ್ಕಾರದ ಅರಣ್ಯ ಇಲಾಖೆಯ ಹಿರಿಯ ಐಜಿಪಿ ಬಿ.ಕೆ. ಸಿಂಗ್‌ರೇ ತನಿಖೆ ನಡೆಸಿ ಓಬಳಾಪುರಂ ಮೈನಿಂಗ್ ಕಂಪೆನಿ ಸೇರಿದಂತೆ ಒಟ್ಟು ಐದು ಗಣಿ ಗುತ್ತಿಗೆಗಳನ್ನು ಅಮಾನತುಗೊಳಿಸುವಂತೆ ಆದೇಶ ಹೊರಡಿಸಿದಾಗಲೂ ಯಡ್ಡಿ ಅದನ್ನು ಆಂಧ್ರ ಸರ್ಕಾರದ ಮೇಲೆ ಹೊರಿಸುತ್ತಿದ್ದಾರೆ.

ಹಕೀಕತ್ತೇನೆಂದರೆ, ಗಣಿಗುತ್ತಿಗೆಗೆ ಪರವಾನಗಿ ಕೊಟ್ಟಿದ್ದು ಆಂಧ್ರ ಸರ್ಕಾರವಾದರೂ ರೆಡ್ಡಿ ಗ್ಯಾಂಗ್ ಅದಿರು ದೋಚುತ್ತಿರುವುದು ಕನ್ನಡ ನೆಲದಲ್ಲಿ. ಜನಾರ್ದನ ರೆಡ್ಡಿ ತಾನೇ ತಿದ್ದಿದ ಕಳ್ಳ ನಕಾಶೆಯ ಆಧಾರದ ಮೇಲೆ ಆಂಧ್ರ ಸರ್ಕಾರವನ್ನು ಬುಟ್ಟಿಗೆ ಹಾಕಿಕೊಂಡು ಗುತ್ತಿಗೆ ಪಡೆದಿರಬಹುದು. ಆದರೆ ಕರ್ನಾಟಕ ಸರ್ಕಾರದ ಬಳಿ ತನ್ನದೇ ಆದ ಗಡಿನಕಾಶೆಯಿತ್ತಲ್ಲ? ಕರ್ನಾಟಕದ ಅರಣ್ಯ ಇಲಾಖೆಯ ನಿಯಂತ್ರಣದಲ್ಲಿದ್ದ ಭೂಪ್ರದೇಶದಲ್ಲಿ ಯಾರೇ, ಯಾವುದೇ ರೀತಿಯ ಪರವಾನಗಿ ಹಿಡಿದು ಅದಿರು ದೋಚಲು ನಿಂತರೂ ಅಂಥವರನ್ನು ನಿರ್ದಾಕ್ಷಿಣ್ಯವಾಗಿ ಬಂಧಿಸಬಹುದಿತ್ತು. ಇದಕ್ಕೆ ಸ್ಪಷ್ಟ ಉದಾಹರಣೆಯೆಂದರೆ 1965 ರಲ್ಲಿ ಹಿಂದ್ ಟ್ರೇಡರ್ಸ್‌ರವರ ಮಲಪನಗುಡಿಯಲ್ಲಿದ್ದ ಗಣಿಯಿಂದ ಅದಿರು ತೆಗೆದ ಟಪಾಲ್ ತಿಮ್ಮಪ್ಪನವರ ವಿರುದ್ಧ ಬಳ್ಳಾರಿ ಜಿಲ್ಲಾಡಳಿತ ಕೈಗೊಂಡ ಕಟ್ಟುನಿಟ್ಟಿನ ಕ್ರಮ.

ಆಗ ಟಪಾಲ್ ತಿಮ್ಮಪ್ಪನವರ ಗಣಿಯಿದ್ದದ್ದು ಆಂಧ್ರದ ಸರಹದ್ದಿನಲ್ಲಿ. ಇವತ್ತು ಜನಾರ್ದನ ರೆಡ್ಡಿ ಮಾಡಿದಂತೆ ಆವತ್ತು ಟಪಾಲ್ ತಿಮ್ಮಪ್ಪ ಆಂಧ್ರದ ನಕಾಶೆ ಮತ್ತು ಪರವಾನಗಿ ಹಿಡಿದು ಕರ್ನಾಟಕದ ಗಡಿಯಲ್ಲಿದ್ದ ಹಿಂದ್ ಟ್ರೇಡರ್ಸ್‌ನವರ ಗಣಿಗೆ ನುಗ್ಗಿ ಅದಿರು ಸಾಗಿಸುತ್ತಾರೆ. ಇದರ ವಿರುದ್ಧ ಹಿಂದ್ ಟ್ರೇಡರ್ಸ್ ಬಳ್ಳಾರಿ ಜಿಲ್ಲಾಧಿಕಾರಿಗಳಿಗೆ ದೂರು ಕೊಡುತ್ತಾರೆ. ಆಗ ಬಳ್ಳಾರಿಯ ಜಿಲ್ಲಾಧಿಕಾರಿ ಟಪಾಲ್ ತಿಮ್ಮಪ್ಪನವರ ಲಾರಿ ಇತ್ಯಾದಿಗಳನ್ನು ವಶಪಡಿಸಿಕೊಳ್ಳುತ್ತಾರೆ. ಅದಿರು ತೆಗೆಯದಂತೆ ಪೊಲೀಸರನ್ನಿಟ್ಟು ಕ್ರಮಕೈಗೊಳ್ಳುತ್ತಾರೆ. ಹೀಗೆ ಕರ್ನಾಟಕದ ಭೂಭಾಗಕ್ಕೆ ನುಗ್ಗಿ ಹಿಂದ್ ಟ್ರೇಡರ್ಸ್‌ನವರ ಗುತ್ತಿಗೆ ಪ್ರದೇಶದ ಅದಿರು ದೋಚಿದ ಟಪಾಲ್ ತಿಮ್ಮಪ್ಪನವರ ವಿರುದ್ಧ 1965 ರಲ್ಲಿ ಬಳ್ಳಾರಿ ನ್ಯಾಯಾಲಯ ಮೂರೂವರೆ ಸಾವಿರ ರೂಪಾಯಿಗಳ ದಂಡ ವಿಧಿಸುತ್ತದೆ. ಆ ಮೊತ್ತದ ದಂಡವನ್ನು ಟಪಾಲ್ ತಿಮ್ಮಪ್ಪ ಸರ್ಕಾರಕ್ಕೆ ಪಾವತಿಸಿದ್ದೂ ಆಗಿದೆ.

ಆವತ್ತಿದ್ದ ಮುಖ್ಯಮಂತ್ರಿಗಳಾಗಲಿ, ಬಳ್ಳಾರಿಯ ಜಿಲ್ಲಾಡಳಿತವಾಗಲಿ ಇವತ್ತಿನಂತೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಲಿ, ಜಂಟಿ ಸರ್ವೆಯಾಗಲಿ ಎನ್ನಲಿಲ್ಲ. ಯಾರೇ ಮುಖ್ಯಮಂತ್ರಿಯೊಬ್ಬ ತನ್ನ ರಾಜ್ಯದ ಗಡಿಯೊಳಕ್ಕೆ ಯಾರೇ ನುಗ್ಗಿ ಅದಿರು ದೋಚಿದರೆಂದರೆ, ಮೊದಲು ಅವರನ್ನು ಬಂಧಿಸಿ ಜೈಲಿಗೆ ಹಾಕಬೇಕೇ ಹೊರತು ಕಳ್ಳ ತೋರಿಸಿದ ನಕಾಶೆಯನ್ನು ನಂಬುವುದಲ್ಲ.

ಡಿಎಫ್‌ಓ ರಾಜಶೇಖರ್‌ರವರೇ ಗಣಿ ರೆಡ್ಡಿಗಳ ನಕಲಿ ನಕಾಶೆಯ ಮೋಸದ ವಿರುದ್ಧ ಸ್ಪಷ್ಟ ವರದಿ ಕೊಟ್ಟಿದ್ದಾರೆ. ಲೋಕಾಯುಕ್ತ ಇನ್ನೂ ನಿಖರವಾಗಿ ತನಿಖೆ ನಡೆಸಿದೆ. ಸರ್ಕಾರಕ್ಕೆ ವರದಿಯನ್ನೂ ಒಪ್ಪಿಸಿದೆ. ಅಷ್ಟೇ ಏಕೆ, ಸ್ವತಃ ಆಂಧ್ರ ಸರ್ಕಾರವೇ ಕರ್ನಾಟಕದೊಡನೆ ತನಗೆ ಯಾವುದೇ ಗಡಿ ತಂಟೆಯಿಲ್ಲ ಎಂದು ಸ್ಪಷ್ಟನೆ ನೀಡಿದೆ. ಕರ್ನಾಟಕದ ಅರಣ್ಯಕ್ಕೆ ನುಗ್ಗಿ ಯಾರೇ ಅದಿರು ದೋಚಿದರೂ ಅದನ್ನು ತಡೆಯಲು ಅರಣ್ಯ ಇಲಾಖೆಯಿದೆ. ಇಲ್ಲಿ ಸರ್ಕಾರ ಮಾಡಬೇಕಾದ್ದು ತನ್ನ ನಿಯಂತ್ರಣದಲ್ಲಿದ್ದ ಭೂಭಾಗಕ್ಕೆ ನುಗ್ಗಿ ಅದಿರು ದೋಚುವವರನ್ನು ಹಿಡಿದು ಜೈಲಿಗೆ ಹಾಕುವುದೇ ಹೊರತು ದೋಚಲು ಬಂದವನು ಕೊಟ್ಟ ನಕಲಿ ದಾಖಲೆಯನ್ನು ನಂಬುವುದಲ್ಲ. ಗಣಿ ರೆಡ್ಡಿಗಳು ಮಾಡಿದಂತೆ ಬೇರೆ ಯಾರೇ ನಕಲಿ ದಾಖಲೆ ಸೃಷ್ಟಿಸಿ ಕರ್ನಾಟಕದ ಗಡಿಯೊಳಕ್ಕೆ ನುಗ್ಗಿ ಅದಿರು ದೋಚಿದರೆಂದರೆ ಅರಣ್ಯ ಇಲಾಖೆ ಸುಮ್ಮನಿರುತ್ತಾ? ಪೊಲೀಸರು ಕೈಕಟ್ಟಿ ಕೂರುತ್ತಾರಾ? ಜಿಲ್ಲಾಡಳಿತದ ನಿಷ್ಕ್ರಿಯವಾಗಿರುತ್ತಾ?

ಪ್ರಶ್ನೆ ಗಣಿ ರೆಡ್ಡಿಗಳ ಲೂಟಿಗೆ ಸರ್ಕಾರವೇ ಕೈಜೋಡಿಸಿ ಜನರ ದಿಕ್ಕು ತಪ್ಪಿಸುತ್ತಿರುವುದೇ ಹೊರತು ಆಂಧ್ರದ ಒತ್ತುವರಿಯಲ್ಲ. ಈಗಲೂ ಅಷ್ಟೇ, ಕರ್ನಾಟಕದ ಭೂಭಾಗದ ಮೂವತ್ನಾಲ್ಕು ಕಿ.ಮೀ. ಭೂಪ್ರದೇಶವನ್ನು ಆಕ್ರಮಿಸಿಕೊಂಡು ಅದಿರು ದೋಚುತ್ತಿರುವ ರೆಡ್ಡಿ ಗ್ಯಾಂಗ್ ವಿರುದ್ಧ ಕೇಂದ್ರ ಸರ್ಕಾರವಾಗಲಿ, ಅದರ ಜಂಟಿ ಸರ್ವೇಯಾಗಲಿ ಬೇಕೇ ಇಲ್ಲ, ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆಯನ್ನು ಜೊತೆ ಮಾಡಿ ಯಾರ್‍ಯಾರು ಅದಿರು ದೋಚುತ್ತಿದ್ದಾರೋ ಅದನ್ನು ಜಪ್ತಿ ಮಾಡಿ ಎಂದರೆ ಇಡೀ ಪ್ರಕರಣವೇ ಅಂತ್ಯ ಕಾಣುತ್ತದೆ. ಅದನ್ನು ಬಿಟ್ಟು ಕೇಂದ್ರ ಸರ್ಕಾರವೇ ಕ್ರಮಕೈಗೊಳ್ಳಲಿ. ಕೇಂದ್ರವೇ ನಿಂತು ಜಂಟಿ ಸರ್ವೇ ನಡೆಸಲಿ ಎಂದು ಮುಖ್ಯಮಂತ್ರಿಯೊಬ್ಬ ಜಾರಿಕೊಳ್ಳುತ್ತಾನೆಂದರೆ; ಆತ ರೆಡ್ಡಿಗಳ ಗಣಿ ಲೂಟಿಯಲ್ಲಿ ಶಾಮೀಲಾಗಿದ್ದಾನೆಂದೇ ಅರ್ಥ. ರೆಡ್ಡಿ ಸೃಷ್ಟಿಸಿದ ನಕಲಿ ನಕಾಶೆಯನ್ನು ಪರೀಕ್ಷಿಸಲು ಕೇಂದ್ರ ಸರ್ಕಾರವೇ ಬೇಕೆ? ಯಾವುದೇ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಒಬ್ಬನಿಗೆ ವಹಿಸಿಕೊಟ್ಟರೂ ಚೆನ್ನಾಗಿ ತನಿಖೆ ಮಾಡುತ್ತಾನೆ. ಸಮಸ್ಯೆಯಿರುವುದು ಕರ್ನಾಟಕದ ಅಧಿಕಾರಿಗಳು ಮತ್ತು ಸರ್ಕಾರದ ಪ್ರಾಮಾಣಿಕತೆಯಲ್ಲೇ ಹೊರತು. ಆಂಧ್ರದಲ್ಲಾಗಲಿ, ಕೇಂದ್ರದಲ್ಲಾಗಲಿ ಅಲ್ಲ.

ಇದು ಗಣಿಕಳ್ಳ ಮಂತ್ರಿಯ ಪರವಾಗಿ ಮುಖ್ಯಮಂತ್ರಿಯ ಪಿಳ್ಳೇ ನೆಪ ಮಾತ್ರ.

● ರಾ. ಸೋಮನಾಥ್

ಅಧ್ವಾನಿ ಅದೆಷ್ಟು 'ಸಮರ್ಥ' ನಾಯಕ? ▶▶▶ 3

9. ತೆಹೆಲ್ಕಾ ಪತ್ರಿಕೆಯ ಮೇಲೆ ದಾಳಿ

10. 1998 ರಿಂದ 2004ರ ತನಕ ಗೃಹಮಂತ್ರಿಯಾಗಿದ್ದರೂ ಗಲ್ಲು ಶಿಕ್ಷೆಗೆ ಗುರಿಯಾಗಿರುವ ಡಜನ್‌ಗಟ್ಟಲೆ ಜನ ಜೀವ ದಯೆ ಕೋರಿ ಸಲ್ಲಿಸಿದ್ದ ಅರ್ಜಿಗಳಲ್ಲಿ ಒಂದೇ ಒಂದರ ಬಗ್ಗೆಯೂ ನಿರ್ಧಾರ ತೆಗೆದುಕೊಳ್ಳಲಿಲ್ಲ ಅಧ್ವಾನಿ. ಆದರೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಫ್ಜಲ್ ಗುರುವನ್ನು ಗಲ್ಲಿಗೇರಿಸಲು ತಡ ಮಾಡುತ್ತಿದೆ ಎಂದು ಇದೇ ಅಧ್ವಾನಿ ಬಾಯಿಬಡಿದುಕೊಳ್ಳುತ್ತಿದ್ದಾರೆ.

ವಾಸ್ತವವಾಗಿ ಅಧ್ವಾನಿಗೆ ಈ ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಂಸ್ಕೃತಿಯ ಬಗ್ಗೆ ಜನಪರವಾದ ಕಾಳಜಿಯಾಗಲಿ, ಸ್ಪಷ್ಟ ಚಿಂತನೆಯಾಗಲಿ ಇಲ್ಲವೇ ಇಲ್ಲ. ಆತನಲ್ಲಿರುವುದು ಸಂಘಪರಿವಾರದ ದ್ವೇಷ ಸಿದ್ಧಾಂತ ಮತ್ತು ಚಿಂತನೆ ಮಾತ್ರ. ಬಿಜೆಪಿಗಳು ಅಧ್ವಾನಿಯನ್ನು 'ಲೋಹ ಪುರುಷ' ಎಂದೆಷ್ಟೇ ಅಟ್ಟಕ್ಕೇರಿಸಿದರೂ ಆತ ತನ್ನ ಕ್ರಿಯೆಗಳ ಮೂಲಕ ತಾನೊರ್ವ 'ಟೊಳ್ಳು ಮನುಷ್ಯ' ಎಂದು ಈಗಾಗಲೇ ಜಗಜ್ಜಾಹೀರುಪಡಿಸಿಯಾಗಿದೆ.

ಇದು ಬಿಜೆಪಿಗಳಿಗೂ ಗೊತ್ತಾಗಿರುವುದರಿಂದಲೇ ಅವರೀಗ "ನರೇಂದ್ರ ಮೋದಿ ಮುಂದಿನ ಪ್ರಧಾನಿ" ಎಂದು ಸಾರಲಾರಂಭಿಸಿದ್ದಾರೆ. ಹಾಗೆ ಹೇಳುವ ಮೂಲಕವಾದರೂ ಬಿಜೆಪಿಗೆ ಸ್ವಲ್ಪ ಹೆಚ್ಚಿನ ಸಂಖ್ಯೆಯ ಮತಗಳು ಬಂದು ಅಧ್ವಾನಿ ಪ್ರಧಾನಿಯಾಗಲಿ" ಎಂದು ಕನಸು ಕಾಣುತ್ತಿದ್ದಾರೆ.

'ಭಾವಿ ಪ್ರಧಾನಿ' ಅಧ್ವಾನಿ 'ಲೋಹ ಪುರುಷ'ನಾದರೆ ಹಾಲಿ ಪ್ರಧಾನಿ ಮನಮೋಹನ್ ಸಿಂಗ್ ನಿಕಮ್ಮ (ನಿಷ್ಪ್ರಯೋಜಕ) ಎಂದು ಅಧ್ವಾನಿ ಸಹಿತ ಚಡ್ಡಿಗಳು ಲೇವಡಿ ಮಾಡುತ್ತಲೇ ಬಂದಿದ್ದಾರೆ. ಮನಮೋಹನ್ ಸಿಂಗ್ ಮತ್ತು ಅವರ ಆರ್ಥಿಕ ನೀತಿಗಳ ಬಗ್ಗೆ ನನಗೆ ಅದೆಷ್ಟೇ ಭಿನ್ನಾಭಿಪ್ರಾಯವಿದ್ದರೂ ಅವರು ಅವಕಾಶ ಸಿಕ್ಕಾಗಲೆಲ್ಲ ಅಧ್ವಾನಿಯನ್ನು ಸಖತ್ತಾಗಿ ತರಾಟೆಗೆ ತೆಗೆದುಕೊಂಡಿರುವುದು ಮೆಚ್ಚುಗೆಯಾಗಿದೆ.

ಅಮೆರಿಕದೊಂದಿಗಿನ ಅಣುಒಪ್ಪಂದ ಕುರಿತಂತೆ ಸಂಸತ್ತಿನಲ್ಲಿ ಅಧ್ವಾನಿ ಮತ್ತು ಇತರರು ದೊಡ್ಡ ಗದ್ದಲವನ್ನೆಬ್ಬಿಸಿ ಪ್ರಧಾನಿ ಸಿಂಗ್ ಅವರಿಗೆ ಉತ್ತರಿಸಲೂ ಅವಕಾಶ ನೀಡದಂತೆ ಮಾಡಿದ್ದರು. ಆಗ ಸಿಂಗ್ ಏನು ಮಾಡಿದರು ಎಂದು ನೆನಪಿದೆಯೇ?

ತಮ್ಮ ಉತ್ತರವನ್ನು ಲಿಖಿತರೂಪದಲ್ಲಿ ಸಂಸತ್ತಿಗೆ ಸಲ್ಲಿಸಿದ ಸಿಂಗ್ ಅವರು ಅದರಲ್ಲಿ ಹೀಗೆ ಬರೆದಿದ್ದರು:

"ವಿರೋಧ ಪಕ್ಷದ ನಾಯಕರಾದ ಎಲ್.ಕೆ. ಅಧ್ವಾನಿಯವರು ನನ್ನ ಕಾರ್ಯದಕ್ಷತೆಯ ಬಗ್ಗೆ ಎಲ್ಲ ತರಹದ ಗುಣವಾಚಕಗಳನ್ನು ಉಪಯೋಗಿಸಿ ಅವಮಾನಿಸಲು ಯತ್ನಿಸಿದ್ದಾರೆ. ನನ್ನನ್ನು ಅತಿ ನಿಶ್ಶಕ್ತ ಪ್ರಧಾನಿ ಎಂದೂ, ನಿಕಮ್ಮ (ನಿಷ್ಪ್ರಯೋಜಕ) ಎಂದೂ ಕರೆಯುವ ಮೂಲಕ ಪ್ರಧಾನಿ ಹುದ್ದೆಗೆ ಅವಮಾನ ಮಾಡಿದ್ದಾರೆ. ಪ್ರಧಾನಿಯಾಗುವ ತಮ್ಮ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಈ ಸರ್ಕಾರವನ್ನು ಉರುಳಿಸಲು ಮೂರು ಬಾರಿ ಪ್ರಯತ್ನಿಸಿದ್ದಾರೆ. ಅಧ್ವಾನಿಯವರ ಈ ಇಳಿವಯಸ್ಸಿನಲ್ಲಿ ಅವರು ತಮ್ಮ ಚಿಂತನಾ ಮಾದರಿಯನ್ನು ಬದಲಾಯಿಸಿಕೊಳ್ಳಬಲ್ಲರು ಎಂಬ ನಂಬಿಕೆ ನನಗಿಲ್ಲ. ಆದರೆ ಅವರ ಮತ್ತು ಈ ದೇಶದ ಹಿತಾಸಕ್ತಿಗಾಗಿ ಅವರು ತಮ್ಮ ಜ್ಯೋತಿಷಿಗಳನ್ನು ಬದಲಾಯಿಸಿಕೊಳ್ಳಲಿ ಎಂದು ಆಶಿಸುತ್ತೇನೆ. ಅಂದಹಾಗೆ ಬೇರೆಯವರನ್ನು ನಿಷ್ಪ್ರಯೋಜಕ ಎಂದು ದೂರುವ ಮುನ್ನ ಅಧ್ವಾನಿಯವರು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲಿ."

'ಲೋಹ ಪುರುಷ' ಅಧ್ವಾನಿಗೆ ಇದಕ್ಕಿಂತ ದೊಡ್ಡ ಮುಖಭಂಗ ಇನ್ನೊಂದಿರಲಾರದು. ಇಂತಹ ಅಧ್ವಾನಿ ಅದೆಂತಹ 'ಸಮರ್ಥ ನಾಯಕ'ನಾಗಬಲ್ಲ? ಅದೆಂತಹ 'ನಿರ್ಣಾಯಕ ಸರ್ಕಾರ' ನೀಡಬಲ್ಲ?


ಖ್ಯಾತ ಲೇಖಕ ಖುಷವಂತ್ ಸಿಂಗ್ ಅವರು ಹೇಳಿರುವಂತೆ "ನಾವೆಂದೂ ಅಧ್ವಾನಿಯ ಸಿದ್ಧಾಂತಕ್ಕೆ ಮರುಳಾಗಿ ಈ ದೇಶ ಹಿಂದೂತ್ವವಾದಿಗಳ ಭರತವರ್ಷ ಆಗದಂತೆ ನೋಡಿಕೊಳ್ಳಬೇಕಿದೆ. ಮಾತ್ರವಲ್ಲ, ಇದನ್ನು ಗಾಂಧಿಯವರ ಆಶಯದಂತೆ ಜಾತ್ಯತೀತ ದೇಶವನ್ನಾಗಿ ಉಳಿಸಿಕೊಳ್ಳಬೇಕಿದೆ."

ಅದು ಅಧ್ವಾನಿ ಮತ್ತು ಬಿಜೆಪಿಯ ಸೋಲು ಮತ್ತು ನಾಶದಿಂದಲೇ ಸಾಧ್ಯ...


● ಗೌರಿ ಲಂಕೇಶ್

ಹಂತಕ ಇಷ್ತಿಯಾಕ್, ಶೂಟರ್ ಯುಸೂಫ್ ಪಟೇಲ್, ಚೀಟರ್ ದಾಕಾ

ಮುಸ್ಲಿಂ ರೌಡಿಗಳೇ ಬಿಜೆಪಿ ನಾಯಕರು!



ಹುಟ್ಟಾ ಮುಸ್ಲಿಂ ದ್ವೇಷಿಯಾದ ಬಿಜೆಪಿಗೂ ಶಿವಾಜಿನಗರದ ಮುಸ್ಲಿಂ ರೌಡಿಗಳಿಗೂ ನೆಂಟಸ್ತಿಕೆ ಚಿಗುರಿಬಿಟ್ಟಿದೆ! ಮುಸ್ಲಿಂ ಪಾಪಕೂಪದ ಖತರ್‌ನಾಕ್ ರೌಡಿ ಇಷ್ತಿಯಾಕ್ ಪೈಲ್ವಾನ್ ಮತ್ತು ಬಿಜೆಪಿ ಸರ್ಕಾರದ ಪೊಲೀಸು ಮಂತ್ರಿ ವಿ.ಎಸ್. ಆಚಾರ್ಯ ಒಟ್ಟೊಟ್ಟಿಗೆ ನಿಂತು ಪೋಜು ಕೊಡುತ್ತಿರುವ ಕಟೌಟುಗಳು ಶಿವಾಜಿನಗರದ ಸಂದಿಗೊಂದಿಗಳಲ್ಲೂ ಇಟ್ಟಾಡುತ್ತಿದೆ. ಇದೇ ಇಷ್ತಿಯಾಕ್ ಪೈಲ್ವಾನನ ಜೊತೆ ಬಿಜೆಪಿ ಸರ್ಕಾರದ ಅಬಕಾರಿ ಮಂತ್ರಿ ಕಟ್ಟಾನಾಯ್ಡು ಕೂಡ ನಿಂತು ಫೋಟೋ ತೆಗೆಸಿಕೊಂಡಿದ್ದಾರೆ. ವಕ್ಫ್ ಸಚಿವ ಮಮ್ತಾಜ್ ಆಲಿಖಾನ್ ಜೊತೆಗೂ ರೌಡಿ ಇಷ್ತಿಯಾಕ್ ಪೈಲ್ವಾನ್ ನಿಂತು ತೆಗೆಸಿಕೊಂಡ ಫೋಟೋಗಳು ಶಿವಾಜಿನಗರದ ಗೋಡೆಗೋಡೆಗಳಲ್ಲೂ ಕಂಗೊಳಿಸುತ್ತಿವೆ!



ಹಾವಿಗೂ ಮುಂಗುಸಿಗೂ ದೋಸ್ತಿ ಕುದುರದಿದ್ದರೇನಂತೆ–

ಹುಟ್ಟಾ ಮುಸ್ಲಿಂ ದ್ವೇಷಿಯಾದ ಬಿಜೆಪಿಗೂ ಶಿವಾಜಿನಗರದ ಮುಸ್ಲಿಂ ರೌಡಿಗಳಿಗೂ ನೆಂಟಸ್ತಿಕೆ ಚಿಗುರಿಬಿಟ್ಟಿದೆ! ಮುಸ್ಲಿಂ ಪಾಪಕೂಪದ ಖತರ್‌ನಾಕ್ ರೌಡಿ ಇಷ್ತಿಯಾಕ್ ಪೈಲ್ವಾನ್ ಮತ್ತು ಬಿಜೆಪಿ ಸರ್ಕಾರದ ಪೊಲೀಸು ಮಂತ್ರಿ ವಿ.ಎಸ್. ಆಚಾರ್ಯ ಒಟ್ಟೊಟ್ಟಿಗೆ ನಿಂತು ಪೋಜು ಕೊಡುತ್ತಿರುವ ಕಟೌಟುಗಳು ಶಿವಾಜಿನಗರದ ಸಂದಿಗೊಂದಿಗಳಲ್ಲೂ ಇಟ್ಟಾಡುತ್ತಿದೆ. ಇದೇ ಇಷ್ತಿಯಾಕ್ ಪೈಲ್ವಾನನ ಜೊತೆ ಬಿಜೆಪಿ ಸರ್ಕಾರದ ಅಬಕಾರಿ ಮಂತ್ರಿ ಕಟ್ಟಾನಾಯ್ಡು ಕೂಡ ನಿಂತು ಫೋಟೋ ತೆಗೆಸಿಕೊಂಡಿದ್ದಾರೆ. ವಕ್ಫ್ ಸಚಿವ ಮಮ್ತಾಜ್ ಆಲಿಖಾನ್ ಜೊತೆಗೂ ರೌಡಿ ಇಷ್ತಿಯಾಕ್ ಪೈಲ್ವಾನ್ ನಿಂತು ತೆಗೆಸಿಕೊಂಡ ಫೋಟೋಗಳು ಶಿವಾಜಿನಗರದ ಗೋಡೆಗೋಡೆಗಳಲ್ಲೂ ಕಂಗೊಳಿಸುತ್ತಿವೆ!

ಯಾರೇ ಧರ್ಮನಿಷ್ಠ ಮುಸ್ಲಿಮನೊಬ್ಬನಿಗೆ ಹುಟ್ಟಾ ಮುಸ್ಲಿಂ ವಿರೋಧಿಯಾದ ಬಿಜೆಪಿ ಹಿಡಿಸದಿದ್ದರೇನಂತೆ; ಬಿಜೆಪಿಗೆ ಮಾತ್ರ ಮುಸ್ಲಿಂ ರೌಡಿಗಳೇ ಬೇಕು!

ಕೇವಲ ಇಷ್ತಿಯಾಕ್ ಪೈಲ್ವಾನ್ ಮಾತ್ರವೇ ಅಲ್ಲ; ಶಿವಾಜಿನಗರದ ಮತ್ತೊಬ್ಬ ನಟೋರಿಯಸ್ ರಿವಾಲ್ವರ್ ಸ್ಮಗ್ಲರ್ ಯೂಸುಫ್ ಪಟೇಲ್, ರಸೆಲ್ ಮಾರ್ಕೆಟ್ಟಿನ ಮಗದೊಬ್ಬ ರೌಡಿ ಇಸಾಕ್ ಪೈಲ್ವಾನ್, ಇಷ್ತಿಯಾಕ್ ಗ್ಯಾಂಗಿನ ಪ್ರಮುಖ ಹಂತಕರಾದ ಜೇಬ್ ಲಿಯಾಖತ್, ಮುಜ್ಜಾ ಡ್ಯಾನಿ, ಶೇರೂ, ಚೀಟರ್ ಡಾಕಾ ಮತ್ತು ಇಮ್ತಿಯಾಜ್. ಹೀಗೆ ಮುಸ್ಲಿಂ ಭೂಗತಲೋಕದ ಅರ್ಧ ಡಜನ್ ರೌಡಿಗಳು ಸದ್ಯ ಬಿಜೆಪಿ ನಾಯಕರ ಪಟ್ಟಿನಲ್ಲಿ ಮಿಂಚುತ್ತಿದ್ದಾರೆ.


ಇಷ್ತಿಯಾಕ್ ಪೈಲ್ವಾನ್ ಸದ್ಯ ಶಿವಾಜಿನಗರದ ಡಾನ್. ಮೊದಲು ಪಾತಕಿ ತನ್ವೀರ್ ಗ್ಯಾಂಗಿನಲ್ಲಿದ್ದ. ಕೋಳಿ ಫಯಾಜ್‌ನ ಹಂತಕರ ಪೈಕಿ ಮೂವರನ್ನು ಒಬ್ಬೊಬ್ಬರಾಗಿ ತನ್ವೀರ್ ಜೊತೆ ಸೇರಿ ಮುಗಿಸಿದ. ನಂತರ ರಾಜಕಾರಣಿ ಜಲಾಲ್ ಪೈಲ್ವಾನ್‌ನ ಮಗ ಆಜಂ ಎಂಬ ಪ್ರಸಟನನ್ನು ಕತ್ತರಿಸಿ ಕೊಂದ. ಕ್ರಮೇಣ ತನ್ನ ಗುರು ತನ್ವೀರ್ ವಿರುದ್ಧವೇ ತಿರುಗಿಬಿದ್ದು ತಾನೇ ಶಿವಾಜಿನಗರದ ಡಾನ್ ಪಟ್ಟಕ್ಕೆ ಬಂದ. ಆಗ ಇಷ್ತಿಯಾಕ್‌ನನ್ನು ಮುಗಿಸಲು ಹೊರಟವನು ತನ್ವೀರ್‌ನ ಮತ್ತೊಬ್ಬ ಬಂಟ ತರಕಾರಿ ಖಲೀಲ್. ಅದೇ ತರಕಾರಿ ಖಲೀಲ್ ಮತ್ತು ಯುಸುಫ್ ಪಟೇಲ್ ಸೇರಿಕೊಂಡು ಇಷ್ತಿಯಾಕ್‌ನನ್ನು ಮುಗಿಸಲು ಹಾವೇರಿ ... ಎಂಬ ಶೂಟರ್‌ನನ್ನು ಛೂಬಿಟ್ಟರು. ಶೂಟರ್ ... ಅಲಸೂರಿನ ನಾಗಾ ಥೇಟರಿಗೆ ನುಗ್ಗಿದ್ದೇ ಇಷ್ತಿಯಾಕ್ ಎಂದೇ ಭಾವಿಸಿ ಆತನನ್ನೇ ಹೋಲುವ ಮಂಗಳೂರು ಮೂಲದ ಹೋಟೆಲಿಯರ್ ಒಬ್ಬನ ಮೇಲೆ ಫೈರ್ ಮಾಡಿಬಿಟ್ಟ.

ಯಾವ ನಾಗಾ ಥೇಟರ್ ಶೂಟೌಟ್ ಪ್ರಕರಣದಲ್ಲಿ ಯೂಸುಫ್ ಪಟೇಲ್‌ನನ್ನು ರಿವಾಲ್ವರ್ ಸಮೇತ ಪೊಲೀಸರು ಬಂಧಿಸಿದರೋ, ಅದೇ ಯುಸುಫ್ ಪಟೇಲ್ ಈಗ ತನ್ನ ಹಳೇ ದುಷ್ಮನ್ ಇಷ್ತಿಯಾಕ್‌ನ ಜೊತೆ ಬಿಜೆಪಿ ಸೇರಿದ್ದಾನೆ. ಇಷ್ತಿಯಾಕ್ ಸದ್ಯ ಬಿಜೆಪಿಯ ಮೈನಾರಿಟಿ ಮೋರ್ಚಾದ ಬೆಂಗಳೂರು ನಗರ ಘಟಕದ ಉಪಾಧ್ಯಕ್ಷನಾದರೆ, ರಿವಾಲ್ವರ್ ಸ್ಮಗ್ಲರ್ ಯುಸುಫ್ ಪಟೇಲ್ ಸಂಘಟನಾ ಕಾರ್ಯದರ್ಶಿ. ಬಿಜೆಪಿ ಮೈನಾರಿಟಿ ಮೋರ್ಚಾದ ಶಿವಾಜಿನಗರ ಘಟಕದ ಪ್ರಧಾನ ಕಾರ್ಯದರ್ಶಿಯಾಗಿರುವ ಇಷ್ತಿಯಾಕ್ ಪೈಲ್ವಾನ್ ಸದ್ಯ ಶಿವಾಜಿನಗರ ಪೊಲೀಸ್ ಠಾಣೆಯ ರೌಡಿ ಷೀಟರ್. ಈತ ಕೂಡ ರಿವಾಲ್ವರ್ ಸಮೇತ ಸಿಕ್ಕಿಬಿದ್ದಿದ್ದ. ಇದಲ್ಲದೇ ಇಷ್ತಿಯಾಕ್‌ನ ಬಂಟರಾದ ಚೀಟರ್ ಡಾಕಾ, ಇಮ್ತಿಯಾಜ್, ಮುಜ್ಜಾ ಜೇಬ್, ಶೇರೂ ಮುಂತಾದವರೆಲ್ಲರೂ ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾದ ವಿವಿಧ ಹುದ್ದೆಗಳ ವಿಜಿಟಿಂಗ್ ಕಾರ್ಡ್ ಮಾಡಿಸಿಕೊಂಡಿದ್ದಾರೆ.










ಇಂಥ ಖತರ್‌ನಾಕ್ ರೌಡಿಗಳೆಲ್ಲರನ್ನೂ ಬಿಜೆಪಿಗೆ ಕರೆತಂದದ್ದು ಅಬಕಾರಿ ಮಂತ್ರಿ ಕಟ್ಟಾ ಸುಬ್ರಮಣ್ಯ ನಾಯ್ಡು. ಮಾಜಿ ಮಂತ್ರಿ ರೋಷನ್‌ಬೇಗ್ ಆಸ್ಥಾನದ ದಂಡನಾಯಕನಂತಿದ್ದ ಇಷ್ತಿಯಾಕ್ ಪೈಲ್ವಾನ್ ಬಿಜೆಪಿ ಸರ್ಕಾರ ಬರುವುದಕ್ಕೂ ಮೊದಲೇ ಕಟ್ಟಾ ನಾಯ್ಡು ಶಿಷ್ಯನಾಗಿದ್ದ. ಅದು ರೋಷನ್‌ಬೇಗ್ ಮುಸ್ಲಿಂ ರೌಡಿಗಳನ್ನೆಲ್ಲ ತನ್ನ ಹತ್ತಿರಕ್ಕೆ ಬಿಟ್ಟುಕೊಳ್ಳದೇ ಹೊರಹಾಕಿದ ಗಳಿಗೆ. ಶಿವಾಜಿನಗರಕ್ಕೆ ಎಮ್ಮೆಲ್ಲೆಯಾಗಿದ್ದಷ್ಟೂ ದಿನ ಕಟ್ಟಾನಾಯ್ಡು ರೌಡಿ ಇಷ್ತಿಯಾಕ್‌ನನ್ನು ಓಲೈಸಿಕೊಂಡೇ ಬಂದ. ಕಟ್ಟಾ ಮಗ ಜಗ್ಗನ ಪಾಲಿಗಂತೂ ಇಷ್ತಿಯಾಕ್ ಗ್ಯಾಂಗೆಂದರೆ ಪಂಚಪ್ರಾಣದಂತಿತ್ತು.

ಯಾವತ್ತು ಶಿವಾಜಿನಗರವನ್ನು ತೊರೆದು ಕಟ್ಟಾ ಹೆಬ್ಬಾಳಕ್ಕೆ ವಲಸೆ ಬಂದರೋ ಅವರ ಪಾಲಿಗೆ ಇಷ್ತಿಯಾಕ್‌ನೇ ಆಪದ್ಬಾಂಧವನಾದ. ಎಲ್ಲಿ ಮುಸ್ಲಿಂ ಓಟುಗಳೆಲ್ಲ ಕಾಂಗ್ರೆಸ್ ಪಾಲಾಗಿ ಕಟ್ಟಾ ಸೋತು ಬಿಡುತ್ತಾರೋ ಎಂದು ತಲೆ ಓಡಿಸಿದ ಇಷ್ತಿಯಾಕ್ ತನ್ನ ಹಳೇ ದುಷ್ಮನ್ ಯುಸುಫ್ ಪಟೇಲ್‌ನನ್ನೇ ಸರಿಮಾಡಿಕೊಂಡು ಆತನಿಗೆ ಬಿಎಸ್‌ಪಿ ಟಿಕೆಟ್ ಕೊಡಿಸಿದ. ಬಿಎಸ್‌ಪಿ ಅಭ್ಯರ್ಥಿಯಾಗಿ ಸಾಕಷ್ಟು ಮುಸ್ಲಿಂ ಓಟು ಕಿತ್ತ ಯುಸುಫ್ ಪಟೇಲ್ ಪರೋಕ್ಷವಾಗಿ ಕಟ್ಟಾ ಗೆಲುವಿಗೆ ನೆರವಾಗಿದ್ದ. ಕಾಂಗ್ರೆಸ್ಸಿನ ಎಚ್.ಎಂ. ರೇವಣ್ಣ ಸೋತು ಕಟ್ಟಾ ಹೆಬ್ಬಾಳದಿಂದ ಗೆದ್ದು ಮಂತ್ರಿಯಾಗುವಲ್ಲಿ ಇಷ್ತಿಯಾಕ್‌ನ ಪಾಲು ಇದ್ದೇ ಇತ್ತು.


ಬಿಜೆಪಿ ಸರ್ಕಾರ ಬಂದಿದ್ದೇ ಶಿವಾಜಿನಗರದ ಸಮುದ್ ಹೌಸ್‌ನಲ್ಲಿ ಬಿಜೆಪಿ ಪರವಾಗಿ ಕೆಲ ಮುಸ್ಲಿಂ ಪುಢಾರಿಗಳು ಸಭೆ ಸೇರುವುದಕ್ಕೂ ಇಷ್ತಿಯಾಕ್‌ನೇ ಪ್ರಮುಖ ಪಾತ್ರಧಾರಿಯಾಗಿದ್ದ. ಮುಖ್ಯಮಂತ್ರಿ ಯಡಿಯೂರಪ್ಪನವರೇ ಅಧ್ಯಕ್ಷತೆ ವಹಿಸಿದ್ದ ಆ ಸಭೆಯಲ್ಲಿ ಕಟ್ಟಾ ಜೊತೆ ನಿಂತು ಮಿಂಚಿದ್ದು ಇಷ್ತಿಯಾಕ್ ಮತ್ತು ರೌಡಿ ಇಸಾಕ್. ಅದೇ ಸಭೆಯಲ್ಲಿ ಇಷ್ತಿಯಾಕ್‌ನನ್ನು ಬೆಂಗಳೂರು ನಗರ ಘಟಕದ ಅಲ್ಪಸಂಖ್ಯಾತ ಮೋರ್ಚಾದ ಉಪಾಧ್ಯಕ್ಷನನ್ನಾಗಿ ಘೋಷಿಸಲಾಯ್ತು.

ಮುಂದೆ ಇಷ್ತಿಯಾಕ್‌ನೇ ನಿಂತು ಶಿವಾಜಿನಗರದಲ್ಲಿ ತನ್ನ ಮನೆ ಮೇಲೇ ಬಿಜೆಪಿ ಬಾವುಟ ನೆಟ್ಟ. ತೀರ ಇತ್ತೀಚೆಗೆ ಹಜ್ ಯಾತ್ರಿಕರಿಗೆಂದು ಮುಖ್ಯಮಂತ್ರಿ ಏರ್ಪಡಿಸಿದ್ದ ವಿಶೇಷ ಔತಣಕೂಟದಲ್ಲಿ ಗೃಹ ಸಚಿವ ವಿ.ಎಸ್. ಆಚಾರ್ಯ, ವಕ್ಫ್ ಮಂತ್ರಿ ಮಮ್ತಾಜ್ ಆಲಿಖಾನ್ ಮಂತ್ರಿ ಕಟ್ಟಾ ಎಲ್ಲರ ಜೊತೆಗೂ ವಿಧವಿಧದ ಭಂಗಿಯಲ್ಲಿ ಇಷ್ತಿಯಾಕ್ ಫೋಟೋ ತೆಗೆಸಿಕೊಂಡ. ಅದೇ ಹೊತ್ತಿಗೆ ನಿಷ್ಠುರಿ ಪೊಲೀಸ್ ಅಧಿಕಾರಿ ಟೈಗರ್ ಅಶೋಕ್ ಕುಮಾರ್ ಭಾರತಿನಗರಕ್ಕೆ ಎಸಿಪಿಯಾಗಿ ಬಂದರು. ವಿಕಟವೆಂದರೆ ಇನ್ನೇನು ಅಶೋಕ್ ಕುಮಾರ್ ಇಡೀ ಇಷ್ತಿಯಾಕ್ ಗ್ಯಾಂಗನ್ನು ಎಳೆತಂದು ರುಬ್ಬಬೇಕೆನ್ನುವಷ್ಟರಲ್ಲಿ ಇಡೀ ಶಿವಾಜಿನಗರದ ತುಂಬ ಇಷ್ತಿಯಾಕ್ ಜೊತೆ ನಿಂತು ಪೋಜು ಕೊಡುತ್ತಿದ್ದ ಗೃಹಮಂತ್ರಿ ಆಚಾರ್ಯ, ಮುಖ್ಯಮಂತ್ರಿ ಯಡ್ಡಿ, ಕಟ್ಟಾ ನಾಯ್ಡುಗಳ ಕಟೌಟುಗಳೇ ಮಿಂಚುತ್ತಿದ್ದವು. ಮಂತ್ರಿ ಮಮ್ತಾಜ್ ಆಲಿಖಾನ್ ಪಕ್ಕ ನಿಂತ ಇಷ್ತಿಯಾಕ್‌ನ ಭಿತ್ತಿಪತ್ರ, ಮುಖ್ಯಮಂತ್ರಿ ಯಡ್ಡಿಗೆ ಹಾರ ಹಾಕುತ್ತಿರುವ ಇಷ್ತಿಯಾಕ್‌ನ ತರಹೇವಾರಿ ಕಟೌಟ್‌ಗಳು, ಗೃಹಮಂತ್ರಿ ಆಚಾರ್ಯರ ಪಕ್ಕದಲ್ಲೇ ನಿಂತು ಪುಷ್ಪಗುಚ್ಛ ಅರ್ಪಿಸುತ್ತಿರುವ ಇಷ್ತಿಯಾಕ್‌ನ ವಾಲ್‌ಪೋಸ್ಟರ್ ಇತ್ಯಾದಿಗಳನ್ನೆಲ್ಲ ಕಂಡಿದ್ದೇ ಪೊಲೀಸರು ಬೇಸ್ತುಬಿದ್ದರು. ಇನ್ನು ಟೈಗರ್ ಅಶೋಕ್‌ಕುಮಾರ್ ಇಷ್ತಿಯಾಕ್‌ನನ್ನು ಎಳೆತಂದು ರಿಪೇರಿ ಮಾಡುವುದುಂಟೆ?









ಹಿಂದೆ ಇದೇ ಯಡ್ಡಿ ಮತ್ತು ವಿ.ಎಸ್. ಆಚಾರ್ಯ ವಿರೋಧ ಪಕ್ಷದ ನಾಯಕರಾಗಿದ್ದಾಗ ರೋಷನ್‌ಬೇಗ್ ಜೊತೆ ರೌಡಿ ತನ್ವೀರ್‌ನಂತಿದ್ದ ಫೋಟೋ ತೋರಿಸಿ ವಿಧಾನಸಭೆಯಲ್ಲಿ ಬೊಬ್ಬೆಯಿಟ್ಟಿದ್ದರು. ರೋಷನ್‌ಬೇಗ್ ಆಗಿನ್ನೂ ಗೃಹಮಂತ್ರಿ. ಅದು ಯಾವುದೋ ಫೋನ್‌ಬೂತ್ ಉದ್ಘಾಟನೆಯಲ್ಲಿ ರೌಡಿ ತನ್ವೀರ್ ತೆಗೆಸಿಕೊಂಡಿದ್ದ ಫೋಟೋ. ತನ್ವೀರ್‌ಗೆ ಹೋಲಿಸಿದರೆ ಇಷ್ತಿಯಾಕ್ ಹೆಚ್ಚು ಅಪಾಯಕಾರಿ ಮತ್ತು ಮಹಾ ಪಾತಕಿ. ಆವತ್ತು ಜನತಾದಳ ಸರ್ಕಾರವಿದ್ದಾಗ ತನ್ವೀರ್‌ಗೆ ಪಕ್ಷದಲ್ಲಿ ಹುದ್ದೆ ಕೊಟ್ಟಿರಲಿಲ್ಲ, ಪಕ್ಷದ ಸದಸ್ಯತ್ವವನ್ನೂ ಕೊಟ್ಟಿರಲಿಲ್ಲ, ಗೃಹಮಂತ್ರಿಯಾಗಿದ್ದ ರೋಷನ್ ಬೇಗ್ ತನ್ನ ಮತ್ತು ತನ್ವೀರ್ ಸಂಬಂಧವನ್ನು ಯಾವತ್ತೂ ಸಮರ್ಥಿಸಿಕೊಳ್ಳಲಿಲ್ಲ ಮತ್ತು ಪಾತಕಿಗಳ ನಂಟನ್ನು ಬೇಗ್ ಮುಂದುವರೆಸಲೂ ಇಲ್ಲ.

ಆದರೆ ಬಿಜೆಪಿ ಪಾತಕಿ ಇಷ್ತಿಯಾಕ್‌ನನ್ನು ಪಕ್ಷಕ್ಕೇ ಸೇರಿಸಿಕೊಂಡು ಹುದ್ದೆಯನ್ನೂ ಕೊಟ್ಟಿದೆ. ಈ ಬಗ್ಗೆ ಮುಖ್ಯಮಂತ್ರಿಗಾಗಲಿ, ಗೃಹಮಂತ್ರಿಗಾಗಲಿ ಕನಿಷ್ಠಮಟ್ಟದ ನಾಚಿಕೆ ಕೂಡ ಇದ್ದಂತಿಲ್ಲ. ಬಿಜೆಪಿ ಸರ್ಕಾರದ ಒಂದಲ್ಲ ನಾಲ್ವರು ಮಂತ್ರಿಗಳು ಇಷ್ತಿಯಾಕ್ ಪಕ್ಕ ನಿಂತು ಫೋಟೋ ತೆಗೆಸಿಕೊಳ್ಳುತ್ತಾರೆ. ಇಷ್ತಿಯಾಕ್‌ನಷ್ಟೇ ಅಪಾಯಕಾರಿ ರೌಡಿ ಯುಸುಫ್ ಪಟೇಲ್ ವಿರುದ್ಧ ಭಾರತಿನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್ ಮತ್ತು ಫ್ರೆಜರ್ ಟೌನ್ ಪೊಲೀಸ್ ಠಾಣೆಗಳಲ್ಲಿ ಇವತ್ತಿಗೂ ತರಹೇವಾರಿಯ ಕ್ರಿಮಿನಲ್ ಕೇಸುಗಳಿವೆ. ಮತ್ತೊಬ್ಬ ರೌಡಿ ಇಸಾಕ್ ಪೈಲ್ವಾನ್ ಶಿವಾಜಿನಗರದ ರೌಡಿ ಷೀಟರ್. ರಿವಾಲ್ವರ್ ಸಮೇತ ಸಿಕ್ಕಿಬಿದ್ದು ಆರ್ಮ್ಸ್ ಕಾಯ್ದೆಯಲ್ಲಿ ಜೈಲುಪಾಲಾಗಿದ್ದ. ಚೀಟರ್ ಡಾಕಾ ವಿದೇಶಿ ಕಂಪೆನಿಗಳಲ್ಲಿ ಕೆಲಸ ಕೊಡಿಸುತ್ತೇನೆಂದು ನೂರಾರು ವಿದ್ಯಾವಂತ ನಿರುದ್ಯೋಗಿಗಳನ್ನು ಬೀದಿಪಾಲು ಮಾಡಿದ ಮಹಾನ್ ವಂಚಕ. ಇಷ್ತಿಯಾಕ್‌ನ ಬಲಗೈಬಂಟ ಇಮ್ತಿಯಾಜ್ ಒಂದು ಡಜನ್ ಕ್ರಿಮಿನಲ್ ಕೇಸುಗಳಲ್ಲಿ ಪ್ರಮುಖ ಆರೋಪಿ. ಜೇಬ್ ಲಿಯಾಖತ್, ಮುಜ್ಜಾ ಡ್ಯಾನಿ, ಶೇರೂ ಇತ್ಯಾದಿಗಳೆಲ್ಲ ರೌಡಿ ಷೀಟರುಗಳೇ.

ಇಂಥ ಪಾತಕಿಗಳನ್ನೆಲ್ಲ ಬಿಜೆಪಿಗೆ ಬರಮಾಡಿಕೊಂಡು ಪಕ್ಷದ ಜವಾಬ್ದಾರಿಯುತ ಹುದ್ದೆ ಕೊಟ್ಟು ಮಂತ್ರಿಗಳಾದಿಯಾಗಿ ಜೊತೆ ನಿಂತು ಫೋಟೋ ತೆಗೆಸಿಕೊಳ್ಳುತ್ತಾರೆಂದರೆ, ಪೊಲೀಸರು ಇನ್ನು ಮುಂದೆ ಯಾವ ಧೈರ್ಯದಿಂದ ರೌಡಿಗಳನ್ನು ಬಂಧಿಸಬೇಕು. ಗೃಹಮಂತ್ರಿಯಾಗಿದ್ದ ರೋಷನ್ ಬೇಗ್ ರೌಡಿ ತನ್ವೀರ್ ಜೊತೆ ಕೇವಲ ಫೋಟೋದಲ್ಲಿ ಕಾಣಿಸಿಕೊಂಡಿದ್ದೇ 'ದೇಶದ್ರೋಹ'ವೆಂದು ಬೊಬ್ಬೆ ಹಾಕಿದ ಯಡ್ಡಿ, ಆಚಾರ್ಯರಿಗೆ ಇಷ್ತಿಯಾಕ್‌ನನ್ನು ಪಕ್ಷಕ್ಕೇ ಸೇರಿಸಿಕೊಂಡು ಜೊತೆ ನಿಂತು ಫೋಟೋ ತೆಗೆಸಿಕೊಳ್ಳುವುದು ಪಾಪವಾಗಿ ಕಾಣಿಸಲಿಲ್ಲವೆ? ಕಾಂಗ್ರೆಸ್-ಜೆಡಿಎಸ್‌ಗಳು ಕೂಡ ಈ ಪಾಟ ಲಕ್ಷ್ಯಕ್ಕಿಟ್ಟಿದ್ದುಂಟಾ? ಯಾವ ಮುಖ ಹೊತ್ತು ಬಿಜೆಪಿ ನಾಯಕರು ಮರ್ಯಾದಾ ಪುರುಷೋತ್ತಮ ರಾಮನ ಭಜನೆ ಮಾಡುತ್ತಾರೆ?

ಕುಲಗೆಡುವುದಕ್ಕೂ ಮಿತಿಬೇಡವೆ?

ರಾ. ಸೋಮನಾಥ್



ಇಷ್ತಿಯಾಕ್ ಜೊತೆ ಬಿಜೆಪಿ ಸೇರಿದ ಇಮ್ತಿಯಾಜ್, ಸೈಯದ್ ನೂರ್, ಮುಜಾಹಿದ್ ಮತ್ತು ಮುಜಮ್ಮಿಲ್, ಹಿಂದೆ ಪೊಲೀಸ್ ಅತಿಥ್ಯದಲ್ಲಿದ್ದಾಗ...

ಹುಲಿ-ಸಿಂಹಗಳ ಯುದ್ಧ

ತಮಿಳು ಎಲ್‌ಟಿಟಿಇ ಹುಲಿಗಳ ಮತ್ತು ಶ್ರೀಲಂಕಾದ ಸಿಂಹಳೀಯ ಸೈನ್ಯದ ನಡುವಿನ ಯುದ್ಧ ಅಂತಿಮ ಹಂತ ತಲುಪಿದೆ. ಈ ಹುಲಿ, ಸಿಂಹಗಳ ನಡುವೆ ಅಮಾಯಕರು ಬಲಿಯಾಗುತ್ತಿದ್ದಾರೆ. ಏನಿದು ತಮಿಳರ ಹೋರಾಟ? ಯಾಕೆ ಇಂತಹ ಬಲಿದಾನ? ಯಾವ ಕಾರಣಕ್ಕೆ ಸಿಂಹಳೀಯರ ದೌರ್ಜನ್ಯ? ಇದೆಲ್ಲದರ ಸುತ್ತ ಒಂದು ರೋಚಕ ವರದಿ....

• ಕುಮಾರ್ ಬುರಡಿಕಟ್ಟಿ











ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ ಎಲ್‌ಟಿಟಿಇ ಹುಲಿಗಳು ಮತ್ತು ಶ್ರೀಲಂಕಾದ ಸಿಂಹಗಳ ನಡುವೆ ಅಂತಿಮ ಮತ್ತು ನಿರ್ಣಾಯಕ ಯುದ್ಧವೊಂದು ಕೊನೆಯ ಘಟ್ಟ ತಲುಪಿರುವಂತಿದೆ. ಪ್ರತ್ಯೇಕ ತಮಿಳು ರಾಷ್ಟ್ರಕ್ಕಾಗಿ ದಶಕಗಳಿಂದ ಹೋರಾಟ ನಡೆಸುತ್ತಿರುವ Liberation Tigers of Tamil Eelam (LTTE)ನ ಪಾರಂಪರಿಕ ಭದ್ರ ನೆಲೆಗಳ ಮೇಲೆ ಶ್ರೀಲಂಕಾದ ಸಿಂಹಳೀಯ ಸೈನ್ಯ ಭಾರಿ ಪ್ರಮಾಣದ ದಾಳಿ ನಡೆಸಿ ಮೇಲುಗೈ ಪಡೆದಿದೆ.

ಮೂವತ್ತೈದು ವರ್ಷಗಳ ಸುದೀರ್ಘ ಯುದ್ಧದಲ್ಲಿ ಹಲವಾರು ಬಾರಿ ಎಲ್‌ಟಿಟಿಇ ಹಿನ್ನಡೆ ಅನುಭವಿಸಿದ್ದುಂಟು. ತನ್ನ ಪಾರಂಪರಿಕ ಭದ್ರ ನೆಲೆಗಳನ್ನು ಕಳೆದುಕೊಂಡಿದ್ದುಂಟು, ನೂರಾರು ಸಂಖ್ಯೆಯಲ್ಲಿ ಅದರ ಯೋಧರು, ನಾಯಕರು ಬಲಿಯಾಗಿದ್ದುಂಟು. ಆದರೆ ಅವೆಲ್ಲ ತಾತ್ಕಾಲಿಕವಾಗಿದ್ದವು. ಕೊಂಚ ಹಿಂದ್ಸರಿದಂತೆ ಕಂಡರೂ ಕೆಲವೇ ವರ್ಷಗಳಲ್ಲಿ ಅದು ಮತ್ತೆ ಬೂದಿಯಿಂದೆದ್ದು ಹೋರಾಡಿ ತ್ಯಾಗಬಲಿದಾನಗಳನ್ನು ಮಾಡಿ ಕಳೆದುಕೊಂಡ ನೆಲವನ್ನು ಮರಳಿ ವಶಪಡಿಸಿಕೊಂಡು ಸಿಂಹಳೀಯ ಸೇನೆಗೆ ಸೆಡ್ಡು ಹೊಡೆದಿತ್ತು.

ಆದರೆ ಈ ಬಾರಿಯ ಹೋರಾಟ ಎಲ್‌ಟಿಟಿಇಗೆ ನಿಜಕ್ಕೂ ಒಂದು ಜೀವನ್ಮರಣದ ಹೋರಾಟವಾಗಿದೆ. ಕಳೆದ ಮೂವತ್ತೈದು ವರ್ಷಗಳಲ್ಲಿ ಕಾಣದಷ್ಟು ಭೀಕರ ಹಿನ್ನಡೆಯನ್ನು ಅದು ಕಂಡಿದೆ. ಕಳೆದ ಒಂಭತ್ತು ವರ್ಷಗಳಿಂದ ತಮಿಳು ಹುಲಿಗಳ ಭದ್ರ ಕೋಟೆಯಂತಿದ್ದ ಹಾಗೂ ಅವರ ರಾಜಕೀಯ ರಾಜಧಾನಿ ಎಂದೇ ಗುರುತಿಸಲಾಗಿದ್ದ ಕಿಲಿನೋಚಿ ಪಟ್ಟಣ ಜನವರಿ ಎರಡರಂದು ಶ್ರೀಲಂಕಾ ಸೈನ್ಯದ ಪಾಲಾಯಿತು. ಇದಾದ ಒಂದೇ ವಾರದಲ್ಲಿ ತಮಿಳು ಹುಲಿಗಳ ಮತ್ತೊಂದು ವ್ಯೂಹತಾಂತ್ರಿಕ ಭದ್ರನೆಲೆಯಾದ ಎಲಿಫಂಟ್ ಫಾಸ್ ಅನ್ನು ಕೂಡ ಶ್ರೀಲಂಕಾ ಸೇನೆ ವಶಪಡಿಸಿಕೊಂಡಿತು.

ಈ ಎರಡು ಮುಖ್ಯ ಪ್ರದೇಶಗಳು ತನ್ನ ತೆಕ್ಕೆಗೆ ಬೀಳುತ್ತಿದ್ದಂತೆಯೇ ಉತ್ಸಾಹದಿಂದ ಮುನ್ನುಗ್ಗಿದ ಸೇನೆ ಎಲ್‌ಟಿಟಿಇಯ ಕೊಟ್ಟ ಕೊನೆಯ ನೆಲೆಯಾಗಿದ್ದ ಪುಡಿಕುದಿರಿಯಿರಿಪ್ಪು ಪಟ್ಟಣವನ್ನೂ ವಶಪಡಿಸಿಕೊಂಡಿದೆ. ಸೇನೆಯ ಆಕ್ರಮಣದಿಂದ ಬಚಾವಾಗಲು ಈಗ ಎಲ್‌ಟಿಟಿಇ ಹುಲಿಗಳು ಮಲ್ಲೈತೀವು ಅರಣ್ಯದೊಳಕ್ಕೆ ಹಿಂದ್ಸರಿದಿದ್ದಾರೆ ಎಂದು ವರದಿಯಾಗಿದೆ.

ಒಂದು ಹಂತದಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಶಸ್ತ್ರ ಸಜ್ಜಿತ ತಮಿಳು ಹುಲಿಗಳ ಸಂಖ್ಯೆ ಇಂದು ಕೇವಲ ಐದು ಸಾವಿರಕ್ಕಿಳಿದಿದೆ. ಹಿಂದೊಮ್ಮೆ ತಮಿಳು ಹುಲಿಗಳೇ ಆಡಳಿತ ನಡೆಸುತ್ತಿದ್ದ ಕಿಲಿನೋಚಿ, ಎಲಿಫಂಟ್ ಫಾಸ್, ಜಾಫ್ನಾ, ಬಟ್ಟಿಕಲೋವ, ಪುಡಿಕುದಿರಿಯಿರಿಪ್ಪು, ಮಲ್ಲೈತೀವಗಳಂಥ ಭದ್ರಕೋಟೆಗಳು ಇಂದು ಶ್ರೀಲಂಕಾ ಸೇನೆಯ ಪಾಲಾಗಿವೆ. ಸಾವಿರಾರು ಚ.ಕಿ.ಮೀ.ಗಳಷ್ಟು ವಿಸ್ತಾರವಾಗಿದ್ದ ಎಲ್‌ಟಿಟಿಇ ಸಾಮ್ರಾಜ್ಯವೀಗ ಕೇವಲ ಎರಡು ಲಕ್ಷ ಜನರಿರುವ 17 ಚ.ಕಿ.ಮೀ.ಗೆ ಕರಗಿದೆ. ಅದರಲ್ಲೂ ಸುಮಾರು ಒಂದು ಲಕ್ಷದಷ್ಟು ಜನರನ್ನು ಈಗಾಗಲೇ ಶ್ರೀಲಂಕಾ ಸೇನೆ ಹೊರಗೆಳೆದು ನಿರಾಶ್ರಿತರ ಶಿಬಿರದಲ್ಲಿಟ್ಟಿದೆ. ಉಳಿದ ಸುಮಾರು ಒಂದು ಲಕ್ಷ ತಮಿಳರು ಶ್ರೀಲಂಕಾ ಸೇನೆ ಮತ್ತು ಎಲ್‌ಟಿಟಿಇ ನಡುವಿನ ಭೀಕರ ಯುದ್ಧದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ.

ಇದು ಜಿನೋಸೈಡ್!

"ಯಾವುದೇ ಯುದ್ಧದಲ್ಲಿ ಮೊದಲು ಸಾಯುವುದು ಸತ್ಯ, ನಂತರ ಸೈನಿಕರು" ಎಂಬ ಮಾತೊಂದಿದೆ. ಅದು ಶ್ರೀಲಂಕಾ ಸೇನೆ-ಎಲ್‌ಟಿಟಿಇ ನಡುವಿನ ಯುದ್ಧಕ್ಕೂ ಅಕ್ಷರಶಃ ಅನ್ವಯಿಸುತ್ತದೆ. ದಿನಬೆಳಗಾದರೆ ಅಷ್ಟು ತಮಿಳು ಹುಲಿಗಳು ಸತ್ತರು, ಇಷ್ಟು ತಮಿಳು ಹುಲಿಗಳು ಸತ್ತರು, ಇಷ್ಟು ತಮಿಳು ಹುಲಿಗಳು ಶರಣಾದರು ಎಂಬಂತಹ ವರದಿಗಳನ್ನು ನೋಡುತ್ತಲೇ ಇದ್ದೇವೆ. ಇದು ಸತ್ಯದ ಕಗ್ಗೊಲೆಯಲ್ಲದೇ ಮತ್ತೇನಲ್ಲ, ವಾಸ್ತವದಲ್ಲಿ ಶ್ರೀಲಂಕಾ ಸೇನೆ ಕೊಂದಿದ್ದು, ಕೊಲ್ಲುತ್ತಿರುವುದು ಎಲ್‌ಟಿಟಿಇಯ ತಮಿಳು ಹುಲಿಗಳನ್ನಲ್ಲ, ಯುದ್ಧ ಭೂಮಿಯಲ್ಲಿ ನಿಶ್ಶಸ್ತ್ರರಾಗಿ ಸಿಲುಕಿಕೊಂಡಿರುವ ಅಮಾಯಕ ತಮಿಳು ಜನರನ್ನು. ಆದರೆ, ತಮಿಳು ಹುಲಿಗಳ ಮನೋಸ್ಥೈರ್ಯವನ್ನು ಕುಂದಿಸುವುದಕ್ಕಾಗಿ, ಅವರ ಹೋರಾಟದ ಕಿಚ್ಚನ್ನು ನಂದಿಸುವುದಕ್ಕಾಗಿ ಲಂಕಾ ಸೇನೆ ಈ ರೀತಿ ಸತ್ಯವನ್ನು ಕಗ್ಗೊಲೆಗೈದು ಹಸಿಹಸಿ ಸುಳ್ಳುಗಳನ್ನು ಪ್ರಚಾರ ಮಾಡುತ್ತಿದೆ.

ಶ್ರೀಲಂಕಾ ಸೇನೆ ಈ ಬಾರಿ ಹಿಂದೆಂದಿಗಿಂತಲೂ ಭಿನ್ನವಾದ ಯುದ್ಧ ತಂತ್ರವನ್ನನುಸರಿಸುತ್ತಿದೆ. ಈ ಹಿಂದೆ ಅದು ಎಲ್‌ಟಿಟಿಇ ಮತ್ತು ಸಾಮಾನ್ಯ ತಮಿಳರ ನಡುವೆ ಯಾವ ವ್ಯತ್ಯಾಸವನ್ನೂ ಗುರುತಿಸದೇ ಏಕಾಏಕಿಯಾಗಿ ಎಲ್ಲರ ಮೇಲೂ ದಾಳಿ ಮಾಡುತ್ತಿತ್ತು. ಇದರಿಂದಾಗಿ ಇಡೀ ತಮಿಳು ಜನಾಂಗವನ್ನೇ ಅದು ಎದುರುಹಾಕಿಕೊಂಡಿತ್ತು. ಪರಿಣಾಮವಾಗಿ ಇಲ್ಲಿಯತನಕ ಅದಕ್ಕೆ ತಮಿಳು ಹುಲಿಗಳನ್ನು ಬಗ್ಗುಬಡಿಯುವುದಕ್ಕೆ ಸಾಧ್ಯವಾಗಿರಲಿಲ್ಲ. ಈ ಬಾರಿ ತನ್ನ ರಣತಂತ್ರವನ್ನು ಬದಲಿಸಿ "ಎಲ್‌ಟಿಟಿಇ ಕಪಿಮುಷ್ಟಿಯಿಂದ ಸಾಮಾನ್ಯ ತಮಿಳರನ್ನು ರಕ್ಷಿಸುವುದಕ್ಕಾಗಿಯೇ ಸೇನೆ ತಮಿಳು ಹುಲಿಗಳ ಮೇಲೆ ಆಕ್ರಮಣ ಮಾಡುತ್ತಿದೆ" ಎಂದು ಬಹಿರಂಗವಾಗಿ ಪ್ರಚಾರ ಮಾಡುತ್ತಾ ದಾಳಿಗಿಳಿಯಿತು. "ತಮಿಳು ಹುಲಿಗಳ ನೆಲೆಯಲ್ಲಿರುವ, ಅವರ ಜೊತೆಗಿರುವ ಸಾಮಾನ್ಯ ತಮಿಳರು ಅಲ್ಲಿಂದ ಕಾಲ್ತೆಗೆದು ಸೇನಾ ವಶಕ್ಕೆ ಬರಬೇಕು. ಅವರಿಗೆ ಎಲ್ಲಾ ರೀತಿಯ ಪುನರ್ವಸತಿ ಮತ್ತು ಪರಿಹಾರಗಳನ್ನು ಒದಗಿಸಲಾಗುವುದು" ಎಂಬ ಹುಸಿ ಆಸೆಗಳನ್ನು ಹುಟ್ಟಿಸಿತು. ಆ ಮೂಲಕ ಸಾಮಾನ್ಯ ಜನರನ್ನು ತಮಿಳು ಹುಲಿಗಳಿಂದ ಬೇರ್ಪಡಿಸಿ ನಂತರ ಮಾರಣಾಂತಿಕ ಆಕ್ರಮಣ ಮಾಡುವುದು ಅದರ ಉದ್ದೇಶವಾಗಿತ್ತು. ಆದರೆ, ಸಿಂಹಳೀಯರ ವಂಚನೆಗಳನ್ನು ಶತಮಾನಗಳಿಂದ ಅನುಭವಿಸಿರುವ, ಲಂಕಾ ಸೇನೆಯ ದೌರ್ಜನ್ಯಗಳನ್ನು ದಶಕಗಳಿಂದ ಕಂಡಿರುವ ತಮಿಳರು ಈ ಆಸೆಗೆ ಬಲಿಯಾಗಲಿಲ್ಲ, ಯುದ್ಧಭೂಮಿಯನ್ನು ತೊರೆಯಲಿಲ್ಲ. ಅಂತಿಮವಾಗಿ ಲಂಕಾ ಸೇನೆ ಈಗ ಎಲ್‌ಟಿಟಿಇಯ ಹುಲಿಗಳ ಜೊತೆಗೆ ಸಾಮಾನ್ಯ ತಮಿಳರ ಮಾರಣಹೋಮಕ್ಕೂ ಮುಂದಾಗಿದೆ. ಎಲ್‌ಟಿಟಿಇ ಕ್ಯಾಂಪುಗಳ

▶▶▶

ತಾಯ್ನಾಡಿನಲ್ಲಿ ತಮಿಳರ ದುಸ್ಥಿತಿ


1948ರಲ್ಲಿ ಬ್ರಿಟಿಷರು ಶ್ರೀಲಂಕಾ ದ್ವೀಪವನ್ನು ತೊರೆದಾಗಿನಿಂದಲೂ ಸಿಂಹಳೀಯರೇ ಆಳ್ವಿಕೆ ನಡೆಸುತ್ತಿದ್ದಾರೆ. ಪ್ಲಾಂಟೇಶನ್ನುಗಳಲ್ಲಿ ಕೆಲಸ ಮಾಡುತ್ತಿದ್ದ ತಮಿಳು ಕಾರ್ಮಿಕರಿಗೆ ಪೌರತ್ವವನ್ನು ನಿರಾಕರಿಸಿದ್ದರಿಂದ ಮೊದಲ್ಗೊಂಡು ಇಲ್ಲಿಯ ತನಕ ಎಲ್ಲಾ ರೀತಿಯಲ್ಲೂ ತಮಿಳರನ್ನು ಹೊಸಕಿ ಹಾಕುವ ಧೋರಣೆಯನ್ನು ಸಿಂಹಳೀಯ ಸರ್ಕಾರ ಮಾಡುತ್ತಲೇ ಬಂದಿದೆ.


ಈಗಿನ ಪರಿಸ್ಥಿತಿಯನ್ನೇ ನೋಡಿ. ಒಟ್ಟಾರೆಯಾಗಿ ಸರ್ಕಾರಿ ಉದ್ಯೋಗಗಳಲ್ಲಿ ಶೇ.90ರಷ್ಟು ಸಿಂಹಳೀಯರೇ ತುಂಬಿಕೊಂಡಿದ್ದಾರೆ. ಪೊಲೀಸು, ಮಿಲಿಟರಿಯಂಥ ರಕ್ಷಣಾ ಪಡೆಗಳಲ್ಲಂತೂ ಶೇ.99ರಷ್ಟು ಸಿಂಹಳೀಯರೇ ಇದ್ದಾರೆ. ಶ್ರೀಲಂಕಾದ ಶಾಲಾ ಕಾಲೇಜುಗಳ ಪರಿಸ್ಥಿತಿಯನ್ನು ಗಮನಿಸಿ. ಸಿಂಹಳೀಯ ಮಾಧ್ಯಮ ಶಾಲೆಗಳಲ್ಲಿ 14,000 ಶಿಕ್ಷಕರನ್ನು ಅವಶ್ಯಕತೆಗಿಂತಲೂ ಹೆಚ್ಚಾಗಿ ನೇಮಕ ಮಾಡಿಕೊಂಡಿದ್ದರೆ, ತಮಿಳು ಮಾಧ್ಯಮ ಶಾಲೆಗಳಲ್ಲಿ 10,000 ಶಿಕ್ಷಕರ ಕೊರತೆಯಿದ್ದರೂ ನೇಮಕ ಮಾಡಿಕೊಳ್ಳುವ ಗೋಜಿಗೆ ಹೋಗಿಲ್ಲ.



ಇನ್ನೊಂದು ವಿಷಯ ನೋಡಿ. 1990ರಿಂದ ಇಲ್ಲಿಯ ತನಕ ಶ್ರೀಲಂಕಾದ ಅಕೌಂಟೆಂಟ್ ಮತ್ತು ಆಡಳಿತ ಇಲಾಖೆಗಳಿಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವರ್ಷಕ್ಕೆ ಕೇವಲ ಇಬ್ಬರು ತಮಿಳರನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ.

ಇವು ಕೆಲವು ಉದಾಹರಣೆಗಳಷ್ಟೆ. ಸಿಂಹಳೀಯ ಆಳುವ ವರ್ಗ ತಮಿಳರ ಬಗ್ಗೆ ತಾರತಮ್ಯ ಧೋರಣೆ ನಡೆಸುತ್ತಿರುವುದನ್ನು ಪ್ರತಿಯೊಂದು ಕ್ಷೇತ್ರದಲ್ಲೂ ಕಾಣಬಹುದು.







Final Assault!

...ಲೆ ನಿರ್ದಿಷ್ಟವಾಗಿ ದಾಳಿ ಮಾಡದೆ ತಮಿಳು ಹುಲಿಗಳ ...ದೇಶದಲ್ಲಿ ಬೇಕಾಬಿಟ್ಟಿಯಾಗಿ ಬಾಂಬುಗಳನ್ನೆಸೆಯುತ್ತಿದೆ. ...ಗಳು, ಆಸ್ಪತ್ರೆಗಳು, ಹಳ್ಳಿಗಳು – ಯಾವುದನ್ನೂ ...ಸದೇ ಬಾಂಬುಗಳ ಸುರಿಮಳೆ ಸುರಿಸುತ್ತಿದೆ. ಮೊನ್ನೆ ...ಂಗಳವಾರ ಕೇವಲ 15 ತಾಸುಗಳ ಅವಧಿಯಲ್ಲಿ ...00 ಮಲ್ಟಿ ಬ್ಯಾರೆಲ್ ರಾಕೆಟ್ ಲಾಂಚರ್‌ಗಳನ್ನು ...ಸಿ ರಾಕೇಟ್‌ಗಳನ್ನು, 1000ಕ್ಕೂ ಹೆಚ್ಚು ಆರ್ಟಿಲ್ಲರಿ ...ಗಳನ್ನು ಮತ್ತು ಏನಿಲ್ಲವೆಂದರೂ 2000ಕ್ಕೂ ಹೆಚ್ಚು ...ಟಾರ್ ಶೆಲ್‌ಗಳನ್ನು ಸುರಿಸಿದೆ. ಈ ದಾಳಿ ನಡೆದದ್ದು ...ಳು ಹುಲಿಗಳ ಕ್ಯಾಂಪುಗಳ ಮೇಲಲ್ಲ, ಮುಲ್ಲಿ...ವಾಲ್, ಥಾಜಾಂಪನ್, ಒಟ್ಟಾಯಿಪಿ–ಪನ್ನಿಯಾಡಿ ಮತ್ತು ...ದ್ಯಾಯಿ–ವಾಯಿಕ್ಕಾಲ್‌ಗಳಂಥ ಸಾಮಾನ್ಯ ತಮಿಳು ...ಗರಿಕರು ವಾಸಿಸುವ ಹಳ್ಳಿಗಳ ಮೇಲೆ. ಈ ದಾಳಿಗೆ ...ದು ಏನಿಲ್ಲವೆಂದರೂ 200 ಅಮಾಯಕ ತಮಿಳರು ...ಯಾದರು. ಅದರ ಮರುದಿನ, ಅಂದರೆ ನಿನ್ನೆ ...ಧವಾರ ಮಲ್ಲೇತೀವು ಅರಣ್ಯದ ಮುಲ್ಲಲಿ – ವಾಕಾಲ್‌ನ ...ತ್ತರ ಭಾಗದಲ್ಲಿ ಬೆಳಗ್ಗೆ 160 ಸಾಮಾನ್ಯ ತಮಿಳು ...ಗರಿಕರ ರಕ್ತಸಿಕ್ತ ಶವಗಳು ಪತ್ತೆಯಾಗಿವೆ. ಈ ಒಂದೇ ... ಏನಿಲ್ಲವೆಂದರೂ ಇನ್ನೂ 150 ಜನರನ್ನು ಲಂಕಾ ...ೆ ಕೊಂದಿದೆಯೆಂದು ಅಂದಾಜಿಸಲಾಗಿದೆ. ಇದೇ ದಿನ ...ಲ್ಲೇತೀವಿನ ಆಸ್ಪತ್ರೆಯೊಂದರ ಮೇಲೆ ಲಂಕಾ ಸೇನೆ ...ಳಿ ಮಾಡಿದ್ದರಿಂದ ಒಂಭತ್ತು ರೋಗಿಗಳು ...ತ್ತುಹೋದರಲ್ಲದೆ ಸುಮಾರು 15 ಜನ ಗಂಭೀರವಾಗಿ ಗಾಯಗೊಂಡಿದ್ದಾರೆ. ಈ ದಾಳಿ ಹೀಗೆಯೇ ಮುಂದುವರೆದರೆ ಇನ್ನು ಒಂದೇ ವಾರದಲ್ಲಿ ಏನಿಲ್ಲವೆಂದರೂ 10,000 ಅಮಾಯಕ ತಮಿಳು ನಾಗರಿಕರು ಬಲಿಯಾಗುವ ನಿರೀಕ್ಷೆಯಿದೆ.

ಇನ್ನೊಂದೆಡೆಗೆ, ಎಲ್‌ಟಿಟಿಇಯ ಅಂತಿಮ ನೆಲೆಯಾಗಿರುವ ಮಲ್ಲೀತೀವು ಅರಣ್ಯ ಪ್ರದೇಶವನ್ನು ಈಗ ಲಂಕಾ ಸೇನೆ ಸುತ್ತುವರೆದಿದ್ದು ಆ ಪ್ರದೇಶಕ್ಕೆ ಆಹಾರ ಸಾಮಗ್ರಿಗಳಂಥ ಅತೀ ಅವಶ್ಯಕ ವಸ್ತುಗಳು ರವಾನೆಯಾಗದಂತೆ ಎಲ್ಲಾ ಸಪ್ಲೈ ಮಾರ್ಗಗಳನ್ನು ಮುಚ್ಚಿಹಾಕಿದೆ. ಈಗ ಅಲ್ಲಿನ ಪರಿಸ್ಥಿತಿಯೇನೆಂದರೆ 40,000 ಕುಟುಂಬಗಳಿಗೆ ಸೇರಿದ ಸುಮಾರು 1,65,000 ಅಮಾಯಕ ತಮಿಳರು ಹಸಿವಿನಿಂದ ಬಳಲುತ್ತಿದ್ದಾರೆ. ಈ ಪರಿಸ್ಥಿತಿ ಹೀಗೆ ಮುಂದುವರೆದರೆ ಯುದ್ಧದಲ್ಲಿ ಸತ್ತ ಜನರಿಗಿಂತ ಅನ್ನವಿಲ್ಲದೇ ಹಸಿವಿನಿಂದ ಸತ್ತವರ ಸಂಖ್ಯೆಯೇ ಜಾಸ್ತಿಯಾಗುವ ನಿರೀಕ್ಷೆಯಿದೆ. "ನಮ್ಮೊಂದಿಗೆ ಬೇಕಾದರೆ ಯುದ್ಧ ಮಾಡಲಿ, ಆದರೆ ಅಮಾಯಕ ತಮಿಳು ಜನರನ್ನು ಹಸಿವಿನಿಂದ ಸಾಯಿಸುವುದು ಬೇಡ" ಎಂದು ಖುದ್ದು ಎಲ್‌ಟಿಟಿಇಯೇ ವಿಶ್ವಸಂಸ್ಥೆಗೆ ಹಲವಾರು ಬಾರಿ ಬಹಿರಂಗವಾಗಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ.

ಲಂಕಾ ಸೇನೆಯ ಈ ರಾಕ್ಷಸೀ ದಾಳಿಗೆ ತತ್ತರಿಸಿರುವ ಸಾಮಾನ್ಯ ತಮಿಳರು ಬೇರೆ ದಾರಿ ಇಲ್ಲದೆ ಅಲ್ಲಿಂದ ಹೊರಬರಬೇಕಾದ ಅನಿವಾರ್ಯತೆ ಈಗ ಸೃಷ್ಟಿಯಾಗಿದೆ. ಇಲ್ಲಿಯುತನಕ ಏನಿಲ್ಲವೆಂದರೂ ಎರಡು ಲಕ್ಷ ಜನ ಈ ರೀತಿ ಯುದ್ಧ ಭೂಮಿ ತೊರೆದು ಹೊರಬಂದಿದ್ದಾರೆ. ಅವರನ್ನು ಹಂದಿಗೂಡುಗಳಂತಿರುವ ನಿರಾಶ್ರಿತರ ಶಿಬಿರಗಳಲ್ಲಿ ಕೂಡಿಹಾಕಲಾಗಿದೆ. ಎಲ್‌ಟಿಟಿಇಯೊಂದಿಗೆ ಸಂಬಂಧ ಹೊಂದಿರುವವರು, ಅವರಿಗೆ ಬೆಂಬಲ ಕೊಟ್ಟವರು ಎಂಬ ಅನುಮಾನದ ಮೇಲೆ ಸಾವಿರಾರು ಜನರನ್ನು ನಿರಾಶ್ರಿತ ಶಿಬಿರದಿಂದ ಸೇನೆಯ ಶಿಬಿರಕ್ಕೆ ಎತ್ತಿಕೊಂಡು ಹೋಗಿ ಚಿತ್ರಹಿಂಸೆ ಕೊಡಲಾಗುತ್ತಿದೆ.

ಎರಡನೇ ಮಹಾಯುದ್ಧದ ಸಮಯದಲ್ಲಿ ಹಿಟ್ಲರ್ ಲಕ್ಷಾಂತರ ಜನರನ್ನು ಗ್ಯಾಸ್ ಛೇಂಬರ್‌ನಲ್ಲಿ ಕೂಡಿ ಹಾಕಿ ಕೊಂದಿದ್ದಕ್ಕೂ, ಅಫ್ಘನ್ ಮತ್ತು ಇರಾಕ್ ಯುದ್ಧದಲ್ಲಿ ಬುಷ್ ಬಾಂಬುಗಳ ಮಳೆಗರೆದು ಸಾವಿರಗಟ್ಟಲೇ ಅಮಾಯಕ ಜನರನ್ನು ಕೊಂದು ಹಾಕಿದ್ದಕ್ಕೂ, ಈಗ ರಾಜಪಕ್ಸೆ ತಮಿಳರ ಮಾರಣಹೋಮ ಮಾಡುತ್ತಿರುವುದಕ್ಕೂ ಮೂಲಭೂತವಾಗಿ ಏನು ವ್ಯತ್ಯಾಸವಿದೆ?



ಶ್ರೀಲಂಕಾದ ಅಧ್ಯಕ್ಷರಾಗಿರುವ ಮಹಿಂದ ರಾಜಪಕ್ಸೆ ಅವರು ಎಲ್‌ಟಿಟಿಇ ವಿರುದ್ಧ ಇಂತಹ ಆಲ್-ಔಟ್ ಯುದ್ಧಕ್ಕೆ ಕಳೆದ ಕೆಲವು ವರ್ಷಗಳಿಂದಲೂ ಸಿದ್ಧತೆ ನಡೆಸಿದ್ದರು. ತಮಿಳು ಹುಲಿಗಳು ಕೇವಲ ಶ್ರೀಲಂಕಾಕ್ಕೆ ಮಾತ್ರವಲ್ಲ ಇಡೀ ದಕ್ಷಿಣ ಏಷ್ಯಾಕ್ಕೆ ಅಪಾಯಕಾರಿ ಎಂದು ಹೇಳುತ್ತಾ ದಕ್ಷಿಣ ಏಷ್ಯಾದ ಎಲ್ಲ ದೇಶಗಳನ್ನು ಎಲ್‌ಟಿಟಿಇ ವಿರುದ್ಧ ಎತ್ತಿ ಕಟ್ಟುವ ಪ್ರಯತ್ನ ನಡೆಸಿದ್ದರು. ನವದೆಹಲಿಯಲ್ಲಿ ನಡೆದ ಸಾರ್ಕ್ ದೇಶಗಳ ಶೃಂಗಸಭೆಯಲ್ಲಿಯೂ ಈ ಕುರಿತು ಚರ್ಚೆ ನಡೆಸಿ ತಮಿಳು ಹುಲಿಗಳನ್ನು ಸದೆಬಡಿಯಲು ನೆರೆಹೊರೆ ದೇಶಗಳ ಸಹಕಾರ ಕೋರಿದ್ದರು. ಹೀಗೆ ಎಲ್ಲಾ ಸಿದ್ಧತೆಯೊಂದಿಗೆ ಎಲ್‌ಟಿಟಿಇ ಮೇಲೆ ಎರಗಿದ ರಾಜಪಕ್ಸೆ ಎಲ್‌ಟಿಟಿಇಗಳ ಭದ್ರ ನೆಲೆಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಅತ್ತ ಶ್ರೀಲಂಕಾದಲ್ಲಿ ಹೀಗೆ ಪೂರ್ಣ ಪ್ರಮಾಣದ ಅಂತರ್ಯುದ್ಧವೊಂದು ನಡೆಯುತ್ತಿದ್ದರೆ ಇತ್ತ ವಿಶ್ವದಾದ್ಯಂತ


▶▶▶



ದ್ರೋಹಿ ಕರುಣ

ಕರ್ನಲ್ ಕರುಣ ಅಲಿಯಾಸ್ ವಿನಯಗಮೂರ್ತಿ ಮುರಳೀಧರನ್ ಎಲ್‌ಟಿಟಿಯ ಅತ್ಯುನ್ನತ ಸ್ಥಾಯಿಯ ಕಮಾಂಡರುಗಳಲ್ಲೊಬ್ಬರಾಗಿದ್ದರು. ಒಂದು ಹಂತದಲ್ಲಿ ವೇಲುಪಿಳ್ಳೈ ಪ್ರಭಾಕರನ್‌ನ ಬಾಡಿಗಾರ್ಡ್ ಆಗಿಯೂ ಕಾರ್ಯನಿರ್ವಹಿಸಿದ್ದರು. 2004ರ ಮಾರ್ಚ್‌ನಲ್ಲಿ ಕರುಣ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಮುಂದಿಟ್ಟು ಎಲ್‌ಟಿಟಿಇ ಸಂಘಟನೆಯಿಂದ ಹೊರನಡೆದು ತಮ್ಮದೇ ಆದ 'ತಮಿಳ್ ಈಳಂ ಮಕ್ಕಳ್ ವಿಡುದಲಾಯ್ಯ ಪುಲಿಕಲ್' ಎಂಬ ಸಂಘಟನೆ ಹುಟ್ಟು ಹಾಕಿದರು. ಎಲ್‌ಟಿಟಿಇ ಪೂರ್ವ ಶ್ರೀಲಂಕಾದ ತಮಿಳರ ಹಿತಾಸಕ್ತಿಗಳನ್ನು ಕಡೆಗಣಿಸುತ್ತಿರುವುದೇ ತಮ್ಮ ಹೊರ ನಡೆಯುವಿಕೆಗೆ ಕಾರಣ ಎಂದು ಕರುಣ ಹೇಳಿದ್ದರು. ಇದನ್ನು ಅಲ್ಲಗಳೆದ ಎಲ್‌ಟಿಟಿಇ ಕರುಣ ಅವರು ಭ್ರಷ್ಟಾಚಾರದಲ್ಲಿ ತೊಡಗಿರುವುದಲ್ಲದೆ ಸಂಘಟನೆಯ ನಿಯಮ, ನೀತಿಗಳನ್ನು ಉಲ್ಲಂಘಿಸುತ್ತಿರುವುದರಿಂದ ಅವರ ಮೇಲೆ ಎಲ್‌ಟಿಟಿಇಯ ಗುಪ್ತಚಾರ ವಿಭಾಗವು ಒಂದು ನಿಗಾ ಇಟ್ಟಿತ್ತು, ಅದನ್ನು ಸಹಿಸಲಾರದೆ ಅವರು ಹೊರಹೋದರು ಎಂದು ಹೇಳಿತು.

ಇಪ್ಪತ್ತು ವರ್ಷಗಳ ಕಾಲ 'ತಮಿಳು ಈಳಂ' ಸ್ಥಾಪನೆಗಾಗಿ ಯಾರ ವಿರುದ್ಧ ಹೋರಾಡಿದ್ದರೋ ಅದೇ ಸಿಂಹಳೀಯ ಸರ್ಕಾರದೊಂದಿಗೆ ಇವತ್ತು ಕರಣ ಕೈಜೋಡಿಸಿದ್ದಾರೆ. ಆ ಮೂಲಕ 'ತಮಿಳು ಈಳಂ' ಸ್ಥಾಪನೆಯ ಆಶಯಕ್ಕೆ ದ್ರೋಹ ಬಗೆದಿದ್ದಾರೆ. ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ರಾಜಕೀಯ ಪ್ರವೇಶಿಸುತ್ತಿದ್ದಂತೆಯೇ ಅವರನ್ನು ಶ್ರೀಲಂಕಾ ಸರ್ಕಾರದ ಸಂಸದನ್ನಾಗಿ ನೇಮಿಸಲಾಯಿತು. ಕಳೆದ ತಿಂಗಳು ಅತ್ತ ಶ್ರೀಲಂಕಾದ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ತಮಿಳರು ಶ್ರೀಲಂಕಾ ಸೇನೆಯ ಆಕ್ರಮಣದಲ್ಲಿ ತಂಡೋಪತಂಡವಾಗಿ ಮರಣ ಹೊಂದುತ್ತಿದ್ದರೆ ಇತ್ತ ಕೊಲಂಬೋದಲ್ಲಿ ಕರುಣ ರಾಷ್ಟ್ರೀಯ ಐಕ್ಯತೆಯ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದರು.



...ಮಾರು ...ಹೊರಗಿನವರು?

...ಶ್ರೀಲಂಕಾದಲ್ಲಿ ಎಲ್‌ಟಿಟಿಇ ನೇತೃತ್ವದಲ್ಲಿ ನಡೆಯು...ವ ತಮಿಳು ಪ್ರತ್ಯೇಕತಾವಾದಿ ಹೋರಾಟದ ಹಿಂದೆ ...ಸಮ್ಮತವಾದ ಮತ್ತು ತಾರ್ಕಿಕ ಕಾರಣಗಳಿವೆ. ...ಲಂಕಾದಲ್ಲಿರುವ ತಮಿಳರು ಭಾರತದ ತಮಿಳುನಾಡಿ... ವಲಸೆಹೋದವರೆಂದೂ, ಇನ್ನೊಬ್ಬರ ದೇಶಕ್ಕೆ ಹೋಗಿ ...ದೇ ಸ್ವತಂತ್ರ ದೇಶ ಬೇಕೆಂದು ಮೊಂಡು ಹಠ ...ದು ಸುಖಾಸುಮ್ಮನೇ ಹಿಂಸಾಚಾರದಲ್ಲಿ ತೊಡಗಿರುವ ...ದೂ ಬಿಂಬಿಸುವ ಅಸಂಬದ್ಧ ವಾದವೊಂದಿದೆ. ಅದು ...ಲಂಕಾದ ಸಿಂಹಳೀಯ ದುರಭಿಮಾನಿಗಳು ವ್ಯವಸ್ಥಿತ... ಹರಿಬಿಟ್ಟಿರುವ ಹಸಿಹಸಿ ಸುಳ್ಳು. ವಾಸ್ತವ ಏನೆಂದರೆ, ...ಲಂಕಾದ ತಮಿಳರಲ್ಲಿ ಶೇ.90ರಷ್ಟು ಜನ ಅದೇ ...ಶ ಮೂಲನಿವಾಸಿಗಳೇ ಹೊರತು ಭಾರತದಿಂದ ...ಹೋದವರಲ್ಲ, ಉಳಿದ ಶೇ.10ರಷ್ಟು ತಮಿಳರು ...ಬತ್ತನೇ ಶತಮಾನದಲ್ಲಿ ಶ್ರೀಲಂಕಾದ ಪ್ಲಾಂಟೇಶನ್ನು...ಕೆಲಸ ಮಾಡುವುದಕ್ಕೆ ತಮಿಳುನಾಡಿನಿಂದ ಹೋದ...ಕರು.

ಶ್ರೀಲಂಕಾದ ... ಜನಸಂಖ್ಯೆ ... ಕಾಲು ... ಕಡಿಮೆ. ಅಂದರೆ ನಮ್ಮ ಕರ್ನಾಟಕದ ...ಭಾಗ. ಅದರಲ್ಲಿ ಶೇ. 74ರಷ್ಟು ಸಿಂಹಳೀಯರಿದ್ದರೆ ... ಶೇ.7ರಷ್ಟು, ... [illegible]

ವಿಶ್ವಸಂಸ್ಥೆಯು ಶ್ರೀಲಂಕಾವನ್ನು ಒಂದು ದೇಶ ಎಂದು ಗುರುತಿಸಿ ಒಪ್ಪಿಕೊಂಡಿದ್ದರೂ ಅಲ್ಲಿ ವಾಸಿಸುತ್ತಿರುವ ವಿವಿಧ ಜನಾಂಗಗಳಿಗೆ ಸೇರಿದ ಜನರೆಲ್ಲರೂ ಅದನ್ನು "ನಮ್ಮ ದೇಶ" ಎಂದು ಒಪ್ಪಿಕೊಂಡಿಲ್ಲ. ಏಕೆಂದರೆ, ಈ ಎಲ್ಲಾ ಜನಾಂಗೀಯರೂ ಶತಶತಮಾನಗಳಿಂದ ಅಲ್ಲಿ ವಾಸಿಸುತ್ತಿದ್ದು ಅವರೆಲ್ಲರ ಭಾಷೆ, ಭೌಗೋಳಿಕ ಪ್ರದೇಶ, ಸಂಸ್ಕೃತಿಗಳು ಬೇರೆಬೇರೆಯಾಗಿಯೇ ಇವೆ. ಹಾಗಾಗಿ ಅವೆಲ್ಲವೂ ಬೇರೆಬೇರೆ ರಾಷ್ಟ್ರೀಯತೆಗಳೇ ಎಂಬುದರಲ್ಲಿ ಅನುಮಾನವಿಲ್ಲ. ಅವರೆಲ್ಲರೂ ತಮ್ಮ ತಮ್ಮ ಜನಾಂಗದ ಮೂಲಕವೇ ಗುರುತಿಸಿಕೊಳ್ಳುತ್ತಾರೆಯೇ ವಿನಃ ತಮ್ಮನ್ನು 'ಶ್ರೀಲಂಕಿಯರು' ಅಥವಾ 'ಲಂಕಿ'ಯರು ಎಂದು ಗುರುತಿಸಿಕೊಳ್ಳುವುದಿಲ್ಲ. ಆ ಎಲ್ಲ ಜನಾಂಗಗಳ ಅನ್ಯೋನ್ಯತೆಯ ಗುರುತು ಕ್ರಿ.ಪೂ. 5ನೇ ಶತಮಾನದಿಂದಲೂ ಇರುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ.

ವಿಶ್ವದ ಐದು ಅತ್ಯಂತ ಪುರಾತನ ಭಾಷೆಗಳಲ್ಲೊಂದಾದ ತಮಿಳು ಭಾಷೆಯ ಅನೇಕ ಕುರುಹುಗಳು ಶ್ರೀಲಂಕಾದಲ್ಲಿ ದೊರೆತಿವೆ. ತಮಿಳರು ಸುಮಾರು ಎರಡೂವರೆ ಸಾವಿರ ವರ್ಷಗಳಿಂದ ಶ್ರೀಲಂಕಾದಲ್ಲಿ ಬದುಕಿರುವುದನ್ನು ಬಹುತೇಕ ಎಲ್ಲ ಚರಿತ್ರಕಾರರೂ ಒಪ್ಪಿಕೊಳ್ಳುತ್ತಾರೆ.

ಇಂದು ಆಡಳಿತ ನಡೆಸುತ್ತಿರುವ ಸಿಂಹಳೀಯರು ತಮ್ಮನ್ನು ಆರ್ಯ ಮೂಲದವರೆಂದು ಕರೆದುಕೊಳ್ಳುತ್ತಾರೆ. ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆ ಬಂಗಾಳದಿಂದ ಶ್ರೀಲಂಕಾಕ್ಕೆ ಬಂದ ರಾಜಕುಮಾರ ವಿಜಯನೇ ತಮ್ಮ ಮೂಲಪುರುಷನೆಂದು ಸಿಂಹಳೀಯರು ಹೇಳಿಕೊಳ್ಳುತ್ತಾರೆ. ಆದರೆ, ಈತ ಶ್ರೀಲಂಕಾಕ್ಕೆ ಕಾಲಿಡುವ ಮೊದಲೇ ಅಲ್ಲಿ ಉನ್ನತ ಮಟ್ಟದ ನಾಗರಿಕತೆಯೊಂದು ರೂಪುಗೊಂಡಿತ್ತೆಂದು ಅನೇಕ ಸಾಕ್ಷ್ಯಾಧಾರಗಳ ಮೂಲಕ ಇತಿಹಾಸಕಾರರು ಸಾಬೀತುಪಡಿಸುತ್ತಾರೆ. ಹಾಗಿದ್ದ ಮೇಲೆ ಈ ನಾಗರಿಕತೆಯನ್ನು ಕಟ್ಟಿದವರ್‍ಯಾರು? ವಾಸ್ತವದಲ್ಲಿ ಈ ಪುರಾವೆಗಳು ಸಿಂಹಳೀಯರು ಶ್ರೀಲಂಕಾಕ್ಕೆ ಬರುವ ಮೊದಲೇ ಅಲ್ಲಿ ಮೂಲನಿವಾಸಿಗಳಿದ್ದರು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅವರು ತಮಿಳರಾಗಿದ್ದರು ಎಂಬುದನ್ನೂ ಚರಿತ್ರಕಾರರೂ ವಿಷದಪಡಿಸಿದ್ದಾರೆ. ಹೀಗಾಗಿ ತಮಿಳರು



ಅಲ್ಲಿನ ಮೂಲನಿವಾಸಿಗಳೇ ಹೊರತು ಹೊರಗಿನಿಂದ ಬಂದವರಲ್ಲ ಎಂಬುದರಲ್ಲಿ, ಹೊರಗಿನಿಂದ ಬಂದಿದ್ದು ಸಿಂಹಳೀಯರ ಮೂಲ ಪುರುಷ ರಾಜಕುಮಾರ ವಿಜಯ ಎಂಬುದರಲ್ಲಿ ಯಾವುದೇ ಅನುಮಾನಗಳಿಲ್ಲ.

ನಂತರದ ದಿನಗಳಲ್ಲಿ ತಮಿಳರೇ ಪ್ರಧಾನವಾಗಿರುವ ಶ್ರೀಲಂಕಾದ ಉತ್ತರ ಮತ್ತು ಪೂರ್ವಭಾಗಗಳಲ್ಲಿ ತಮಿಳು ರಾಜರು ಆಳ್ವಿಕೆ ನಡೆಸಿದರೆ ಸಿಂಹಳೀಯರೇ ಪ್ರಧಾನವಾಗಿರುವ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಸಿಂಹಳೀಯ ದೊರೆಗಳು ಆಳ್ವಿಕೆ ನಡೆಸಿದರು. ಇಡೀ ಶ್ರೀಲಂಕಾ ಒಬ್ಬನೇ ರಾಜನ ಆಳ್ವಿಕೆಯಡಿ ಬಂದಿದ್ದು ತೀರಾ ಕಡಿಮೆ. ಅಲ್ಲಿ ಯಾವಾಗಲೂ ಕಡಿಮೆಯೆಂದರೆ ಬೇರೆ ಬೇರೆ ಭಾಗಗಳಲ್ಲಿ ಎರಡು–ಮೂರು ರಾಜಮನೆತನಗಳು ಆಳ್ವಿಕೆ ನಡೆಸುತ್ತಿದ್ದವು. ಅವರಲ್ಲಿ ಕನಿಷ್ಠ ಒಂದು ತಮಿಳು ರಾಜಮನೆತನವಾಗಿರುತ್ತಿತ್ತು. ಉದಾಹರಣೆಗೆ ಹೇಳಬೇಕೆಂದರೆ, ಜಾಫ್ನಾ ಎಂಬ ತಮಿಳು ಸಾಮ್ರಾಜ್ಯ ಅನೇಕ ಶತಮಾನಗಳ ಕಾಲ ಸ್ವತಂತ್ರವಾಗಿ ಅಸ್ತಿತ್ವದಲ್ಲಿತ್ತು. ತಮಿಳು ಮತ್ತು ಸಿಂಹಳೀಯ ಸಾಮ್ರಾಜ್ಯಗಳ ನಡುವೆ ಯುದ್ಧಗಳೂ ಸರ್ವೇಸಾಮಾನ್ಯವಾಗಿದ್ದವು. ಅನುರಾಧಪುರವನ್ನಾಳುತ್ತಿದ್ದ ತಮಿಳು ದೊರೆಗೂ ಸಿಂಹಳೀಯ ರಾಜನಿಗೂ ಕ್ರಿ.ಪೂ. 2 ನೇ ಶತಮಾನದಲ್ಲೇ ಯುದ್ಧವಾಗಿತ್ತು. 2200 ವರ್ಷಗಳ ಹಿಂದೆ ನಡೆದ ಈ ಯುದ್ಧ ಪ್ರಾಯಶಃ ತಮಿಳು ಮತ್ತು ಸಿಂಹಳೀಯರ ನಡುವೆ ನಡೆದ ಮೊದಲ ಯುದ್ಧವಿರಬೇಕು.

1505ರಲ್ಲಿ ಪೋರ್ಚುಗೀಸರು ಶ್ರೀಲಂಕಾಕ್ಕೆ ಬಂದಾಗ ಅಲ್ಲಿ ಮೂರು ಸಾಮ್ರಾಜ್ಯಗಳಿದ್ದವು. ಈಶಾನ್ಯ ಭಾಗದಲ್ಲಿ ಜಾಫ್ನಾ ಸಾಮ್ರಾಜ್ಯ, ಪಶ್ಚಿಮ ಭಾಗದಲ್ಲಿ ಕೊಟ್ಟೆ ಸಾಮ್ರಾಜ್ಯ ಮತ್ತು ಕೇಂದ್ರದಲ್ಲಿ ಕಂಡ್ಯಾನ್ ಸಾಮ್ರಾಜ್ಯ. 1619ರಲ್ಲಿ ಪೋರ್ಚುಗೀಸರು ಜಾಫ್ನಾ ರಾಜ್ಯದ ತಮಿಳು ದೊರೆಯನ್ನು ಸೋಲಿಸಿ ಗೋವಾಕ್ಕೆ ತಂದು ಗಲ್ಲಿಗೇರಿಸಿದರು. ಅಲ್ಲಿಂದ 1658ರ ತನಕ ಪೋರ್ಚುಗೀಸರೇ ಜಾಫ್ನಾವನ್ನಾಳಿದರು. ನಂತರ ಡಚ್ಚರು ಪೋರ್ಚುಗೀಸರನ್ನು ಸೋಲಿಸಿ 1795ರ ತನಕ ಆಳ್ವಿಕೆ ನಡೆಸಿದರು. ಆ ನಂತರದಲ್ಲಿ ಡಚ್ಚರನ್ನು ಸೋಲಿಸಿ ಬ್ರಿಟಿಷರು 1948ರ ತನಕ ಆಳ್ವಿಕೆ ಮಾಡಿದರು. ಬ್ರಿಟೀಷರು ಕೇವಲ ಜಾಫ್ನಾ ಮಾತ್ರವಲ್ಲದೇ ಪೋರ್ಚುಗೀಸರ ಇಡೀ ಶ್ರೀಲಂಕಾವನ್ನು ವಶಪಡಿಸಿಕೊಂಡು ಆಳ್ವಿಕೆ ಮಾಡಿದರು. 1948ರಲ್ಲಿ ಬ್ರಿಟಿಷರು ಅಲ್ಲಿಂದ ಕಾಲ್ತೆಗೆದಾಗ ಅಂದರೆ ಶ್ರೀಲಂಕಾವು ತಥಾಕಥಿತವಾಗಿ ಸ್ವತಂತ್ರಗೊಂಡಾಗ ಸಿಂಹಳೀಯರು ಅಧಿಕಾರಕ್ಕೆ ಬಂದರು. ■

ಲಂಕೇಶ್

ತಾನೇ ತೋಡಿಕೊಂಡ ಗೋರಿ

ಶ್ರೀಲಂಕಾದಲ್ಲಿ ಸಿಂಹಳೀಯರ ದೌರ್ಜನ್ಯದ ವಿರುದ್ಧ ತಮಿಳರನ್ನು ಸಂಘಟಿಸಿ ಯಾವುದೇ ತಾರತಮ್ಯ ಅವಮಾನಗಳಿಲ್ಲದ ಪ್ರತ್ಯೇಕ ಸ್ವಾಭಿಮಾನಿ ತಮಿಳು ರಾಷ್ಟ್ರವೊಂದನ್ನು ನಿರ್ಮಿಸುವ ಎಲ್‌ಟಿಟಿಇಯ ಆಶಯ ಒಳ್ಳೆಯದೇ ಆಗಿದ್ದರೂ ಹೋರಾಟದ ಪ್ರಕ್ರಿಯೆಯಲ್ಲಿ ಅದು ಹಲವಾರು ಯಡವಟ್ಟುಗಳನ್ನು ಮಾಡಿಕೊಂಡಿದೆ. ವಾಸ್ತವದಲ್ಲಿ ಈ ಹೊತ್ತು ಅದು ಲಂಕಾ ಸೇನೆ ನೀಡುತ್ತಿರುವ ಮಾರಣಾಂತಿಕ ಏಟಿನಿಂದ ವಿಲವಿಲ ಒದ್ದಾಡುತ್ತಿದ್ದರೆ ಅದಕ್ಕೆ ತಮಿಳು ಹುಲಿಗಳು ಮಾಡಿಕೊಂಡಿರುವ ಈ ಯಡವಟ್ಟುಗಳು, ಅತಿರೇಕಗಳೂ ಒಂದಷ್ಟು ಮಟ್ಟಿಗೆ ಕಾರಣವಾಗಿವೆ.

ಕೆಲವು ಉದಾಹರಣೆಗಳನ್ನು ನೋಡಿ. ಪ್ರತ್ಯೇಕ ತಮಿಳು ಈಳಂ ಸ್ಥಾಪನೆಗಾಗಿ ಶ್ರೀಲಂಕಾದಲ್ಲಿ ಎಲ್‌ಟಿಟಿಇ ಒಂದೇ ಹೋರಾಡುತ್ತಿರಲಿಲ್ಲ. Tamil Eelam Liberation Organization (TELO), Eelam Revolutionary Organisation of Students (EROS), People's Liberation Organisation of Tamil Eelam (PLOTE), Eelam People's Revolutionary Liberation Front (EPRLF) ಹೀಗೆ ಹತ್ತು ಹಲವು ಸಂಘಟನೆಗಳು ಇದೇ ಉದ್ದೇಶಕ್ಕಾಗಿ ದುಡಿಯುತ್ತಿದ್ದವು. ಅವೆಲ್ಲವೂ ಸೇರಿಕೊಂಡು Eelam National Liberation Front (ENLF) ಎಂಬ ಒಂದು ಐಕ್ಯ ವೇದಿಕೆಯನ್ನೂ ರಚಿಸಿಕೊಂಡಿದ್ದವು. ಎಲ್‌ಟಿಟಿಇ 1984ರ ಏಪ್ರಿಲ್‌ನಲ್ಲಿ ಅಧಿಕೃತವಾಗಿ ಈ ಒಕ್ಕೂಟವನ್ನು ಸೇರಿಕೊಂಡಿತಾದರೂ ಅದನ್ನು ಯಶಸ್ವಿಯಾಗಿ ಮುನ್ನಡೆಸಲಿಲ್ಲ.



ಒಟ್ಟಾರೆ ಶ್ರೀಲಂಕಾದ ತಮಿಳರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಭಾರತ ನೀಡುತ್ತಿದ್ದ ಸಲಹೆಗಳನ್ನೇ TELO ಸಂಘಟನೆಯು ಎತ್ತಿ ಹಿಡಿಯುತ್ತಿತ್ತು. ಭಾರತ ತನ್ನ ಸ್ವಹಿತಾಸಕ್ತಿ ಕಾಪಾಡಿಕೊಳ್ಳುತ್ತದೆಯೇ ಹೊರತು ತಮಿಳು ಈಳಂ ಸ್ಥಾಪನೆಯನ್ನು ಎತ್ತಿಹಿಡಿಯುವುದಿಲ್ಲವೆಂದು ಎಲ್‌ಟಿಟಿಇ ಆಪಾದಿಸುತ್ತಿತ್ತು. ಈ ಭಿನ್ನಾಭಿಪ್ರಾಯಗಳನ್ನು ಮುಂದಿಡುತ್ತಲೇ 1986ರಲ್ಲಿ ಎಲ್‌ಟಿಟಿಇ ENLF ಒಕ್ಕೂಟದಿಂದ ಹೊರನಡೆಯಿತು.

ಆಮೇಲಾದರೂ ಭಿನ್ನಾಭಿಪ್ರಾಯಗಳಿದ್ದಾಗಲೂ ಇನ್ನಿತರ ತಮಿಳು ಸಂಘಟನೆಗಳೊಂದಿಗೆ ರಾಜಕೀಯ ಸೌಹಾರ್ದಯುತ ಸಂಬಂಧಗಳನ್ನು ಕಾಪಾಡಿಕೊಂಡು, ಅವೆಲ್ಲವನ್ನೂ ಸಿಂಹಳೀಯ ನಾಯಕತ್ವದ ವಿರುದ್ಧ ಸಂಘಟಿಸಿ ಹೋರಾಡಬೇಕಿತ್ತು, ಆದರೆ, ಎಲ್‌ಟಿಟಿಇ ಮಾಡಿದ್ದೇನು? TELO ಸಂಘಟನೆಯನ್ನು ತಮಿಳರ ಶತ್ರು ಎಂಬಂತೆ ಬಿಂಬಿಸಿ ಅದರ ಮೇಲೆಯೇ ದಾಳಿಗಿಳಿಯಿತು. ನೂರಾರು ಸಂಖ್ಯೆಯಲ್ಲಿ ಅದರ ನಾಯಕರನ್ನು ಕಂಡಕಂಡಲ್ಲಿ ಕೊಂದು ಹಾಕಿ ಆ ಇಡೀ ಸಂಘಟನೆ ಮುಂದೆಂದೂ ಮೇಲೇಳದಂತೆ ಹೊಸಕಿಹಾಕಿತು. ನಂತರ ಇನ್ನೊಂದು ತಮಿಳು ಸಂಘಟನೆಯಾಗಿದ್ದ EPRLF ಮೇಲೂ ಇದೇರೀತಿಯ ದಾಳಿ ಮಾಡಿ ಜಾಫ್ನಾ ನೆಲೆಯಲ್ಲಿ ಅದರ ಕುರುಹೂ ಇಲ್ಲದಂತೆ ಸಂಪೂರ್ಣವಾಗಿ ನಾಶ ಮಾಡಿತು. ಆಮೇಲೆ, ENLF ಒಕ್ಕೂಟದಲ್ಲಿದ್ದ ಎಲ್ಲಾ ತಮಿಳು ಸಂಘಟನೆಗಳು ಎಲ್‌ಟಿಟಿಇಯೊಳಗೆ ಸೇರಿಕೊಳ್ಳಬೇಕೆಂಬ ಹಠಮಾರಿ ಧೋರಣೆಯನ್ನು ತಾಳಿತು. ಹೀಗೆ ತಮಿಳು ಜನರಿಗಾಗಿಯೇ ಹೋರಾಡುತ್ತಿದ್ದ TELO ಮತ್ತು EPRLF ಸಂಘಟನೆಗಳನ್ನು ಹೊಸಕಿ ಹಾಕಿ ಉಳಿದ ಇಪ್ಪತ್ತು ಚಿಕ್ಕಪುಟ್ಟ ಸಂಘಟನೆಗಳನ್ನೆಲ್ಲಾ ಎಲ್‌ಟಿಟಿಇ ತನ್ನೊಳಗೆ ವಿಲೀನಗೊಳಿಸಿತು.

ತಮಿಳರೆಲ್ಲರೂ ಒಗ್ಗೂಡಿ ನಡೆಸಬೇಕಿದ್ದ ಈ ಹೋರಾಟ ಕೇವಲ ಎಲ್‌ಟಿಟಿಇ ನೇತೃತ್ವದ ಹೋರಾಟವಾಗಿಬಿಟ್ಟಿತು. ತಮ್ಮದೇ ತಮಿಳರಿಗಾಗಿ ಹೋರಾಡುತ್ತಿದ್ದ ಸಂಘಟನೆಗಳ ಮೇಲೆಯೇ ಶತ್ರುಗಳಂತೆ ದಾಳಿ ಮಾಡಿ ಕೊಂದುಹಾಕಿದ್ದು ಲಂಕಾದ ತಮಿಳರಿಗೆ ಎಲ್‌ಟಿಟಿಇ ಮೇಲೆ ಸಿಟ್ಟು ತರಿಸಿತ್ತು. ಅಂತೆಯೇ ಅದಕ್ಕಿದ್ದ ಜನಬೆಂಬಲವೂ ಒಂದಷ್ಟು ಮಟ್ಟಿಗೆ ಕುಸಿದುಹೋಯಿತು.

ಎಲ್‌ಟಿಟಿಇಯ ಇನ್ನೊಂದು ಪ್ರಮುಖ ಸಮಸ್ಯೆಯೆಂದರೆ ಅದು ಸ್ಥಾಪಿಸಲಿಚ್ಛಿಸುವ ಪ್ರತ್ಯೇಕ 'ತಮಿಳು ಈಳಂ'ನ ಜನಾಂಗೀಯ ಸ್ವರೂಪಕ್ಕೆ ಸಂಬಂಧಪಟ್ಟದ್ದು. ಅದರ ಪ್ರಕಾರ ಶ್ರೀಲಂಕಾದ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ತಮಿಳರೇ ಬಹುಸಂಖ್ಯಾತರಾಗಿರುವುದರಿಂದ ಅಲ್ಲಿ ಅವರಿಗಾಗಿಯೇ ಪ್ರತ್ಯೇಕ 'ತಮಿಳು ಈಳಂ' ಸ್ಥಾಪನೆಯಾಗಬೇಕು. ಅಲ್ಲಿ ತಮಿಳರಲ್ಲದೇ ಬೇರಾರೂ ಇರುವಂತಿಲ್ಲ. ಈ ನಿರ್ದಿಷ್ಟ ಪ್ರದೇಶದ ಜನಾಂಗೀಯ ಸಂಯೋಜನೆಯನ್ನು ಅಧ್ಯಯನ ಮಾಡಿದರೆ ಅಲ್ಲಿ ಗಣನೀಯ ಪ್ರಮಾಣದಲ್ಲಿ ಮುಸ್ಲಿಮರೂ ಇದ್ದಾರೆ. ಅವರೆಲ್ಲರೂ ತಮಿಳನ್ನೇ ಮಾತನಾಡುತ್ತಾರೆ. ಅವರೇನು ನಿನ್ನೆಮೊನ್ನೆ ಬಂದವರೇನಲ್ಲ, ಶತಶತಮಾನಗಳಿಂದ ಇಲ್ಲಿಯೇ ಬದುಕಿ ಬಾಳಿದವರು. ಇಲ್ಲಿ ತಮಿಳರನ್ನು ಬಿಟ್ಟು ಬೇರಾರೂ ಇರುವಂತಿಲ್ಲ ಎಂದರೆ ಅವರೆಲ್ಲಾ ಎಲ್ಲಿಗೆ ಹೋಗಬೇಕು?

1990ರ ದಶಕದ ಆರಂಭದಲ್ಲಿ ಮುಸ್ಲಿಮರು ಸಿಂಹಳೀಯ ಸರ್ಕಾರಕ್ಕೆ ಸಹಾಯ ಮಾಡುತ್ತಿದ್ದಾರೆಂದು ಆರೋಪಿಸಿ ಎಲ್‌ಟಿಟಿಇ ಅವರ ಹಳ್ಳಿಗಳನ್ನೆಲ್ಲಾ ಸುತ್ತುವರೆದು ಕೊಲ್ಲಲಾರಂಭಿಸಿತು. ಆಗಸ್ಟ್ 4ರಂದು ಕಟ್ಟನ್‌ಕುಡಿ ಪಟ್ಟಣದ ಮೀರಾ ಜಮ್ಮಾ ಮಸೀದಿಯಲ್ಲಿ ಮುಸ್ಲಿಮರು ಪ್ರಾರ್ಥನೆ ಮಾಡುತ್ತಿದ್ದಾಗ ತಮಿಳು ಹುಲಿಗಳು ಅವರ ಮೇಲೆ ಗುಂಡಿನ ಮಳೆಗರೆದು ಸಮಾರು ಇನ್ನೂರು ಜನರನ್ನು ಕೊಂದು ಹಾಕಿದ್ದರು. ಅದಕ್ಕೂ ಮೊದಲು 1987ರ ಜೂನ್ 2ರಂದು ಅರಂಥಲವ ಎಂಬಲ್ಲಿ 33 ಜನ ಬೌದ್ಧ ಭಿಕ್ಷುಗಳನ್ನು ಇದೇ ಕಾರಣಕ್ಕೆ ಕೊಂದಿದ್ದರು. ಇವು ಕೆಲವು ಉದಾಹರಣೆಗಳಷ್ಟೇ.

ಹೀಗೆ ತಮಿಳರಲ್ಲದ ಯಾವುದೇ ಜನಾಂಗೀಯರಿದ್ದರೂ ಅವರನ್ನು ಎಲ್‌ಟಿಟಿಇ ಸಂಶಯದಿಂದಲೇ ನೋಡುತ್ತದೆ. 'ತಮಿಳು ಈಳಂ'ನಲ್ಲಿ ಅವರಿಗೆ ಜಾಗವಿಲ್ಲ ಎಂಬುದನ್ನು ಅದು ಹಲವು ಬಾರಿ ಸ್ಪಷ್ಟಪಡಿಸಿದೆ.


ಇಲ್ಲಿಯತನಕ ಶ್ರೀಲಂಕಾದಲ್ಲಿ ಸಿಂಹಳೀಯರು ತಮಿಳರನ್ನು ನಡೆಸಿಕೊಂಡದ್ದಕ್ಕೂ, ಈಳಂನಲ್ಲಿ ತಮಿಳರು ಇನ್ನಿತರ ಜನಾಂಗದವರನ್ನು ನಡೆಸಿಕೊಳ್ಳುವುದಕ್ಕೂ ಏನು ವ್ಯತ್ಯಾಸವಿರುತ್ತದೆ? ವಾಸ್ತವದಲ್ಲಿ ಎಲ್‌ಟಿಟಿಇಯ ಈ ಸಂಕುಚಿತವಾದಿ ಧೋರಣೆ ಸರಿಯಲ್ಲ. ■

▶▶▶

ಅದರ ಬಗ್ಗೆ ದೊಡ್ಡ ಮಟ್ಟದ ವಾಗ್ವಾದಗಳು, ಪ್ರತಿಭಟನೆಗಳು ನಡೆಯುತ್ತಿವೆ. ನಮ್ಮ ದೇಶದಲ್ಲಿ, ಅದರಲ್ಲೂ ವಿಶೇಷವಾಗಿ ತಮಿಳುನಾಡಿನಲ್ಲಿ ಎಲ್‌ಟಿಟಿಇ ಪರವಾದ ಪ್ರತಿಭಟನೆಗಳು ತಾರಕಕ್ಕೇರಿವೆ. "ಪ್ರಭಾಕರನ್ ಒಬ್ಬ ಭಯೋತ್ಪಾದಕನಲ್ಲ, ಎಲ್‌ಟಿಟಿಇ ಒಂದು ಭಯೋತ್ಪಾದಕ ಸಂಘಟನೆಯಲ್ಲ, ಅದು ಶ್ರೀಲಂಕಾದಲ್ಲಿ ತಮಿಳರಿಗಾಗಿ ಪ್ರತ್ಯೇಕ ದೇಶವೊಂದನ್ನು ಸ್ಥಾಪಿಸುವುದಕ್ಕೆ ಹೋರಾಡುತ್ತಿರುವ ಸ್ವಾಭಿಮಾನಿ ಸಂಘಟನೆ" ಎಂದು ಖುದ್ದು ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯೇ ಬಹಿರಂಗ ಹೇಳಿಕೆ ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ತಮಿಳರ ಮಾರಣಹೋಮ ನಡೆಸುತ್ತಿರುವ ಶ್ರೀಲಂಕಾ ಸೈನ್ಯ ತನ್ನ ಕಾರ್ಯಾಚರಣೆಯನ್ನು ನಿಲ್ಲಿಸಬೇಕೆಂದು ಉಪವಾಸ ಸತ್ಯಾಗ್ರಹವನ್ನೂ ಪ್ರಾರಂಭಿಸಿದ್ದರು.

ಅಂತೆಯೇ "ಎಲ್‌ಟಿಟಿಇ ನಾಯಕ ಪ್ರಭಾಕರನ್‌ಗೆ ಸ್ವಲ್ಪ ಹೆಚ್ಚೂಕಡಿಮೆಯಾದರೆ ಭಾರತದಲ್ಲಿ ರಕ್ತಪಾತವಾಗುತ್ತದೆ. ಭಾರತ ಒಂದು ಐಕ್ಯ ದೇಶವಾಗಿ ಉಳಿಯುವುದಿಲ್ಲ" ಎಂದು ಎಂಡಿಎಂಕೆಯ ನಾಯಕ ವೈಕೋ ಗುಡುಗಿದ್ದಾರೆ. ಇನ್ನು ಕಾಂಗ್ರೆಸ್ ಪಕ್ಷ ಭಾರತದ ಪ್ರಧಾನಿ ರಾಜೀವ್‌ಗಾಂಧಿಯನ್ನು ಬಾಂಬಿಕ್ಕಿ ಕೊಂದಿರುವ ಎಲ್‌ಟಿಟಿಇ ಒಂದು ಭಯೋತ್ಪಾದಕ ಸಂಘಟನೆ ಎಂದು ದೂರುತ್ತಾ ಅದರ ನಾಯಕ ಪ್ರಭಾಕರನ್ ಏನಾದರೂ ಜೀವಂತವಾಗಿ ಸೆರೆಸಿಕ್ಕರೆ ಭಾರತದ ವಶಕ್ಕೊಪ್ಪಿಸಬೇಕು ಎಂದು ಒತ್ತಾಯಿಸಲಾರಂಭಿಸಿದೆ.

ಈ ಯುದ್ಧದಿಂದಾಗಿ ಶ್ರೀಲಂಕಾದಲ್ಲಿನ ತಮಿಳು ರಾಷ್ಟ್ರೀಯತೆಯ ಪ್ರಶ್ನೆಯ ಬಗ್ಗೆ ಅದಕ್ಕಾಗಿ ನಡೆದ ಸುದೀರ್ಘ ಹೋರಾಟಗಳ ಬಗ್ಗೆ, ಸಶಸ್ತ್ರ ಸ್ವರೂಪದ ಹೋರಾಟ ಮಾದರಿಯ ಬಗ್ಗೆ ಹತ್ತು ಹಲವು ಪ್ರಶ್ನೆಗಳು ಏಳುತ್ತಿವೆ. ಎಲ್‌ಟಿಟಿಇ ಸಶಸ್ತ್ರ ಹೋರಾಟದ ಹಾದಿ ಹಿಡಿದಿರುವುದರಿಂದ ಕೆಲವರಿಗೆ ತಮಿಳು ಹುಲಿಗಳು ರಕ್ತಪಿಪಾಸು ಭಯೋತ್ಪಾದಕರಂತೆ ಕಂಡರೆ ಮತ್ತೆ ಕೆಲವರಿಗೆ ಅವರು ನ್ಯಾಯಸಮ್ಮತ ತಮಿಳು ವಿಮೋಚನಾ ಹೋರಾಟಗಾರರಾಗಿ ಕಾಣುತ್ತಾರೆ. ಶ್ರೀಲಂಕಾದ ತಮಿಳು ರಾಷ್ಟ್ರೀಯತಾ ಹೋರಾಟವನ್ನು ಬಗ್ಗು ಬಡಿಯುವುದಕ್ಕೆ ನಮ್ಮ ದೇಶದಿಂದಲೂ ಸೈನ್ಯವನ್ನು ಕಳಿಸಿದ ಇತಿಹಾಸವಿದೆ. ಅದಕ್ಕೆ ಪ್ರತೀಕಾರವಾಗಿ ತಮಿಳು ಹುಲಿಗಳು ನಮ್ಮ ಪ್ರಧಾನಿ ರಾಜೀವ್ ಗಾಂಧಿಯನ್ನು ಕೊಂದುಹಾಕಿದ್ದಿದೆ. ಇಂದು ಶ್ರೀಲಂಕಾದಲ್ಲಿ ತಮಿಳರ ಮೇಲೆ ಸಿಂಹಳೀಯ ಸೇನೆ ನಡೆಸುತ್ತಿರುವ ಬರ್ಬರ ದೌರ್ಜನ್ಯವನ್ನು ನಿಲ್ಲಿಸಲು ಅಲ್ಲಿನ ಅಧ್ಯಕ್ಷ ಮಹಿಂದ್ರ ರಾಜಪಕ್ಸೆಯ ಮೇಲೆ ಒತ್ತಡ ಹೇರುವಂತೆ ಕರುಣಾನಿಧಿ, ವೈಕೋರಂಥ ನಾಯಕರು ಕೇಂದ್ರವನ್ನು ನಿರಂತರವಾಗಿ ಒತ್ತಾಯಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಪ್ರಣಬ್ ಮುಖರ್ಜಿಯವರು ಎಲ್‌ಟಿಟಿಇ ಮುಂದಿಟ್ಟ ಕದನವಿರಾಮವನ್ನು ಒಪ್ಪಿಕೊಳ್ಳುವಂತೆ ಶ್ರೀಲಂಕಾ ಸರ್ಕಾರವನ್ನು ಆಗ್ರಹಿಸುತ್ತಿದ್ದಾರೆ.



ವಿಶ್ವದಾದ್ಯಂತ ತಮಿಳರು ಶ್ರೀಲಂಕಾ ಸೇನೆ ತಮಿಳರ ಮಾರಣಹೋಮ ನಡೆಸುತ್ತಿರುವುದರ ವಿರುದ್ಧ ವ್ಯಾಪಕವಾಗಿ ಪ್ರತಿಭಟಿಸುತ್ತಿದ್ದಾರೆ. ಆದರೆ, ಶ್ರೀಲಂಕಾ ಸರ್ಕಾರ ಮಾತ್ರ ಅಳಿದುಳಿದ ಎಲ್‌ಟಿಟಿಇ ನೆಲೆಗಳನ್ನು ಸಂಪೂರ್ಣ ನಾಶಪಡಿಸುವುದಕ್ಕಾಗಿ ಹಾಗೂ ಹೋರಾಟದ ನೇತೃತ್ವ ವಹಿಸಿರುವ ವೇಲುಪಿಳ್ಳೈ ಪ್ರಭಾಕರನ್‌ರನ್ನು ಜೀವಂತವಾಗಿ ಇಲ್ಲವೆ ಹೆಣವಾಗಿ ಹಿಡಿಯುವುದಕ್ಕಾಗಿ ತನ್ನ ಸೈನಿಕ ಕಾರ್ಯಾಚರಣೆಯನ್ನು ಮುನ್ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್‌ಟಿಟಿಇಯ ಹುಲಿಗಳು ಮತ್ತು ಶ್ರೀಲಂಕಾದ ಸಿಂಹಗಳ ನಡುವಿನ ಈ ಅಂತರ್ಯುದ್ಧ ಕೇವಲ ಶ್ರೀಲಂಕಾದ ಆಂತರಿಕ ಪ್ರಶ್ನೆಯಾಗಿ ಉಳಿಯದೇ ಅದೊಂದು ಅಂತಾರಾಷ್ಟ್ರೀಯ ವಿದ್ಯಮಾನವಾಗಿ ಹೊರಹೊಮ್ಮಿದೆ. ಹಾಗಾಗಿ, ಶ್ರೀಲಂಕಾದಲ್ಲಿ ತಮಿಳು ರಾಷ್ಟ್ರೀಯತೆಯ ಪ್ರಶ್ನೆ, ಅದಕ್ಕಾಗಿ ಶಸ್ತ್ರಸಜ್ಜಿತವಾಗಿ ಹೋರಾಡುತ್ತಿರುವ ಎಲ್‌ಟಿಟಿಇ ಬಗ್ಗೆ, ಈ ಭೀಕರ ಅಂತರ್ಯುದ್ಧದಲ್ಲಿ ಬಲಿಪಶುಗಳಾಗುತ್ತಿರುವ ಅಮಾಯಕ ತಮಿಳರ ಪರಿಸ್ಥಿತಿಗಳ ಬಗ್ಗೆ ಯಾವುದೇ ಪೂರ್ವಾಗ್ರಹವಿಲ್ಲದೇ ವಸ್ತುನಿಷ್ಠವಾಗಿ ಅವಲೋಕಿಸುವ ಅವಶ್ಯಕತೆಯಿದೆ.



ಅಂತಾರಾಷ್ಟ್ರೀಯ ಪ್ರತಿರೋಧ

ಶ್ರೀಲಂಕಾದಲ್ಲಿ ತಮಿಳರ ಮೇಲೆ ಲಂಕಾ ಸರ್ಕಾರ ನಡೆಸುತ್ತಿರುವ ದೌರ್ಜನ್ಯಗಳನ್ನು, ಮಾರಣಹೋಮಗಳನ್ನು ಖಂಡಿಸಿ ಇಡೀ ವಿಶ್ವದಾದ್ಯಂತ ಪ್ರತಿಭಟನೆಗಳು ಭುಗಿಲೆದ್ದಿವೆ. ಲಂಡನ್‌ನಲ್ಲಿ ಕಳೆದೆರಡು ವಾರಗಳಿಂದ ಸುಮಾರು ಎರಡು ಲಕ್ಷ ತಮಿಳರು ಬ್ರಿಟಿಷ್ ಪಾರ್ಲಿಮೆಂಟಿನೆದುರು ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಅವರುಗಳಲ್ಲಿ ಪರಮೇಶ್ವರನ್ ಸುಬ್ರಮಣಿಯನ್ ಎಂಬ 28 ವರ್ಷದ ವಿದ್ಯಾರ್ಥಿಯೊಬ್ಬ ಕಳೆದ 23 ದಿನಗಳಿಂದ ಕೇವಲ ನೀರು ಕುಡಿಯುತ್ತಾ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾನೆ. ಅತ್ತ ಅಮೆರಿಕದ ನ್ಯೂಯಾರ್ಕ್‌ನಲ್ಲಿ Tamils Against Genocide (TAG) ಎಂಬ ಸಂಘಟನೆಯ ನೇತೃತ್ವದಲ್ಲಿ ಸಾವಿರಾರು ತಮಿಳರು ಹಲವು ವಾರಗಳಿಂದ ಪ್ರತಿಭಟನೆಯಲ್ಲಿ ನಿರತರಾಗಿದ್ದಾರೆ. ವಿಶ್ವಸಂಸ್ಥೆ ಕೂಡಲೇ ಮಧ್ಯಪ್ರವೇಶ ಮಾಡಿ ಶ್ರೀಲಂಕಾದಲ್ಲಿ ಲಂಕಾ ಸೇನೆ ನಡೆಸುತ್ತಿರುವ ತಮಿಳರ ಮಾರಣಹೋಮವನ್ನು ಕೂಡಲೇ ನಿಲ್ಲಿಸಬೇಕೆಂದು ಆಗ್ರಹಿಸುತ್ತಿದ್ದಾರೆ.

ಮತ್ತೊಂದೆಡೆ ಫ್ರಾನ್ಸ್‌ನ ರಾಜಧಾನಿ ಪ್ಯಾರಿಸ್‌ನಲ್ಲಿ ತಮಿಳರು ಏಪ್ರಿಲ್ ಮೊದಲ ವಾರದಿಂದಲೂ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ. ಪ್ರತಿಭಟನೆಗೆ ನೇತೃತ್ವ ಕೊಟ್ಟಿರುವ Tamil Youth Organization (TYO) ಎಂಬ ಸಂಘಟನೆ ಎಲ್ಲಿಯತನಕ ಲಂಕಾದಲ್ಲಿ ತಮಿಳರ ಮಾರಣಹೋಮ ನಿಲ್ಲುವುದಿಲ್ಲವೋ ಅಲ್ಲಿಯ ತನಕ ಪ್ರತಿಭಟನೆ ಮುಂದುವರೆಸುವುದಾಗಿ, ಇನ್ನೂ ಉಗ್ರವಾಗಿ ಪ್ರತಿಭಟಿಸುವುದಾಗಿ ಎಚ್ಚರಿಕೆ ನೀಡಿದೆ.

ಏಪ್ರಿಲ್ 13ರಂದು ಆಸ್ಟ್ರೇಲಿಯಾದಲ್ಲಿ 4000 ತಮಿಳರು [illegible] ಒಂದು ಪ್ರತಿಭಟನೆಗಳು ನಡೆಯುತ್ತಲೇ ಇವೆ.



ಯಾಕೀ ಹೋರಾಟ?

ಸ್ವಾತಂತ್ರ್ಯಾನಂತರ ಸಿಂಹಳೀಯರು ತಮಿಳರ ಮೇಲೆ ದೌರ್ಜನ್ಯ, ಶೋಷಣೆ, ದಮನ, ತಾರತಮ್ಯಗಳನ್ನು ಪ್ರಾರಂಭಿಸಿದರು. ತಮಿಳು ಪ್ರದೇಶಗಳನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಳ್ಳುವುದಕ್ಕೆ ಪ್ರಯತ್ನಿಸತೊಡಗಿದರು. ತಮಿಳರಿಗೆ ಪೌರತ್ವವನ್ನೇ ನಿರಾಕರಿಸಿ ದೇಶದ ಸಂವಿಧಾನ ರೂಪಿಸಲಾಯಿತು. ಶ್ರೀಲಂಕಾ ಸ್ವತಂತ್ರಗೊಂಡ ನಂತರ ಲಕ್ಷಾಂತರ ಸಂಖ್ಯೆಯಲ್ಲಿದ್ದ ತಮಿಳರಿಗೆ ಪೌರತ್ವವನ್ನೇ ನಿರಾಕರಿಸಿ ದೇಶದ ಸಂವಿಧಾನವನ್ನು ರೂಪಿಸುವ ಮೂಲಕ ಸಿಂಹಳೀಯರು ತಮಿಳರಿಗೆ ಮೊದಲ ಹೊಡೆತ ಕೊಟ್ಟರು.

ನಂತರ 1956ರ ಜೂನ್‌ನಲ್ಲಿ ಪ್ರಧಾನಿ ಬಂಡಾರನಾಯಕೆ ಶ್ರೀಲಂಕಾದಲ್ಲಿ ಸಿಂಹಳೀಯ ಭಾಷೆಯೊಂದೇ ಅಧಿಕೃತ ಭಾಷೆ ಎಂಬ ಕಾನೂನು ಜಾರಿಗೆ ತಂದರು. ಇದು ದ್ವೀಪರಾಷ್ಟ್ರದಲ್ಲಿ ತಮಿಳರ ಅಸ್ತಿತ್ವವನ್ನೇ ಅಲ್ಲಗಳೆಯುವ, ತಮಿಳರನ್ನು ದ್ವಿತೀಯ ದರ್ಜೆಯ ಜನರನ್ನಾಗಿ ನೋಡುವ ಸಿಂಹಳೀಯ ದುರಭಿಮಾನಕ್ಕೆ ಹಿಡಿದ ಕನ್ನಡಿಯಂತಿತ್ತು. ತಮಿಳರಿಗೆ ಸಿಂಹಳೀಯ ಭಾಷೆ ಬರುವುದಿಲ್ಲವಾದ್ದರಿಂದ ಸರ್ಕಾರಿ ಉದ್ಯೋಗ ಬೇಕೆಂದರೆ ಸಿಂಹಳೀಯ ಭಾಷೆ ಕಲಿಯುವುದು ಕಡ್ಡಾಯ ಎಂಬ ನಿಯಮ ಜಾರಿಗೆ ತರಲಾಯಿತು. ಇದರಿಂದ ಲಕ್ಷಾಂತರ ತಮಿಳರು ಸರ್ಕಾರಿ ಉದ್ಯೋಗದಿಂದ ವಂಚಿತರಾದರಲ್ಲದೇ ತಮ್ಮದೇ ನಾಡಿನಲ್ಲಿ ಪರದೇಶಿಗಳಂತೆ ಬದುಕಬೇಕಾದ ಹೀನಾಯಪರಿಸ್ಥಿತಿಯನ್ನು ಎದುರಿಸಿದರು. ಈ ತಾರತಮ್ಯದ ವಿರುದ್ಧ ತಮಿಳರು ಅನಿವಾರ್ಯವಾಗಿ ಹೋರಾಟಕ್ಕಿಳಿದರು. ಆದರೆ ಅಧಿಕಾರದಲ್ಲಿದ್ದ ಸಿಂಹಳೀಯರು ಈ ಹೋರಾಟವನ್ನು ಯಾವುದೇ ದಯೆ ದಾಕ್ಷಿಣ್ಯವಿಲ್ಲದೇ ಪೊಲೀಸು, ಮಿಲಿಟರಿ ಬಳಸಿ ಬಗ್ಗುಬಡಿದರು. ಇಡೀ ಶ್ರೀಲಂಕಾದಾದ್ಯಂತ ನೂರಾರು ತಮಿಳರನ್ನು ನಿರ್ದಯವಾಗಿ ಕೊಂದುಹಾಕಿದರು. ಕೋಟಿಗಟ್ಟಲೆ ಬೆಲೆಬಾಳುವ ಅವರ ಆಸ್ತಿಪಾಸ್ತಿಯನ್ನು ಧ್ವಂಸ ಮಾಡಿದರು.

ನಂತರ 1970ರಲ್ಲಿ ಪ್ರಧಾನಿ ಸಿರಿಮಾವೋ ಭಂಡಾರನಾಯಕೆ (ಎಸ್.ಡಿ.ಆರ್.ಡಿ. ಭಂಡಾರನಾಯಕೆಯ ಪತ್ನಿ) ಏಕರೂಪಿ ಶಿಕ್ಷಣದ ಹೆಸರಿನಲ್ಲಿ ಈಗಾಗಲೇ ತಮಿಳರಿಗಾದ ಗಾಯದ ಮೇಲೆ ಮತ್ತೆ ಬರೆ ಎಳೆಯುವ ಪ್ರಯತ್ನ ಮಾಡಿದರು. ಇದರ ಪ್ರಕಾರ ತಮಿಳು ವಿದ್ಯಾರ್ಥಿಗಳು ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಬೇಕೆಂದರೆ ಉಳಿದವರಿಗಿಂತ ಹೆಚ್ಚು ಅಂಕಗಳನ್ನು ಪಡೆದುಕೊಳ್ಳುವುದು ಕಡ್ಡಾಯವಾಗಿತ್ತು.

▶▶▶

▶▶▶

ಈ ಸಿಂಹಳೀಯ ದುರಭಿಮಾನ ಎಷ್ಟರಮಟ್ಟಿಗೆ ಪ್ರಭಾವಶಾಲಿಯಾಗಿತ್ತೆಂದರೆ, ಸಿಂಹಳೀಯರು ಎಂದೂ ತಮಿಳರನ್ನು ತಮ್ಮ ದೇಶದ ನಾಗರೀಕರೆಂದು ಒಪ್ಪಿಕೊಳ್ಳಲೇ ಇಲ್ಲ. ತಮಿಳರೆಲ್ಲರೂ ಸಿಂಹಳೀಯರ ಸೇವೆಗಾಗಿ ಭಾರತದಿಂದ ಬಂದವರು ಎಂಬ ಭಾವನೆ ಇಂದಿಗೂ ಗಾಢವಾಗಿ ಬೇರೂರಿದೆ.

ಮೊದಮೊದಲು ಈ ಎಲ್ಲಾ ತಾರತಮ್ಯ, ಅವಮಾನ, ಅನ್ಯಾಯ, ದೌರ್ಜನ್ಯಗಳನ್ನು ತಮಿಳರು ಶಾಂತಿಯುತವಾಗಿಯೇ ವಿರೋಧಿಸಿದರು, ಪ್ರತಿಭಟಿಸಿದರು. ಈ ಶಾಂತಿಯುತ ಪ್ರತಿರೋಧ ಅವರಿಗೆ ಯಾವ ನ್ಯಾಯವನ್ನೂ ದೊರಕಿಸಿಕೊಡಲಿಲ್ಲ. ಬದಲಾಗಿ ಇನ್ನಷ್ಟು ದೌರ್ಜನ್ಯವನ್ನೇ ಅನುಭವಿಸಬೇಕಾಯಿತು.

ಶೋಷಣೆ, ದಮನಗಳು ಹೆಚ್ಚಾದಷ್ಟೂ ಅದರ ವಿರುದ್ಧದ ಬಂಡಾಯವೂ ತೀವ್ರಗೊಳ್ಳುತ್ತದೆ ಎಂಬುದು ಚರಿತ್ರೆ ಸಾಬೀತುಪಡಿಸಿದ ಸಾರ್ವತ್ರಿಕ ಸತ್ಯ. ಅದು ಶ್ರೀಲಂಕಾಕ್ಕೂ ಹೊರತಲ್ಲ. ತಮ್ಮ ಮೇಲೆ ಹೇಳತೀರದ ದಮನ, ಶೋಷಣೆ, ದೌರ್ಜನ್ಯಗಳು ಹೆಚ್ಚಾದಂತೆ ಅವುಗಳ ವಿರುದ್ಧ ತಮಿಳರು ದಿಟ್ಟತರಾಗಿ ಬಂಡಾಯವೇಳಲಾರಂಭಿಸಿದರು. ಸಿಂಹಳೀಯ ದುರಭಿಮಾನಿಗಳ ವಿರುದ್ಧ ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಅವರು ಸ್ವಾಭಿಮಾನಿ ಹೋರಾಟಕ್ಕೆ ಮುಂದಾದರು. ಆರಂಭದಲ್ಲಿ ಚಿಕ್ಕಪುಟ್ಟ ಘರ್ಷಣೆಗಳಂತೆ ಕಾಣುತ್ತಿದ್ದ ಈ ಸಂಘರ್ಷ ದಿನಕಳೆದಂತೆ ಸಂಘಟಿತ ಸಶಸ್ತ್ರ ಹೋರಾಟವಾಗಿ ಪರಿಣಮಿಸಿತು. ಎಲ್ಲಿಯತನಕ ಶ್ರೀಲಂಕಾ ದ್ವೀಪದಲ್ಲಿ ತಮಿಳರಿಗಾಗಿಯೇ ಸ್ವತಂತ್ರ, ಸಾರ್ವಭೌಮ ರಾಷ್ಟ್ರವೊಂದು ನಿರ್ಮಾಣವಾಗುವುದಿಲ್ಲವೋ ಅಲ್ಲಿಯತನಕ ಸಿಂಹಳೀಯರ ದುರಭಿಮಾನ, ದಮನ, ಶೋಷಣೆಗಳಿಗೆ ಕೊನೆಯಿರುವುದಿಲ್ಲವೆಂಬ ಭಾವನೆ ತಮಿಳರಲ್ಲಿ ಗಟ್ಟಿಯಾಗುತ್ತಾ ಹೋಯಿತು. ತಮಿಳರು ಬಹುಸಂಖ್ಯಾತರಾಗಿರುವ ಉತ್ತರ ಶ್ರೀಲಂಕಾದ ಜಾಫ್ನಾ, ಬಟ್ಟಿಕಲೋವಗಳಂತಹ ಪ್ರದೇಶಗಳನ್ನು ಒಟ್ಟು ಸೇರಿಸಿ ಸ್ವತಂತ್ರ 'ತಮಿಳು ಈಳಂ' ಸೃಷ್ಟಿಸುವುದಕ್ಕೆ ಸಂಘಟಿತ ಹೋರಾಟಗಳು ಪ್ರಾರಂಭವಾದವು. ಈಳಂ ಎಂದರೆ ತಮಿಳಿನಲ್ಲಿ ತಾಯ್ನಾಡು ಎಂದರ್ಥ.

'ತಮಿಳು ಈಳಂ'ಗಾಗಿ ಭುಗಿಲೆದ್ದ ಹೋರಾಟ

ಶ್ರೀಲಂಕಾದ ತಮಿಳರ ಮೇಲೆ ನಡೆಯುತ್ತಿದ್ದ ಶೋಷಣೆ-ದಮನಗಳ ವಿರುದ್ಧದ ಚಳವಳಿ ಹೊಸ ತಿರುವು ಪಡೆದುಕೊಂಡದ್ದು 1972 ರಲ್ಲಿ ಹುಟ್ಟಿದ "ಹುಲಿಗಳ ಚಳವಳಿ"ಯೊಂದಿಗೆ. ಇದನ್ನು ಹುಟ್ಟು ಹಾಕಿದವರು ಇಂದಿನ ಚಳವಳಿಯ ನಾಯಕ ಮತ್ತು ತಮಿಳು ಹುಲಿಗಳ ಮಿಲಿಟರಿ ಕಮ್ಯಾಂಡರ್ ವೇಲುಪಿಳ್ಳೈ ಪ್ರಭಾಕರನ್. 1976ರ ಮೇನಲ್ಲಿ ಹಲವು ತಮಿಳು ಸಂಘಟನೆಗಳ ಒಕ್ಕೂಟವಾದ 'ತಮಿಳು ಐಕ್ಯ ವೇದಿಕೆ'ಯು ರಾಷ್ಟ್ರೀಯ ವಿಚಾರ ಸಂಕೀರ್ಣವನ್ನು ಸಂಘಟಿಸಿತ್ತು. ಆ ಸಭೆಯಲ್ಲಿಯೇ ಸಂಪೂರ್ಣ ಪ್ರತ್ಯೇಕ ಮತ್ತು ಸ್ವತಂತ್ರ ತಮಿಳು ರಾಷ್ಟ್ರಕ್ಕಾಗಿ ಹೋರಾಟ ನಡೆಸುವ ಚಾರಿತ್ರಿಕ ನಿರ್ಣಯವನ್ನು ಕೈಗೊಳ್ಳಲಾಯಿತು.



ಹೀಗೆ, ಆರಂಭದಲ್ಲಿ ತಮ್ಮ ಮೇಲೆ ಸಿಂಹಳೀಯರು ನಡೆಸುತ್ತಿದ್ದ ಶೋಷಣೆ, ದಮನಗಳ ವಿರುದ್ಧ ಶುರುವಾದ ತಮಿಳರ ಹೋರಾಟ ಕ್ರಮೇಣ ರಾಷ್ಟ್ರೀಯತೆಗಳ ಸ್ವಯಂ ನಿರ್ಣಯಾಧಿಕಾರದ ಹಕ್ಕಿನ (**Right to Self-determination**) ಸೈದ್ಧಾಂತಿಕ ನೆಲೆಗಟ್ಟನ್ನು ಕಟ್ಟಿಕೊಳ್ಳುತ್ತಾ ಪ್ರತ್ಯೇಕ ತಮಿಳು ರಾಷ್ಟ್ರದ ಸ್ಥಾಪನೆಯ ತಿರುವು ಪಡೆದುಕೊಂಡಿತು.

1976ರಲ್ಲಿ ಎಲ್‌ಟಿಟಿಇ ಸಂಘಟನೆ ಹುಟ್ಟಿಕೊಂಡಮೇಲಂತೂ ಶ್ರೀಲಂಕಾದ ತಮಿಳು ರಾಷ್ಟ್ರೀಯತಾ ಹೋರಾಟಕ್ಕೆ ಹೊಸ ಸ್ಫೂರ್ತಿ ಬಂದಂತಾಯಿತು. 'ತಮಿಳು ಹುಲಿಗಳು' ಎಂದೇ ಪ್ರಸಿದ್ಧವಾಗಿರುವ ಎಲ್‌ಟಿಟಿಇಯ ಹೋರಾಟಗಾರರು ತಮಿಳರೇ ಬಹುಸಂಖ್ಯಾತರಾಗಿರುವ ಶ್ರೀಲಂಕಾದ ಉತ್ತರ ಭಾಗಗಳನ್ನು ಬೇರ್ಪಡಿಸಿ ಸ್ವತಂತ್ರ ಪ್ರತ್ಯೇಕ ತಮಿಳು ರಾಷ್ಟ್ರವನ್ನು ನಿರ್ಮಿಸಬೇಕೆಂದು ಕರೆಕೊಟ್ಟು, ದೊಡ್ಡ ಪ್ರಮಾಣದಲ್ಲಿ ಹೋರಾಟಕ್ಕಿಳಿದರು. ಅಲ್ಲಿಯತನಕ ಕೇವಲ ಶಾಂತಿಯುತ ಸಭೆ, ಸಮಾರಂಭ, ಪ್ರತಿಭಟನೆ, ಧರಣಿ ಮಾಡಿ ಸುಸ್ತಾಗಿದ್ದ ತಮಿಳು ಯುವಕರನ್ನು ಬಂದೂಕು ಹೆಗಲಿಗೇರಿಸಿಕೊಂಡು ಹೋರಾಡುತ್ತಿದ್ದ ಎಲ್‌ಟಿಟಿಇ 'ಹುಲಿಗಳು' ಬಹುವಾಗಿ ಆಕರ್ಷಿಸಿದರು. ಪರಿಣಾಮವಾಗಿ ತಮಿಳು ಯುವಕರು ದೊಡ್ಡ ಸಂಖ್ಯೆಯಲ್ಲಿ ಎಲ್‌ಟಿಟಿಇ ಸೇರುವುದರೊಂದಿಗೆ ಅದೊಂದು ಬೃಹತ್ ಗೆರಿಲ್ಲಾ ಸೈನ್ಯವಾಗಿ ಮಾರ್ಪಟ್ಟಿತು.

ಮೊದಮೊದಲು ಸ್ಥಳೀಯ ಪೊಲೀಸರನ್ನು, ಚಿಕ್ಕಪುಟ್ಟ ರಾಜಕಾರಣಿಗಳನ್ನು ತಮ್ಮ ಟಾರ್ಗೇಟ್ ಮಾಡಿ ಆಕ್ರಮಣ ಮಾಡುತ್ತಿದ್ದ 'ಹುಲಿಗಳು' ತಮ್ಮ ಪ್ರಾಬಲ್ಯ ಹೆಚ್ಚಾಗುತ್ತಿದ್ದಂತೆಯೇ ರಾಷ್ಟ್ರ ಮಟ್ಟದ ಸಿಂಹಳೀಯ ರಾಜಕೀಯ ನಾಯಕರ ಮೇಲೆ ದಾಳಿಗಿಳಿದರು. ನೇರವಾಗಿ ಶ್ರೀಲಂಕಾ ಸೈನ್ಯದೊಂದಿಗೆ ಕಾದಾಡಲಾರಂಭಿಸಿದರು. 1983ರಲ್ಲಿ ಎಲ್‌ಟಿಟಿಇ ಶ್ರೀಲಂಕಾ ಸೇನೆಯ 13 ಯೋಧರನ್ನು ಕೊಲ್ಲುವ ಮೂಲಕ ನಿರ್ಣಾಯಕ ಯುದ್ಧವನ್ನು ಪ್ರಾರಂಭಿಸಿಬಿಟ್ಟಿತು.

ಆರಂಭದ ದಿನಗಳಲ್ಲಿ ಅಷ್ಟೇನೂ ಪ್ರಖರವಾಗಿರದ ಅವರ ಹೋರಾಟ ಸಶಸ್ತ್ರ ರೂಪವನ್ನು ಪಡೆಯುವುದರೊಂದಿಗೆ ಇಡೀ ವಿಶ್ವದ ಗಮನ ಸೆಳೆಯಿತು. ಈ ಸಶಸ್ತ್ರ ಹೋರಾಟದ ಪ್ರಮುಖ ಉದ್ದೇಶವೇ ತಮಿಳರಿಗೆ ಸ್ವಾಭಿಮಾನಿ ಬದುಕನ್ನು ಕೊಡುವ ಸ್ವತಂತ್ರ ತಮಿಳು ರಾಷ್ಟ್ರದ ಸ್ಥಾಪನೆಯಾಗಿರುವುದರಿಂದ ಶ್ರೀಲಂಕಾದ ಉತ್ತರ ಮತ್ತು ಪೂರ್ವಭಾಗಗಳಲ್ಲಿ ಬಹುಸಂಖ್ಯಾತರಾಗಿರುವ ತಮಿಳರು ಇದಕ್ಕೆ ಸಕ್ರಿಯ ಬೆಂಬಲ ಕೊಟ್ಟು ತಾವೂ ಅದರಲ್ಲಿ ಭಾಗಿಯಾದರು. ಹೀಗೆ, ತಮಿಳು ಈಳಂ ಹೋರಾಟ ಕೇವಲ ಎಲ್‌ಟಿಟಿಇ ಯೋಧರು ಮಾತ್ರ ನಡೆಸುವ ಹೋರಾಟವಾಗಿರದೆ ಅದೊಂದು ಸಮೂಹ ಮಿಲಿಟೆಂಟ್ ಹೋರಾಟವಾಗಿ ಪರಿವರ್ತನೆಯಾಯಿತು.

ಶ್ರೀಲಂಕಾ ಸೈನ್ಯದೊಂದಿಗೆ ದಶಕಗಳಷ್ಟು ಸುದೀರ್ಘ ಕಾಲ ಹೋರಾಡಿದ ತಮಿಳು ಹುಲಿಗಳು ತಮಿಳರೇ ಹೆಚ್ಚಾಗಿರುವ ಕಿಲಿನೋಚಿ, ಎಲಿಫಂಟ್ ಪಾಸ್, ಜಾಫ್ನಾ, ಬಟ್ಟಿಕಲೋವ, ಮದಿಕುದಿರಿಯಿರಿಪ್ಪು, ಮಲ್ಲೈತೀವುಗಳಂಥ ಶ್ರೀಲಂಕಾದ ಉತ್ತರ ಮತ್ತು ಪೂರ್ವ ಭಾಗಗಳಿಂದ ಶ್ರೀಲಂಕಾ ಸೈನ್ಯವನ್ನು ಓಡಿಸಿ ಅವುಗಳನ್ನು ತಮ್ಮ ನೆಲೆಗಳನ್ನಾಗಿ ಮಾಡಿಕೊಂಡರು. ಅಲ್ಲಿ ತಮ್ಮದೇ ಆಡಳಿತವನ್ನು ಪ್ರತಿಷ್ಠಾಪಿಸಿದರು. ಅಪಾರ ಪ್ರಮಾಣದಲ್ಲಿ ತ್ಯಾಗ ಬಲಿದಾನ ಮಾಡಿ ಗಳಿಸಿಕೊಂಡ ಈ ನೆಲವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ವಿವಿಧ ದೇಶಗಳ ಸಹಾಯದೊಂದಿಗೆ ತಮ್ಮದೇ ಮಿಲಿಟರಿಯನ್ನು ಕಟ್ಟಿಕೊಂಡರು.

ಎಲ್‌ಟಿಟಿಇ ಪ್ರತ್ಯೇಕ ತಮಿಳು ರಾಷ್ಟ್ರ ಸ್ಥಾಪನೆಗಾಗಿ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡು ಹೋರಾಡುತ್ತಿದೆ ಎಂಬ ಒಂದೇ ಕಾರಣಕ್ಕೆ ಪ್ರಪಂಚದ ಸುಮಾರು 32 ದೇಶಗಳು ಅದನ್ನು 'ಭಯೋತ್ಪಾದಕ ಸಂಘಟನೆ' ಎಂದು ಕರೆದವು.

ಭಾರತದ ಹಸ್ತಕ್ಷೇಪ

ಶ್ರೀಲಂಕಾದಲ್ಲಿ ತಮಿಳರು ಮತ್ತು ಸಿಂಹಳೀಯರ ನಡುವೆ ನಡೆಯುತ್ತಿದ್ದ ಅಂತರ್ಯುದ್ಧದಲ್ಲಿ ಭಾರತ ಹಸ್ತಕ್ಷೇಪ ಮಾಡುತ್ತಲೇ ಬಂದಿದೆ. ಲಂಕಾದಲ್ಲಿ ತಮಿಳರಿಗಾಗಿ ಪ್ರತ್ಯೇಕ ರಾಷ್ಟ್ರವೊಂದು ನಿರ್ಮಾಣವಾಗಬೇಕೆಂಬ ಬೇಡಿಕೆ ಹುಟ್ಟಿಕೊಂಡಾಗ ಭಾರತದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಹಾಗೂ ನಂತರದಲ್ಲಿ ಅವರ ಮಗ ರಾಜೀವ್ ಗಾಂಧಿ ಅದರ ಬೆಂಬಲಕ್ಕೆ ನಿಂತಿದ್ದರು. ಎಲ್‌ಟಿಟಿಇ ಇಷ್ಟೊಂದು ದೊಡ್ಡ ಪ್ರಮಾಣದ ಗೆರಿಲ್ಲಾ ಮಿಲಿಟರಿ

▶▶▶

ಹುಲಿಗಳ ನಾಯಕ ವೇಲುಪಿಳ್ಳೈ ಪ್ರಭಾಕರನ್



ವೇಲುಪಿಳ್ಳೈ ಪ್ರಭಾಕರನ್ ತಮಿಳು ಹುಲಿಗಳ ಅಗ್ರಮಾನ್ಯ ನಾಯಕ; ವಿಶ್ವದ ಅತಿ ಭಯಾನಕ ಗೆರಿಲ್ಲಾ ಪಡೆ ಎನಿಸಿದ ಎಲ್‌ಟಿಟಿಇ ಮಿಲಿಟರಿಯ ಸುಪ್ರೀಮ್ ಕಮ್ಯಾಂಡರ್. ಲಂಕಾದ ಸಿಂಹಳೀಯ ರಾಜಕೀಯ ನಾಯಕರನ್ನು ಹಗಲಿನಲ್ಲೂ ಕಾಡುತ್ತಿರುವ ದುಸ್ವಪ್ನ. ಕಳೆದ ಮೂವತ್ತು ವರ್ಷಗಳಿಂದ ಶ್ರೀಲಂಕಾ ಸೇನೆ ಆತನಿಗಾಗಿ ಕಾಡುಮೇಡುಗಳಲ್ಲಿ ಬೇಟೆಯಾಡುತ್ತಿದ್ದರೂ ಅವರಿಗೆ ಚಳ್ಳೆ ಹಣ್ಣು ತಿನ್ನಿಸುತ್ತಿರುವ ಚಾಣಾಕ್ಷ. ಮೂವತ್ತೆರಡು ದೇಶಗಳಿಂದ ಅತ್ಯಂತ ಭೀಕರ ಭಯೋತ್ಪಾದಕ ಎಂಬ ಹಣೆಪಟ್ಟಿ ಕಟ್ಟಿಸಿಕೊಂಡಿರುವ 'ಉಗ್ರವಾದಿ'.

ಶ್ರೀಲಂಕಾ ದ್ವೀಪದಲ್ಲಿ ತಮಿಳು ಹುಲಿಗಳ ಹೋರಾಟವನ್ನು ಮುನ್ನಡೆಸುತ್ತಿರುವ ಪ್ರಭಾಕರನ್ ಇಲ್ಲಿಯತನಕ ರಣರಂಗವನ್ನು ಬಿಟ್ಟು ಕದಲಿದ್ದು ತೀರಾ ಕಡಿಮೆ. ಈಗ ಶ್ರೀಲಂಕಾ ಸೈನ್ಯ [illegible] ನಿರ್ಣಾಯಕ ಯುದ್ಧದಲ್ಲಿ ಎಲ್‌ಟಿಟಿಇಯ [illegible] ಪ್ರದೇಶಗಳನ್ನು ವಶಪಡಿಸಿಕೊಂಡಿದೆ. ಮೂವತ್ತು ಸಾವಿರದಷ್ಟಿದ್ದ ತಮಿಳು ಹುಲಿಗಳ ಸಂಖ್ಯೆಯನ್ನು ಐದು ಸಾವಿರಕ್ಕೆ ಕುಗ್ಗಿಸಿದೆ. ಸಾವಿರಾರು ಚದರ ಕಿ.ಮೀ. ಇದ್ದ ಅವರ ಭದ್ರನೆಲೆಯನ್ನು ಮುಲ್ಲೈತೀವು ಅರಣ್ಯದ ಕೇವಲ 17 ಚದರ ಕಿ.ಮೀ. ನಷ್ಟಾಗುವಂತೆ ಮಾಡಿದೆ. ಆದರೂ ಪ್ರಭಾಕರನ್ ಲಂಕಾ [illegible] ಕೊಲಿಗಿಲ್ಲ, ಯಾವ ತ್ಯಾಗಕ್ಕಾದರೂ ಸಿದ್ಧವಾಗಿರುವ ತಮಿಳು ಹುಲಿಗಳೊಂದಿಗೆ ನಿರಂತರವಾಗಿ ತನ್ನ ಅಡಗುತಾಣಗಳನ್ನು ಬದಲಿಸುತ್ತಾ ಲಂಕಾ ಸೇನೆಗೆ ಕಬ್ಬಿಣದ ಕಡಲೆಯಾಗಿದ್ದಾನೆ.

ಅವನನ್ನು ಹಿಡಿಯುವುದಕ್ಕಾಗಿ ಲಂಕಾ ಸೇನೆಯೇನಾದರೂ ಅಂತಿಮ ಆಕ್ರಮಣ ಮಾಡಿದರೆ ಪ್ರಾಯಶಃ ಇಡೀ ದಕ್ಷಿಣ ಏಶಿಯಾದ ಚರಿತ್ರೆಯಲ್ಲೇ ಹಿಂದೆಂದೂ ಕೇಳಿಕಂಡರಿಯದ ರಕ್ತಪಾತವಾಗುವುದು ಶತಸ್ಸಿದ್ಧ. ಏಕೆಂದರೆ, ಪ್ರಭಾಕರನ್ ಒಬ್ಬಂಟಿಯಾಗಿಲ್ಲ, ಆತನೊಂದಿಗೆ ಯಾವ ತ್ಯಾಗಕ್ಕೆ ಬೇಕಾದರೂ ಸಿದ್ಧವಾಗಿರುವ ಐದು ಸಾವಿರ ತಮಿಳು ಹುಲಿಗಳಿದ್ದಾರೆ. ಅವರೆಲ್ಲಾ ಬಾಂಬು, ಬಂದೂಕು ಗ್ರೆನೇಡ್‌ಗಳನ್ನು ಹಿಡಿದುಕೊಂಡು ಅವನ ರಕ್ಷಣೆಗೆ ನಿಂತಿದ್ದಾರೆ. ಅವರೆಲ್ಲರೂ ತಮ್ಮ ಕೊನೆಯುಸಿರಿರುವ ತನಕ ಪ್ರಭಾಕರನ್‌ಗಾಗಿ ಹೋರಾಡುತ್ತಾರೆ.

ಒಂದು ವೇಳೆ ಅವರೆಲ್ಲರನ್ನೂ ಲಂಕಾ ಸೇನೆ ಹೊಸಕಿಹಾಕಿದರೂ ಪ್ರಭಾಕರನ್ ಜೀವಂತವಾಗಿ ಸಿಗಲಾರ. ಎಲ್ಲಾ ತಮಿಳು ಹುಲಿಗಳ ಕೊರಳಲ್ಲಿರುವಂತೆ ತನ್ನ ಕೊರಳಿಗೂ ಆತ ಸೈನೆಡ್ ಕಟ್ಟಿಕೊಂಡಿದ್ದಾನೆ. ಲಂಕಾ ಸೇನೆಯೇನಾದರೂ ಆತನನ್ನು ಸುತ್ತುವರೆದು ಇನ್ನೇನು ಬಂಧಿಸಿಯೇ ಬಿಡುತ್ತೆ ಎನ್ನುವ ಪರಿಸ್ಥಿತಿ ನಿರ್ಮಾಣವಾದರೆ ಸೈನೇಡ್ ತಿಂದು ಸಾಯುತ್ತಾನೆ. ಪ್ರಭಾಕರನ್ ಹೆಚ್ಚು ವಿದ್ಯಾಭ್ಯಾಸ ಮಾಡಿರುವ ವ್ಯಕ್ತಿಯೇನಲ್ಲ, ಆತ ಓದಿದ್ದು ಕೇವಲ ಹತ್ತನೇ ತರಗತಿ ಮಾತ್ರ. ಲಂಕಾ ಸರ್ಕಾರ ಶಿಕ್ಷಣದ ಏಕರೂಪಿಕರಣದ ಹೆಸರಿನಲ್ಲಿ ತಮಿಳು ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದಿಂದ ಹೊರಗಿಡುವ ಸಂಚು ನಡೆಸಿದ್ದ ಆ ಕಾಲಘಟ್ಟದಲ್ಲಿ ಇಡೀ ಲಂಕಾದಾದ್ಯಂತ ತಮಿಳು ವಿದ್ಯಾರ್ಥಿಗಳು ಪ್ರತಿಭಟನೆಗಿಳಿದಿದ್ದರು. ಸಹಜವಾಗಿ ಈ ಹೋರಾಟ ಆಗ ಒಬ್ಬ ಸಾಮಾನ್ಯ ವಿದ್ಯಾರ್ಥಿಯಾಗಿದ್ದ ಪ್ರಭಾಕರನ್ ಅವರನ್ನೂ ಆಕರ್ಷಿಸಿತು. ಕೂಡಲೇ ಆತ TIP ಎಂಬ ತಮಿಳು ವಿದ್ಯಾರ್ಥಿ ಸಂಘಟನೆಯನ್ನು ಸೇರಿಕೊಂಡ. ಅಲ್ಲಿಂದಾಚೆಗೆ ಆತ ಮತ್ತೆಂದೂ ಹಿಂತಿರುಗಿ ನೋಡಲಿಲ್ಲ.

ಪ್ರಭಾಕರನ್ ತನ್ನ ಮೊಟ್ಟ ಮೊದಲ ರಾಜಕೀಯ ಕೊಲೆ ಮಾಡಿದ್ದು 1975ರಲ್ಲಿ, ಉತ್ತರ ಶ್ರೀಲಂಕಾದ ಜಾಫ್ನಾದ ಮೇಯರ್ ಆಗಿದ್ದ ಆಲ್ಫ್ರೆಡ್ ದುರಾಯಪ್ಪಯ್ಯ ಎಂಬುವವರು ಪುನ್ನೇಲರಿಯಲ್ಲಿ ದೇವಾಲಯ ಪ್ರವೇಶ ಮಾಡುತ್ತಿದ್ದಾಗ ಅವರನ್ನು ಪಾಯಿಂಟ್ ಬ್ಲಾಂಕ್ ರೇಂಜಿನಲ್ಲಿ ಶೂಟ್ ಮಾಡುವ ಮೂಲಕ ತನ್ನ ಬದುಕಿನ ರಕ್ತಸಿಕ್ತ ಹೋರಾಟಕ್ಕೆ ಮುನ್ನುಡಿ ಬರೆದ.


ಪ್ರಭಾಕರನ್‌ನ ವೈಯಕ್ತಿಕ ಜೀವನದ ಬಗ್ಗೆ ಹೊರ ಜಗತ್ತಿಗೆ ಗೊತ್ತಿರುವುದು ತೀರಾ ಕಡಿಮೆ. ಆತನ ಹೆಂಡತಿಯ ಹೆಸರು ಮಥಿವಥಣಿ ಎರಂಬು. ಅವರಿಬ್ಬರ ಮದುವೆ ನಡೆದದ್ದು 1984ರ ಅಕ್ಟೋಬರ್ 1ರಂದು ಚೆನ್ನೈನಲ್ಲಿ. ಅವರಿಗೆ ದ್ವಾರಕ ಮತ್ತು ಚಾರ್ಲ್ಸ್ ಆಂಟನಿ ಎಂಬ ಇಬ್ಬರು ಮಕ್ಕಳಿದ್ದಾರೆ. ಪ್ರಭಾಕರನ್ ಕ್ರಿಶ್ಚಿಯನ್ನನಲ್ಲ, ಆದರೂ ಮಗನಿಗೆ ಕ್ರಿಶ್ಚಿಯನ್ ಹೆಸರಿಟ್ಟದ್ದೇಕೆ? ಏಕೆಂದರೆ, ಪ್ರಭಾಕರನ್‌ನ ಬಲಗೈಯಾಗಿ ದಶಕಗಳ ಕಾಲ ಹೋರಾಡಿದ ಚಾರ್ಲ್ಸ್ ಲುಕಾಸಾ ಆಂಟೋನಿಯನ್ನು ಲಂಕಾ ಪಡೆಗಳು 1983ರಲ್ಲಿ ಕೊಂದು ಹಾಕಿದ್ದವು. ಪ್ರಭಾಕರನ್ ಆತನ ನೆನಪಿನಲ್ಲಿ ತನ್ನ ಮಗನಿಗೆ ಆತನ ಹೆಸರನ್ನೇ ಇಟ್ಟಿದ್ದಾನೆ. ಈಗ ಪ್ರಭಾಕರನ್‌ನೊಂದಿಗೆ ಆತನ ಮಗ ಚಾರ್ಲ್ಸ್ ಆಂಟನಿಯೂ ರಣರಂಗದಲ್ಲಿ ಎಲ್‌ಟಿಟಿಇ ಪಡೆಗಳನ್ನು ಮುನ್ನಡೆಸುತ್ತಿದ್ದಾನೆ. ಪ್ರಭಾಕರನ್ ಒಂದು ವೇಳೆ ಶ್ರೀಲಂಕಾ ಸೈನ್ಯದೊಂದಿಗಿನ ಯುದ್ಧದಲ್ಲಿ ಮರಣ ಹೊಂದಿದರೆ ತಮಿಳು ಹುಲಿಗಳ ನೂತನ ನಾಯಕನಾಗಿ ಆಂಟನಿಯೇ ರೂಪುಗೊಳ್ಳಲಿದ್ದಾನೆ.

ಪ್ರಭಾಕರನ್‌ನ ಒಂದು ವಿಶೇಷ ಎಂದರೆ ಆತ ಹುಟ್ಟಿದ್ದು ಒಬ್ಬ ಹಿಂದೂವಾಗಿ. ತಮಿಳು ದೇವತೆಯಾದ ಮುರುಗನ್ ಆತನ ಕುಟುಂಬದ ಆರಾಧ್ಯ ದೈವ. ಆದರೆ ಧರ್ಮ ಎಂದೂ ಆತನಿಗೆ ಮುಖ್ಯವಾಗಿಲ್ಲ. ಎಲ್‌ಟಿಟಿಇಯನ್ನೂ ಆತ ಹಾಗೆಯೇ ಧರ್ಮಾತೀತವಾಗಿ ಬೆಳೆಸಿದ್ದಾನೆ. ಎಲ್‌ಟಿಟಿಇ ಹೊರಡಿಸುವ ಕರಪತ್ರದಲ್ಲಾಗಲೀ, ಪತ್ರಿಕಾ ಪ್ರಕಟಣೆಯಲ್ಲಾಗಲೀ, ಪುಸ್ತಕಗಳಲ್ಲಾಗಲೀ ಅಥವಾ ಇನ್ನಿತರ ಯಾವುದೇ ಸಾಹಿತ್ಯದಲ್ಲಾಗಲೀ ಯಾವುದೇ ಧಾರ್ಮಿಕ ಗ್ರಂಥಗಳಿಂದ ಎತ್ತಿಕೊಂಡ ನೀತಿ ವಾಕ್ಯಗಳಿರುವುದಿಲ್ಲ. ಒಂದು ಧರ್ಮದ ಪರವಾಗಿ, ಇನ್ನೊಂದು ಧರ್ಮದ ವಿರುದ್ಧವಾಗಿ ಒಂದು ಶಬ್ದವೂ ಇರುವುದಿಲ್ಲ. ಇರುವುದೆಲ್ಲಾ ತಮಿಳು ರಾಷ್ಟ್ರೀಯವಾದದ ಬಗ್ಗೆ.

ಪ್ರಭಾಕರನ್‌ನ ಇನ್ನೊಂದು ಮೆಚ್ಚತಕ್ಕ ಗುಣ ಎಂದರೆ ಆತನಿಗೆ ಮಹಿಳಾ ಹಕ್ಕುಗಳ ಬಗ್ಗೆ ಇರುವ ವಿಶೇಷ ಗೌರವ. ಶ್ರೀಲಂಕಾದ ತಮಿಳು ಸಮಾಜದಲ್ಲಿ ಮಹಿಳೆಯರನ್ನು ಎಂದಿಗೂ ಸರಿಸಮಾನವಾಗಿ ಕಂಡಿದ್ದಿಲ್ಲ. ಪ್ರತಿಯೊಂದು ವಿಚಾರದಲ್ಲೂ ಅವರು ಪುರುಷನಿಗಿಂತ ಕೆಳಮಟ್ಟದವರು ಎಂಬ ಭಾವನೆಯೇ ಪ್ರಧಾನವಾಗಿತ್ತು. ಆದರೆ, ಪ್ರಭಾಕರನ್ ಅದರ ವಿರುದ್ಧವೂ ಹೋರಾಡಿದ. ತನ್ನ ನಾಯಕತ್ವದಲ್ಲಿರುವ ಎಲ್‌ಟಿಟಿಇಯೊಳಗೆ ಮಹಿಳೆಯರನ್ನೂ ಸೇರಿಸಿಕೊಂಡು ಅವರನ್ನು ಸರಿಸಮಾನವಾಗಿ ಪರಿಗಣಿಸುವ ಪರಂಪರೆಗೆ ನಾಂದಿ ಹಾಡಿದ. ಮಹಿಳೆಯರು ಪುರುಷರಿಗಿಂತ ಸಾಮರ್ಥ್ಯದಲ್ಲಿ ಕಡಿಮೆ ಏನಿಲ್ಲ, ಅವರು ಪುರುಷನಿಗೆ ಸರಿಸಮಾನವಾಗಿ ಹೋರಾಡಬಲ್ಲರು ಎಂಬುದನ್ನು ಆಚರಣೆಯಲ್ಲಿ ತೋರಿಸಿಕೊಟ್ಟ.

ಪರಿಸರ ರಕ್ಷಣೆಯ ಬಗ್ಗೆಯೂ ಪ್ರಭಾಕರನ್‌ಗೆ ಅತೀವ ಕಾಳಜಿ. "ಪ್ರಕೃತಿಯೇ ನನ್ನ ಗೆಳೆಯ, ಬದುಕೇ ನನ್ನ ತತ್ವಜ್ಞಾನಿ ಮತ್ತು ಚರಿತ್ರೆಯೇ ನನ್ನ ಮಾರ್ಗದರ್ಶಿ" ಎಂಬ ಆತನ ಪ್ರಖ್ಯಾತ ಮಾತುಗಳು ಅವನ ದೃಷ್ಟಿಕೋನವನ್ನು ಬಿಚ್ಚಿಡುತ್ತವೆ. ಪರಿಸರವನ್ನು ಕಾಪಾಡುವುದಕ್ಕೆ ಎಲ್‌ಟಿಇಯೊಳಗೆ ಪರಿಸರ ರಕ್ಷಣಾ ಯಂತ್ರಾಂಗವೊಂದನ್ನು ರೂಪಿಸಿದ್ದಾನೆ. ಪರಿಸರ ರಕ್ಷಣೆಗಾಗಿ ಅನೇಕ ನೀತಿ ನಿಯಮಗಳನ್ನು ರೂಪಿಸಿ ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದಾನೆ.






ಒಂದು ಉದಾಹರಣೆಯನ್ನು ಕೊಡಬೇಕೆಂದರೆ, ಪ್ಲಾಸ್ಟಿಕ್ ಹತ್ತು ಸಾವಿರ ವರ್ಷಗಳ ತನಕ ಕೊಳೆಯುವುದಿಲ್ಲವಾದ್ದರಿಂದ ಅದರ ಬಳಕೆ ಪರಿಸರಕ್ಕೆ ಹಾನಿ ಎಂಬುದನ್ನರಿತು ಎಲ್‌ಟಿಟಿಇ ಪ್ರಾಬಲ್ಯವಿರುವ ಅರಣ್ಯದೊಳಗೆ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿದ್ದಾನೆ. ಕೇವಲ 240 ಎಕರೆಯಷ್ಟಿರುವ ಬೆಂಗಳೂರಿನ ಲಾಲ್‌ಬಾಗ್‌ನಲ್ಲೇ ನಮಗೆ ಪ್ಲಾಸ್ಟಿಕ್ ಬಳಕೆ ನಿಷೇಧಿಸಲಾಗಿಲ್ಲ, ಆದರೆ, ಪ್ರಭಾಕರನ್ ಸಾವಿರಾರು ಚದರ ಕಿ.ಮೀ. ವ್ಯಾಪ್ತಿಯ ಬೃಹತ್ ಅರಣ್ಯದೊಳಗೆ ಅದನ್ನು ಜಾರಿಗೆ ತಂದಿದ್ದಾನೆ.

ಕೊನೆಯದಾಗಿ ಹೇಳಬೇಕೆಂದರೆ, ತಾನು ಕಟ್ಟಲು ಬಯಸಿರುವ 'ತಮಿಳು ಈಳಂ' ಹೇಗಿರುತ್ತದೆಂಬುದನ್ನು ಅವನೇ ಖುದ್ದಾಗಿ ಹೇಳಿದ್ದಾನೆ: "ತಮಿಳು ಈಳಂ ಒಂದು ಸಮಾಜವಾದಿ ರಾಷ್ಟ್ರವಾಗಿರುತ್ತದೆ. ಸಮಾಜವಾದಿ ರಾಷ್ಟ್ರ ಎಂದರೆ ಒಂದು ಸಮಾನತಾವಾದಿ ಸಮಾಜ. ಅಲ್ಲಿ ಎಲ್ಲರೂ ಮಾನವ ಸ್ವಾತಂತ್ರ್ಯ ಮತ್ತು ವ್ಯಕ್ತಿಗತ ಸ್ವಾತಂತ್ರ್ಯಗಳನ್ನು ಅನುಭವಿಸುವ ಮುಕ್ತ ಅವಕಾಶವನ್ನು ಕಡ್ಡಾಯವಾಗಿ ಖಾತ್ರಿಪಡಿಸಲಾಗುತ್ತದೆ: ಎಲ್ಲಾ ರೂಪದ ದಮನ ಮತ್ತು ಶೋಷಣೆಗಳನ್ನು ಆಮೂಲಾಗ್ರವಾಗಿ ನಿರ್ಮೂಲನೆ ಮಾಡಲಾಗುತ್ತದೆ. ಅದು ನಮ್ಮ ಜನ ನಮ್ಮ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವುದಕ್ಕೆ, ನಮ್ಮ ಸಂಸ್ಕೃತಿಯನ್ನು ಉತ್ತೇಜಿಸುವುದಕ್ಕೆ ಗರಿಷ್ಠ ಪ್ರಮಾಣದ ಅವಕಾಶಗಳನ್ನೊದಗಿಸುವ ಒಂದು ವ್ಯವಸ್ಥೆಯಾಗಿರುತ್ತದೆ. ತಮಿಳು ಈಳಂ ಯಾರೊಂದಿಗೂ ಮೈತ್ರಿ ಮಾಡಿಕೊಳ್ಳದ ಒಂದು ತಟಸ್ಥ ದೇಶವಾಗಿರುತ್ತದೆ: ಭಾರತದೊಂದಿಗೆ ಸ್ನೇಹಪೂರ್ಣ [illegible]

ಲಂಕೇಶ್

◀◀◀

ಶಕ್ತಿಯಾಗಿ ಬೆಳೆಯುವುದಕ್ಕೆ ಅವರೇ ನೇರವಾಗಿ ಕಾರಣರಾಗಿದ್ದರು ಎಂದರೂ ಆಶ್ಚರ್ಯವಿಲ್ಲ. ಇಂದಿರಾ ಗಾಂಧಿ ಯವರು ಎಲ್‌ಟಿಟಿಇಗೆ ಮಿಲಿಟರಿ ತರಬೇತಿ ಕೊಡುವುದಕ್ಕಾಗಿ ತಮಿಳುನಾಡಿನಲ್ಲಿ ತರಬೇತಿ ಶಿಬಿರಗಳನ್ನೇ ತೆರೆದಿದ್ದರು. ಅಷ್ಟೇ ಅಲ್ಲದೇ, ತಮಿಳು ವಿಮೋಚನಾ ಚಳವಳಿಯನ್ನು ಬೆಂಬಲಿಸಿ ಭಾರತದ ಸೈನ್ಯವನ್ನು ಕಳಿಸುವ ಬೆದರಿಕೆಯನ್ನೂ ಅವರು ಶ್ರೀಲಂಕಾಗೆ ಒಡ್ಡಿದ್ದರು. ಇಂದಿರಾಗಾಂಧಿಯ ಹತ್ಯೆಯೊಂದಿಗೆ ಎಲ್‌ಟಿಟಿಇಗಿದ್ದ ಭಾರತದ ಬೆಂಬಲ ಗಣನೀಯವಾಗಿ ಕಡಿಮೆ ಯಾಯಿತು. ಆದರೆ ಸಂಪೂರ್ಣವಾಗಿ ನಿಲ್ಲಲಿಲ್ಲ.



1986ರ ವೇಳೆಗೆ ಶ್ರೀಲಂಕಾ ಸರ್ಕಾರ ಪಾಕಿಸ್ತಾನ, ಇಸ್ರೇಲ್, ಸಿಂಗಪೂರ್ ಮತ್ತು ದಕ್ಷಿಣ ಆಫ್ರಿಕದ ನೆರವಿನೊಂದಿಗೆ ಎಲ್‌ಟಿಟಿಇ ಮೇಲೆ ಭೀಕರ ದಾಳಿಗೆ ಸಿದ್ಧವಾಯಿತು. ಎಲ್‌ಟಿಟಿಇ ವಶದಲ್ಲಿದ್ದ ಉತ್ತರದ ಜಾಫ್ನಾ ನೆಲೆಯನ್ನು ಕಸಿದುಕೊಳ್ಳಲು 'ಆಪರೇಷನ್ ಲಿಬರೇಶನ್' ಹೆಸರಿನಲ್ಲಿ ಭೀಕರ ಕಾರ್ಯಾಚರಣೆ ಪ್ರಾರಂಭಿಸಿತು. ಇದರಲ್ಲಿ ಸಾವಿರಾರು ಸಂಖ್ಯೆಯ ಅಮಾಯಕ ತಮಿಳರು ಬಲಿಯಾದರು. ಎಲ್‌ಟಿಟಿಇ ಹಿಡಿತದಲ್ಲಿದ್ದ ಪ್ರದೇಶಗಳಿಗೆ ಯಾವುದೇ ಅತ್ಯವಶ್ಯಕ ವಸ್ತುಗಳು ರವಾನೆಯಾಗದಂತೆ ಸಪ್ಲೈ ಮಾರ್ಗಗಳನ್ನು ಬಂದ್ ಮಾಡಿದ್ದರಿಂದ ಕನಿಷ್ಠ ಮೂಲಭೂತ ವಸ್ತುಗಳೂ ಇಲ್ಲದೇ ಜನ ಪರದಾಡುವ ಪರಿಸ್ಥಿತಿ ನಿರ್ಮಾಣವಾಯಿತು.

ಅತ್ತ ಶ್ರೀಲಂಕಾದಲ್ಲಿ ಹೀಗೆ ತಮಿಳರ ಮೇಲೆ ಆಕ್ರಮಣ ಪ್ರಾರಂಭವಾಗುತ್ತಿದ್ದಂತೆಯೇ ಇತ್ತ ತಮಿಳುನಾಡಿನಲ್ಲಿ ಅದರ ವಿರುದ್ಧ ಹೋರಾಟಗಳು ಭುಗಿಲೆದ್ದವು. ಆಗ ರಾಜೀವ್ ಗಾಂಧಿ ನೇತೃತ್ವದ ಕೇಂದ್ರ ಸರ್ಕಾರ ಅನಿವಾರ್ಯವಾಗಿ ಎಲ್‌ಟಿಟಿಇ ಪ್ರದೇಶದಲ್ಲಿರುವ ತಮಿಳರ ರಕ್ಷಣೆಗೆ ಮುಂದಾಯಿತು. ಭಾರತೀಯ ವಾಯುಪಡೆಯ ಸಹಾಯದಿಂದ ಅತೀ ಅವಶ್ಯಕವಾಗಿ ಬೇಕಿದ್ದ ಆಹಾರ ಧಾನ್ಯ ಮತ್ತಿತರ ಪರಿಕರಗಳನ್ನು ಜಾಫ್ನಾ ನೆಲೆಗೆ ಕಳುಹಿಸಿಕೊಟ್ಟಿತು. ಇದಕ್ಕೆ 'ಆಪರೇಷನ್ ಪೂಮಲೈ' ಎಂದು ಹೆಸರಿಡಲಾಗಿತ್ತು. ಶ್ರೀಲಂಕಾವೇನಾದರೂ ಇದಕ್ಕೆ ಅಡ್ಡಿಪಡಿಸಿದರೆ ತಕ್ಕ ಪ್ರತ್ಯುತ್ತರ ಕೊಡಬೇಕಾಗುತ್ತದೆಂದು ಬೆದರಿಸಿ ಎಲ್‌ಟಿಟಿಇ ಮತ್ತು ತಮಿಳರ ಬೆಂಬಲಕ್ಕೆ ರಾಜೀವ್ ನಿಂತಿದ್ದರು.

ಭಾರತದ ಈ ಕ್ರಮವನ್ನು ಶ್ರೀಲಂಕ ಬಲವಾಗಿ ಖಂಡಿಸಿತು. ತನ್ನ ದೇಶದೊಳಗೆ ವಿಮಾನಗಳನ್ನು ಕಳುಹಿಸಿ ಎಲ್‌ಟಿಟಿಇಗೆ ನೆರವು ನೀಡಿದ್ದು ತನ್ನ ಸಾರ್ವಭೌಮತ್ವದ ಮೇಲೆ ಭಾರತ ಮಾಡಿದ ಹಲ್ಲೆ ಎಂದು ಬಣ್ಣಿಸಿತು. ಆದರೆ ಯುದ್ಧದಲ್ಲಿ ನಿರಾಶ್ರಿತರಾಗಿ ಹಸಿವಿನಿಂದ ಬಳಲುತ್ತಿದ್ದ ಜನರಿಗೆ ಸಹಾಯ ಮಾಡಿದ್ದು ತಪ್ಪಲ್ಲ ಎಂದು ಭಾರತ ಅದನ್ನು ಸಮರ್ಥಿಸಿಕೊಂಡಿತ್ತು.



ಭಾರತ ನೇರವಾಗಿ ಎಲ್‌ಟಿಟಿಇ ಪರವಾಗಿ ತನ್ನ ಸೇನೆ ಕಳುಹಿಸಬಹುದೆಂದ ಹೆದರಿದ ಶ್ರೀಲಂಕಾದ ಅಂದಿನ ಅಧ್ಯಕ್ಷ ಜೆ.ಆರ್.ಜಯವರ್ಧನೆ ರಾಜೀವ್ ಗಾಂಧಿಯನ್ನು ಮಾತುಕತೆಗೆ ಆಹ್ವಾನಿಸಿದರು. 1987ರ ಜುಲೈ 29ರಂದು ರಾಜೀವ್ ಗಾಂಧಿ ಮತ್ತು ಜಯವರ್ಧನೆ ಇಂಡೋ-ಶ್ರೀಲಂಕನ್ Indo-Sri-Lankan accord ಎಂಬ ಒಪ್ಪಂದಕ್ಕೆ ಸಹಿ ಹಾಕಿದರು. ವಾಸ್ತವದಲ್ಲಿ ಈ ಒಪ್ಪಂದ ಶ್ರೀಲಂಕಾದಲ್ಲಿ ತಾತ್ಕಾಲಿಕ ಶಾಂತಿಯನ್ನೇನೋ ಸ್ಥಾಪಿಸಿತು. ಆದರೆ, ಅದೇ ಮುಂದೆ ದೊಡ್ಡ ಅಶಾಂತಿಗೂ ಕಾರಣವಾಯಿತು. ಏಕೆಂದರೆ, ಶ್ರೀಲಂಕಾದಲ್ಲಿ ಶಾಂತಿ ಸ್ಥಾಪಿಸುವ ದೃಷ್ಟಿಯಿಂದ ಭಾರತವು ಭಾರತೀಯ ಶಾಂತಿಪಾಲನಾ ಪಡೆ (Indian Peace Keeping Force – IPKF) ಕಳಿಸಿಕೊಡಬೇಕೆಂಬುದು ಈ ಒಪ್ಪಂದದ ಭಾಗವಾಗಿತ್ತು, ಅಂದರೆ, ಒಂದು ಹಂತದಲ್ಲಿ ತಮಿಳರ ಮತ್ತು ಎಲ್‌ಟಿಟಿಇ ರಕ್ಷಣೆಗೆ ಮುಂದಾಗಿದ್ದ ರಾಜೀವ್ ಈಗ ಅವರನ್ನು ಬಗ್ಗು ಬಡಿಯುವುದಕ್ಕೆ ಹೊರಟರು. ಭಾರತೀಯ ಸೇನೆಯ ಸುಮಾರು 20,000 ಯೋಧರು ಶ್ರೀಲಂಕಾದ ಕಾಡು ಗಳಲ್ಲಿ ಎಲ್‌ಟಿಟಿಇ ಹುಲಿಗಳನ್ನು ಬೇಟೆಯಾಡಲಾರಂಭಿಸಿದರು.

ಶ್ರೀಲಂಕಾದಲ್ಲಿ ಶಾಂತಿ ಸ್ಥಾಪಿಸುವ ನೆಪದಲ್ಲಿ ಶಾಂತಿಪಾಲನಾ ಪಡೆ ಲಂಕಾದ ತಮಿಳರ ಮೇಲೆ, ಎಲ್‌ಟಿಟಿಇ ಮೇಲೆ ಭಾರಿ ಪ್ರಮಾಣದ ಮಿಲಿಟರಿ ಕಾರ್ಯಾಚರಣೆಗಳನ್ನು ಮಾಡಿ ಸಾವಿರಾರು ಜನರನ್ನು ಕೊಂದು ಹಾಕಿತು. ಎಲ್‌ಟಿಟಿಇ ವಶದಲ್ಲಿದ್ದ ಜಾಫ್ನಾವನ್ನು ಕಿತ್ತುಕೊಂಡು ಅಲ್ಲಿ ಲಂಕಾ ಸೈನ್ಯದ ನಿಯಂತ್ರಣವನ್ನು ಪ್ರತಿಷ್ಠಾಪಿಸುವುದಕ್ಕೆ ಈ ಪಡೆ ಹರಿಬಿಟ್ಟ ದಮನ ಅಷ್ಟಿಷ್ಟಲ್ಲ. ಆದರೆ ಎಲ್‌ಟಿಟಿಇ ಒಡ್ಡಿದ ಪ್ರಬಲ ಮಿಲಿಟರಿ ಪ್ರತಿರೋಧದಿಂದಾಗಿ ಅದಕ್ಕೆ ಯಶಸ್ಸು ಸಿಗಲಿಲ್ಲ. ಅದೇ ಹೊತ್ತಿನಲ್ಲಿ, ಭಾರತದ ಸೈನ್ಯ ಶ್ರೀಲಂಕಾದ ತಮಿಳರ ಮೇಲೆ ನಡೆಸುತ್ತಿದ್ದ ಬರ್ಬರ ದಮನವನ್ನು ವಿರೋಧಿಸಿ ದೇಶದಾದ್ಯಂತ, ಅದರಲ್ಲೂ ವಿಶೇಷವಾಗಿ ತಮಿಳುನಾಡಿನಲ್ಲಿ, ಭಾರಿ ಪ್ರತಿಭಟನೆಗಳು ಭುಗಿಲೆದ್ದವು. ಕೊನೆಗೆ ಅನಿವಾರ್ಯವಾಗಿ ಭಾರತ ಸರ್ಕಾರವು ತನ್ನ ಶಾಂತಿ ಪಾಲನಾ ಪಡೆಯನ್ನು ವಾಪಸ್ಸು ಕರೆಸಿಕೊಳ್ಳಬೇಕಾಯಿತು.

ಶ್ರೀಲಂಕಾಕ್ಕೆ ಭಾರತದ ಸೈನ್ಯ ಕಳುಹಿಸಿ ಶ್ರೀಲಂಕಾದ ತಮಿಳರ ಮಾರಣಹೋಮಕ್ಕೆ ನೇರವಾಗಿ ಕಾರಣಕರ್ತರಾದ ಭಾರತದ ಅಂದಿನ ಪ್ರಧಾನಿ ರಾಜೀವ್ ಗಾಂಧಿಯ ಮೇಲೆ ಸೇಡು ತೀರಿಸಿಕೊಳ್ಳಲು ಎಲ್‌ಟಿಟಿಇ ನಿರ್ಧರಿಸಿತು. ರಾಜೀವ್ ಗಾಂಧಿಯವರು ಚುನಾವಣಾ ಪ್ರಚಾರಕ್ಕೆಂದು 1991ರಲ್ಲಿ ತಮಿಳುನಾಡಿನ ಶ್ರೀಪೆರಂಬದೂರಿಗೆ ಬಂದಾಗ ಎಲ್‌ಟಿಟಿಇಯ ಆತ್ಮಹತ್ಯಾದಳವು ಅವರನ್ನು ಬಾಂಬ್ ಹಾಕಿ ಹತ್ಯೆ ಮಾಡಿತು.

ಅಂತರ್ಯುದ್ಧ ನಿಲ್ಲಲಿಲ್ಲ!

ಭಾರತೀಯ ಶಾಂತಿಪಾಲನಾ ಪಡೆ ಶ್ರೀಲಂಕಾದಿಂದ ಕಾಲ್ತೆಗೆದಿತ್ತಾದರೂ ಶ್ರೀಲಂಕಾ ಸೈನ್ಯ ಎಲ್‌ಟಿಟಿಇ ನೆಲೆಗಳ ಮೇಲಿನ ತನ್ನ ದಾಳಿಯನ್ನು ಮುಂದುವರೆಸಿತು. 1995 ಮತ್ತು 1996ರಲ್ಲಿ ಭಾರಿ ಸರಣಿ ದಾಳಿಗಳನ್ನು ವ್ಯವಸ್ಥಿತವಾಗಿ ಸಂಘಟಿಸುವ ಮೂಲಕ ಎಲ್‌ಟಿಟಿಇ ವಶದಲ್ಲಿದ್ದ ಉತ್ತರದ ಭದ್ರನೆಲೆ ಜಾಫ್ನಾವನ್ನು ವಶಪಡಿಸಿಕೊಂಡಿತು. ಅಲ್ಲದೇ ತಮಿಳು ಬಂಡುಕೋರರ ಕೈಯಲ್ಲಿದ್ದ ಕಿಲಿನೊಚ್ಚಿ ಎಂಬ ನಗರವೂ ಶ್ರೀಲಂಕಾದ ಪಡೆಗಳ ಪಾಲಾಯಿತು. ಈ ಸಂದರ್ಭದಲ್ಲಿ, ಅಂದರೆ 1996ರಲ್ಲಿ ಎಲ್‌ಟಿಟಿಇ ಶ್ರೀಲಂಕಾ ಸರ್ಕಾರದೊಂದಿಗೆ 'ಶಾಂತಿ ಮಾತುಕತೆ' ನಡೆಸುವ ಪ್ರಸ್ತಾಪವನ್ನು ಮುಂದಿಟ್ಟಿತಾದರೂ ಶ್ರೀಲಂಕಾ ಸರ್ಕಾರ ಅದನ್ನು ತಿರಸ್ಕರಿಸಿತು.

ನಂತರದ ದಿನಗಳಲ್ಲಿ ತಮಿಳು ಹುಲಿಗಳಿಗೆ ಬಹಳಷ್ಟು ನಷ್ಟವುಂಟಾಗಿ ವನ್ನಿಗಳಂತಹ ನೆಲೆಗಳ ಬಹುತೇಕ ಪ್ರದೇಶಗಳ ಮೇಲಿನ ನಿಯಂತ್ರಣ ಕಳೆದುಕೊಳ್ಳಬೇಕಾಯಿತು. ಆದರೆ ಇವೆಲ್ಲ ಎಲ್‌ಟಿಟಿಇಗೆ ತಾತ್ಕಾಲಿಕ ಹಿನ್ನಡೆಗಳಾಗಿದ್ದವು. 1998ರಿಂದ ಮೊದಲುಗೊಂಡು ಕಳೆದುಕೊಂಡ ಎಲ್ಲಾ ಪ್ರದೇಶಗಳನ್ನು ವಾಪಸ್ಸು ಪಡೆಯಿತು.

2001 ರಲ್ಲಿ ಎಲ್‌ಟಿಟಿಇ ಮತ್ತು ಶ್ರೀಲಂಕಾ ಸರ್ಕಾರದ ನಡುವೆ ಮಾತುಕತೆ ನಡೆಸುವುದಕ್ಕಾಗಿ ನಾರ್ವೆ ಸರ್ಕಾರವನ್ನು ಆಹ್ವಾನಿಸಲಾಯಿತು. ಚರ್ಚೆಯ ಫಲಿತಾಂಶವಾಗಿ ಎರಡೂ ಕಡೆಯಿಂದ ಅಂತರ್ಯುದ್ಧವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕೆಂಬ 'ಕದನ ವಿರಾಮ'ದ ಒಪ್ಪಂದಕ್ಕೆ ಬರಲಾಯಿತು. ನಾರ್ವೆ ಮತ್ತು ನಾರ್ಡಿಕ್ ದೇಶಗಳು ಜಂಟಿಯಾಗಿ ಕದನ ವಿರಾಮವನ್ನು ಪರಿವೀಕ್ಷಿಸಬೇಕೆಂದು ತೀರ್ಮಾನವೂ ಆಯಿತು. ಆದರೆ, ಎಲ್‌ಟಿಟಿಇ ಮತ್ತು ಶ್ರೀಲಂಕಾ ಸರ್ಕಾರಗಳೆರಡೂ ಈ ಕದನ ವಿರಾಮವನ್ನು ಉಲ್ಲಂಘಿಸುವಂತಹ ಚಟುವಟಿಕೆಗಳನ್ನು ಮುಂದುವರಿಸಿಯೇ ಇದ್ದವು.

ರಾಜಪಕ್ಸೆಯ ರಕ್ತದಾಹ!


ಶ್ರೀಲಂಕಾದಲ್ಲಿ ಇಂದು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ತಮಿಳರ ಮಾರಣಹೋಮ ನಡೆಯುತ್ತಿದೆಯೆಂದರೆ ಅದಕ್ಕೆ ನೇರವಾಗಿ ಅಧ್ಯಕ್ಷ ರಾಜಪಕ್ಸೆಯೇ ಕಾರಣ. ಶ್ರೀಲಂಕಾದ ಮಾಜಿ ಅಧ್ಯಕ್ಷೆ ಚಂದ್ರಿಕಾ ಕುಮಾರತುಂಗರವರು 2004ರಲ್ಲಿ ಅಂದಿನ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರ ಸರ್ಕಾರ ಎಲ್‌ಟಿಟಿಇ ಕಡೆಗೆ ಮೃದು ಸ್ವಭಾವ ತೋರುತ್ತಿದೆ ಎಂದು ಆಪಾದಿಸಿ ಸರ್ಕಾರವನ್ನು ವಜಾ ಮಾಡಿದ್ದರು. ನಂತರ 2005ರ ನವೆಂಬರ್‌ನಲ್ಲಿ ಅಧ್ಯಕ್ಷ ಪಟ್ಟಕ್ಕೆ ಬಂದ ಮಹಿಂದ ರಾಜಪಕ್ಸೆ ಎಲ್‌ಟಿಟಿಇ ವಿರುದ್ಧ ಹಿಂದೆಂದೂ ಇರದಷ್ಟು ಕಠೋರ ನಿಲುವು ತಾಳಿದರು. ಪ್ರಧಾನಿ ರತ್ನಸಿರಿ ವಿಕ್ರನಾಯಕೆ ಕೂಡ ಅವರನ್ನೇ ಹಿಂಬಾಲಿಸಿದರು. 2006 ಫೆಬ್ರವರಿಯಲ್ಲಿ ಮಾತುಕತೆಗಳು ಪುನರಾರಂಭವಾದರೂ ಮುಂದುವರೆಯಲಿಲ್ಲ. ಇದರಿಂದಾಗಿ "ಸ್ವತಂತ್ರ ತಮಿಳು ರಾಷ್ಟ್ರ" ಸ್ಥಾಪನೆಗೆ ಅಂತಿಮ ಸಶಸ್ತ್ರ ಯುದ್ಧವೇ ದಾರಿ ಎಂದು ಎಲ್‌ಟಿಟಿಇ ಮತ್ತೊಮ್ಮೆ ಘೋಷಿಸಿತು.

ಈಗ ನಾವು ನೋಡುತ್ತಿರುವುದು ಆ ಹೋರಾಟದ ಮುಂದುವರಿದ ಭಾಗ. ಪ್ರಾಯಶಃ ಕೊನೆಯ ಭಾಗ. ಇದೇ ಕಳೆದ ಜನವರಿಯಲ್ಲಿ ಪ್ರಾರಂಭವಾದ ಅಂತಿಮ ಹಂತದ ಈ ನಿರ್ಣಾಯಕ ಯುದ್ಧದಲ್ಲಿ ಲಂಕಾ ಸೇನೆ ಮೇಲುಗೈ ಪಡೆದಿದೆ. ಕೇವಲ ನಾಲ್ಕು ತಿಂಗಳ ಅವಧಿಯಲ್ಲಿ ತಮಿಳು ಹುಲಿಗಳ ಭದ್ರಕೋಟೆಗಳಂತಿದ್ದ ಎಲ್ಲ ಪ್ರದೇಶಗಳೂ ಲಂಕಾ ಸೇನೆಯ ವಶವಾಗಿಬಿಟ್ಟಿವೆ. ಈಗ ಅಂಗೈಯಷ್ಟು ಅಗಲದ ಮಲ್ಲೈತೀವು ಅರಣ್ಯ ಪ್ರದೇಶದಲ್ಲಿ ಐದು ಸಾವಿರದಷ್ಟು ತಮಿಳು ಹುಲಿಗಳು, ಅವರ ಪರಮೋಚ್ಚ ನಾಯಕ ಪ್ರಭಾಕರನ್ ಅಡಗಿದ್ದಾರೆ. ಅವರನ್ನು ಲಂಕಾ ಸೇನೆ ಸುತ್ತುವರೆದಿದೆ. ತಮಿಳು ಹುಲಿಗಳನ್ನು ಹೊಸಕಿಹಾಕಲು ಸೇನೆ ನಡೆಸುವ ಅಂತಿಮ ದಾಳಿಗೆ ಸಿದ್ಧವಾಗಿ ಕುಳಿತಿದ್ದಾರೆ. ಅವರೊಂದಿಗೆ ಸುಮಾರು ಒಂದು ಲಕ್ಷದಷ್ಟು ಜನರೂ ಇದ್ದಾರೆ.

ಲಂಕಾ ಸೇನೆ ತಮಿಳು ಹುಲಿಗಳನ್ನು ಮತ್ತು ಅದರ ಪರಮೋಚ್ಚ ನಾಯಕ ಪ್ರಭಾಕರನ್ ಅವರನ್ನು ಹೊಸಕಿ ಹಾಕುವುದಕ್ಕಾಗಿ ಅಂತಿಮ ಹಾಗೂ ನಿರ್ಣಾಯಕ ದಾಳಿಯನ್ನೇನಾದರೂ ಮಾಡಿದರೆ ನಡೆಯಬಹುದಾದ ರಕ್ತಪಾತ ಊಹೆಗೂ ನಿಲುಕದಷ್ಟಾಗಿರುವುದರಲ್ಲಿ ಯಾವುದೇ ಅನುಮಾನವಿಲ್ಲ. ಪ್ರಾಯಶಃ ಶ್ರೀಲಂಕಾದ ಚರಿತ್ರೆಯಲ್ಲಿ ಮಾತ್ರವಲ್ಲ, ಇಡೀ ದಕ್ಷಿಣ ಏಶಿಯಾದ ಚರಿತ್ರೆಯಲ್ಲೇ ಕೇಳಿಕಂಡರಿಯದಷ್ಟು ರಕ್ತಪಾತವಾಗುವುದು ಗ್ಯಾರಂಟಿ. ಏಕೆಂದರೆ, ಐದು ಸಾವಿರ ತಮಿಳು ಹುಲಿಗಳನ್ನು ಕೊಂದ ನಂತರವಷ್ಟೇ ಪ್ರಭಾಕರನ್ ಎಂಬ ನಾಯಕ ಹುಲಿಯನ್ನು ಕೊಲ್ಲಲು ಸಾಧ್ಯ.

ಇಂದಲ್ಲ ನಾಳೆ ತಮಿಳು ಹುಲಿಗಳನ್ನು ಲಂಕಾ ಸೇನೆ ಸಂಪೂರ್ಣವಾಗಿ ನಾಶಮಾಡಿಬಿಡಬಹುದು. ಆದರೆ, ಲಂಕಾದ ತಮಿಳರಲ್ಲಿರುವ ಸ್ವತಂತ್ರ ದೇಶದ ಆಕಾಂಕ್ಷೆಯನ್ನು ಬಹಳ ವರ್ಷಗಳ ಕಾಲ ಅದುಮಿಡಲು ಸಾಧ್ಯವಿಲ್ಲ. ಮುಂದೊಂದು ದಿನ ಮತ್ತೆ ಅದು ಭುಗಿಲೇಳಬಹುದು. ಎಲ್ಲಿಯತನಕ ಶ್ರೀಲಂಕ ಎಂಬ ಆ ಪುಟ್ಟ ರಾಷ್ಟ್ರದಲ್ಲಿ ತಮಿಳರ ಸ್ವತಂತ್ರ ಮತ್ತು ಸಾರ್ವಭೌಮ ದೇಶವೊಂದು ಅಸ್ತಿತ್ವಕ್ಕೆ ಬರುವುದಿಲ್ಲವೋ ಅಲ್ಲಿಯತನಕ ಈ ರಕ್ತಸಿಕ್ತ ಅಂತರ್ಯುದ್ಧಕ್ಕೆ ಕೊನೆಯೆಂಬುದಿರುವುದಿಲ್ಲ. ■

ಸ್ನೇಹಿತನನ್ನೇ ಕೊಂದ ರಾಜಪಕ್ಸೆ!




ಶ್ರೀಲಂಕಾದ ಅಧ್ಯಕ್ಷ ಮಹಿಂದ ರಾಜಪಕ್ಸೆ ಅದೆಷ್ಟು ರಕ್ತದಾಹಿಯಾಗಿದ್ದಾರೆ ಎಂಬುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲವೇನೋ?

ಈ ಚಿತ್ರದಲ್ಲಿರುವವರ ಹೆಸರು ಲಸಂತ ಮನಿಲ ವಿಕ್ರಮಸಿಂಘೆ. ಶ್ರೀಲಂಕಾದ The Sunday Leader ಎಂಬ ಪತ್ರಿಕೆಯ ಮುಖ್ಯ ಸಂಪಾದಕರಾಗಿದ್ದರು. ಯಾವುದೇ ಅಂಜಿಕೆ, ಅಳುಕು ಇಲ್ಲದೇ ಸದಾ ನ್ಯಾಯಕ್ಕಾಗಿ ಹೋರಾಡುತ್ತಿದ್ದ, ಸತ್ಯದ ಪರವಾಗಿ ದನಿ ಎತ್ತುತ್ತಿದ್ದ ಜೀವ ಅದು. ಪ್ರಭುತ್ವದ ಎಷ್ಟೇ ಪ್ರತಿರೋಧವಿದ್ದರೂ, ತಮ್ಮ ಜೀವಕ್ಕೆ ಎಂಥ ಬೆದರಿಕೆಯಿದ್ದರೂ ಸರ್ಕಾರ, ಮಿಲಿಟರಿ ಸಾಮಾನ್ಯ ಜನರ ಮೇಲೆ ನಡೆಸುತ್ತಿದ್ದ ದೌರ್ಜನ್ಯಗಳನ್ನು ಬಿಡಿಬಿಡಿಯಾಗಿ ಬರೆದು ಸರ್ಕಾರದ ಫ್ಯಾಸಿಸ್ಟ್ ಮುಖವನ್ನು ಲಂಕಾದ ಜನರಿಗೆ ಪರಿಚಯಿಸುತ್ತಿದ್ದರು.

ಲಸಂತ ತಮಿಳರಲ್ಲ, ಪಕ್ಕಾ ಸಿಂಹಳೀಯರು. ಆದರೆ ಅವರೆಂದೂ ಜನಾಂಗೀಯ ತಾರತಮ್ಯ ಮಾಡಲಿಲ್ಲ. ಬದಲಿಗೆ, ಸಿಂಹಳೀಯರು, ಸಿಂಹಳೀಯ ಸರ್ಕಾರ ತಮಿಳರಿಗೆ ಮಾಡುತ್ತಿದ್ದ ಜನಾಂಗೀಯ ತಾರತಮ್ಯವನ್ನು ಅಂಕಿಅಂಶಗಳ ಸಮೇತವಾಗಿ ಬಯಲಿಗೆಳೆದು ಬರೆಯುತ್ತಿದ್ದರು. ಶ್ರೀಲಂಕಾ ಸೇನೆ ತಮಿಳರ ಮೇಲೆ ನಡೆಸುತ್ತಿದ್ದ ಮಾರಣಹೋಮಗಳ ವರದಿಯನ್ನು ಯಾವುದೇ ಕತ್ತರಿ ಪ್ರಯೋಗವಿಲ್ಲದೇ ಪ್ರಕಟಿಸಿ ಲಂಕಾ ಸೈನ್ಯದ ರಕ್ತದಾಹವನ್ನು ಅಂತಾರಾಷ್ಟ್ರೀಯ ಸಮುದಾಯದೆದುರು ಬಿಚ್ಚಿಡುತ್ತಿದ್ದರು. ಇದಕ್ಕಾಗಿ ಹಲವು ಬಾರಿ ಅವರಿಗೆ ಪ್ರಾಣಬೆದರಿಕೆಗಳೂ ಬಂದಿದ್ದುಂಟು.

ಶ್ರೀಲಂಕಾದ ಅಧ್ಯಕ್ಷ ಮಹಿಂದ ರಾಜಪಕ್ಸೆ ಎಲ್‌ಟಿಟಿಇ ವಿರುದ್ಧ ಅಂತಿಮ ಮತ್ತು ನಿರ್ಣಾಯಕ ಯುದ್ಧಕ್ಕಾಗಿ ತಯಾರಾಗುತ್ತಿದ್ದರು. ಅದಕ್ಕಾಗಿ ಸೈನ್ಯವನ್ನು ಆಧುನೀಕರಿಸಿದ್ದರು. ವಿಶೇಷವಾಗಿ ಬಜೆಟ್‌ನಲ್ಲಿ ಬೃಹತ್ ಮೊತ್ತದ ಹಣವನ್ನು ಶಸ್ತ್ರಾಸ್ತ್ರ ಖರೀದಿಸುವುದಕ್ಕಾಗಿಯೇ ಎತ್ತಿಟ್ಟಿದ್ದರು. ಅಂತಾರಾಷ್ಟ್ರೀಯವಾಗಿ ಯಾವುದೇ ದೇಶ ಎಲ್‌ಟಿಟಿಇಯ ಪರವಾಗಿ ಮಾತನಾಡದಂತೆ ಮನವೊಲಿಸಿದ್ದರು. ಹೆಚ್ಚೂ ಕಡಿಮೆ ಎಲ್ಲಾ ಸಿದ್ಧತೆಗಳೂ ಪೂರ್ಣಗೊಂಡಿದ್ದವು. ಆದರೆ, ಒಂದು ಬಾಕಿಯಿತ್ತು, ಅದೆಂದರೆ, The Sunday Leader ಪತ್ರಿಕೆಯ ಮುಖ್ಯ ಸಂಪಾದಕ ಲಸಂತ ಮನಿಲ ವಿಕ್ರಮಸಿಂಘೆಯ ಹತ್ಯೆ!


ರಾಜಪಕ್ಸೆ

ಎಲ್‌ಟಿಟಿಇ ಮೇಲೆ ರಾಜಪಕ್ಸೆಯ ಅಂತಿಮ ಯುದ್ಧ ಎಂದರೆ ಲಕ್ಷಾಂತರ ತಮಿಳರ ಮಾರಣಹೋಮ ಎಂದು ಮತ್ತೊಮ್ಮೆ ವಿವರಿಸಿ ಹೇಳುವ ಅವಶ್ಯಕತೆಯಿಲ್ಲ. ತಮಿಳರ ಮೇಲಿನ ಸೇನಾ ದೌರ್ಜನ್ಯಗಳನ್ನು, ತಮಿಳರ ಮೇಲಿನ ಸಿಂಹಳೀಯರ ತಾರತಮ್ಯಗಳನ್ನು ಖಂಡತುಂಡವಾಗಿ ಖಂಡಿಸುತ್ತಾ ಲಸಂತ ವಿಕ್ರಮಸಿಂಘೆ ಕೇವಲ ತಮಿಳರ ಸಿಂಪಥಿ ಮಾತ್ರ ಪಡೆದಿರಲಿಲ್ಲ. ಸತ್ಯ, ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವಗಳಂಥ ಉದಾತ್ತ ಮೌಲ್ಯಗಳನ್ನು ಗೌರವಿಸುವ ಸಾಮಾನ್ಯ ಸಿಂಹಳೀಯ ಜನರನ್ನೂ, ಬುದ್ಧಿಜೀವಿಗಳನ್ನೂ ತಮ್ಮೆಡೆಗೆ ಸೆಳೆದುಕೊಂಡಿದ್ದರು. ಇಂಥ ವ್ಯಕ್ತಿಯೇನಾದರೂ 'ಎಲ್‌ಟಿಟಿಇ ವಿರುದ್ಧ ಲಂಕಾ ಸೇನೆಯ ಅಂತಿಮ ಯುದ್ಧ' ನಡೆಯುವಾಗ ಬದುಕಿದ್ದರೆ ಸೇನೆ ತಮಿಳರ ಮೇಲೆ ನಡೆಸುವ ಅತ್ಯಾಚಾರಗಳು ಹೊರಜಗತ್ತಿಗೆ ಗೊತ್ತಾಗುತ್ತಿದ್ದವು. ಸಿಂಹಳೀಯರಲ್ಲೇ ಪ್ರಜಾತಂತ್ರಪ್ರೇಮಿ ಸಾಮಾನ್ಯ ಸಿಂಹಳೀಯರೂ ರಾಜಪಕ್ಸೆಯ ವಿರುದ್ಧ ತಿರುಗಿಬೀಳುತ್ತಿದ್ದರು. ಆದ್ದರಿಂದಲೇ ಅಂಥ ವ್ಯಕ್ತಿಯನ್ನು ಈ 'ಅಂತಿಮ ಯುದ್ಧ' ನಡೆಯುವ ಮೊದಲೇ ಮುಗಿಸಿಹಾಕುವುದು ರಾಜಪಕ್ಸೆಯ ಯುದ್ಧ ಸಿದ್ಧತೆಯ ಒಂದು ಅವಿಭಾಜ್ಯ ಅಂಗವಾಗಿತ್ತು. ಅದರಂತೆ ಇದೇ 2009ರ ಜನವರಿ 8ರಂದು ಲಸಂತ ವಿಕ್ರಮಸಿಂಘೆ ಎಂದಿನಂತೆ ತಮ್ಮ ಆಫೀಸಿಗೆ ಹೋಗುತ್ತಿದ್ದಾಗ ರಾಜಪಕ್ಸೆಯ ಗೂಂಡಾಗಳೇ ಅವರನ್ನು ಗುಂಡಿಕ್ಕಿ ಕೊಂದು ಹಾಕಿದರು.

ಲಸಂತ ವಿಕ್ರಮಸಿಂಘೆಗೆ ಪ್ರಾಣ ಬೆದರಿಕೆಗಳು ಬಂದಾಗ "ಸುಮ್ಮನೇ ಹೆದರಿಸುವುದಕ್ಕೆ ಹೀಗೆ ಮಾಡುತ್ತಿದ್ದಾರೆ" ಎಂದು ಅವರೆಂದೂ ಅಂದುಕೊಂಡಿರಲಿಲ್ಲ. ಅವು ನಿಜವಾದ ಬೆದರಿಕೆಗಳು ಎಂಬುದು ಅವರಿಗೆ ಗೊತ್ತಿತ್ತು. ಏಕೆಂದರೆ, ಅಷ್ಟು ಹೊತ್ತಿಗಾಗಲೇ ನ್ಯಾಯ, ಸತ್ಯ, ಪ್ರಜಾತಂತ್ರಗಳ ಪರವಾಗಿ ತಮ್ಮ ಲೇಖನಿಗಳನ್ನು ಬಳಸಿ ಬರೆದ ಹತ್ತಾರು ಪತ್ರಕರ್ತರನ್ನು ಇದೇ ರಾಜಪಕ್ಸೆ ಕೊಂದು ಹಾಕಿದ್ದರು. ಆದ್ದರಿಂದ ತಾನೇ ಮುಂದಿನ ಬಲಿ ಎಂಬುದು ಲಸಂತ ವಿಕ್ರಮಸಿಂಘೆಗೆ ಚೆನ್ನಾಗಿ ಗೊತ್ತಿತ್ತು. ಆದರೂ ಬದುಕಿರುವ ತನಕವಾದರೂ ತಮ್ಮ ಧ್ಯೇಯಗಳಿಗಾಗಿ ಹೋರಾಡಿದರು.

ಇನ್ನು ಸರ್ಕಾರ ತನ್ನನ್ನು ಸಹಿಸಿಕೊಳ್ಳುವುದು ಸಾಧ್ಯವಿಲ್ಲ ಎಂಬುದು ಅವರಿಗೆ ಮನವರಿಕೆಯಾದಾಗ ತನ್ನ ಸಾವು ಹತ್ತಿರವಿದೆ ಎಂಬುದು ಅವರಿಗೆ ಮನದಟ್ಟಾಯಿತು. ಆದ್ದರಿಂದಲೇ ಅವರು ತಮ್ಮ ಸಾವಿನ ನಂತರ ಪ್ರಕಟಗೊಳ್ಳಬೇಕಾದ ಸಂಪಾದಕೀಯವನ್ನೂ ಮೊದಲೇ ಬರೆದಿದ್ದರು! "ನಂತರ ಅವರು ನನ್ನನ್ನೇ ಹುಡುಕಿಕೊಂಡು ಬಂದರು" ಎಂಬ ಮಾರ್ಟಿನ್ ನೆಮ್ಯೊಲರ್ ಅವರ ಕವಿತೆಯ ಸಾಲುಗಳನ್ನೇ ಅದಕ್ಕೆ ಶೀರ್ಷಿಕೆಯಾಗಿ ಕೊಟ್ಟಿದ್ದರು. ಅದರಲ್ಲಿ ಇಡೀ ಶ್ರೀಲಂಕಾ ಸರ್ಕಾರದ ರಕ್ತಪಿಪಾಸುತನವನ್ನು, ರಾಜಪಕ್ಸೆ ಪ್ರಜಾತಂತ್ರದ ಮೇಲೆ ಮಾಡುತ್ತಿರುವ ಅತ್ಯಾಚಾರವನ್ನು ಮನಮುಟ್ಟುವಂತೆ ಬರೆದಿದ್ದರು. ಲಸಂತ ವಿಕ್ರಮಸಿಂಘೆಯ ಹತ್ಯೆಯ ನಂತರ ಅವರ ಈ ಸಂಪಾದಕೀಯವನ್ನು The Sunday Leaderನಲ್ಲಿ ಪ್ರಕಟಿಸಲಾಯಿತು. ಆ ಮೂಲಕ ಲಸಂತ ವಿಕ್ರಮಸಿಂಘೆ ಸತ್ತುಹೋದರೂ ಅವರು ಬಿತ್ತಿದ ಆಶಯಗಳು ಸತ್ತಿಲ್ಲ, ಅವು ಮೊಳಕೆಯೊಡೆದು ಬೆಳೆಯುತ್ತಿವೆ ಎಂಬುದನ್ನು ಆ ಪತ್ರಿಕೆ ತೋರಿಸಿಕೊಟ್ಟಿತು.

ಒಂದು ವಿಚಾರವನ್ನಿಲ್ಲಿ ಹೇಳಲೇಬೇಕು. ಲಸಂತ ವಿಕ್ರಮಸಿಂಘೆ ಬೇರಾರೂ ಅಲ್ಲ, ಶ್ರೀಲಂಕಾದ ಅಧ್ಯಕ್ಷ ಮಹಿಂದ ರಾಜಪಕ್ಸೆಯ ಬಹುಕಾಲದ ಆತ್ಮೀಯ ಸ್ನೇಹಿತರಾಗಿದ್ದರು!

ಲಸಂತ ವಿಕ್ರಮಸಿಂಘೆ ಅವರು ಬರೆದಿದ್ದ 'ಮರಣೋತ್ತರ ಸಂಪಾದಕೀಯ'ದ ಕೆಲವು ಸಾಲುಗಳನ್ನು ಓದಿ:

"ನ್ಯಾಯಕ್ಕಾಗಿನ ಈ ಹೋರಾಟವನ್ನು ನಾನೊಬ್ಬನೇ ಮಾಡಿಲ್ಲ. ಹಲವರೊಂದಿಗೆ ಸೇರಿ ನಾನು ಮಾಡಿದ್ದೇನೆ. The Sunday Leader ಪತ್ರಿಕೆಯನ್ನು ಸಂಪೂರ್ಣವಾಗಿ ಬಾಯ್ಮುಚ್ಚಿಸಬೇಕೆಂದರೆ, ನನ್ನಂತೆ ಇನ್ನೂ ಹಲವರನ್ನು ಕೊಲ್ಲಲೇಬೇಕು. ಕೊಲ್ಲುತ್ತಾರೆ ಕೂಡ. ನನ್ನ ಹತ್ಯೆ ಒಂದು ಸೋಲಲ್ಲ, ಬದಲಿಗೆ ನ್ಯಾಯಕ್ಕಾಗಿ ಹೋರಾಡುವ ಜನರಿಗೆ ಅದೇ ಒಂದು ಸ್ಫೂರ್ತಿ[illegible]ಗುತ್ತೆ ಎಂಬ ಭರವಸೆ ನನಗಿದೆ... ನಿಮ್ಮನ್ನು ಗ್ಯಾರಂಟೀ ಕೊಲ್ಲುತ್ತಾರೆ, ನಿವ್ಯಾಕೆ ಇಷ್ಟೊಂದು ರಿಸ್ಕ್[illegible] ತಗೆದುಕೊಳ್ಳುತ್ತೀರಿ? ಎಂದು ಜನ ಆಗಾಗ್ಗೆ ನನಗೆ ಕೇಳುತ್ತಿರುತ್ತಾರೆ. ಅದು ನನಗೆ ಗೊತ್ತು. ಆದರೆ, ಅದು ಅನಿವಾರ್ಯ. ನಾವೀಗ ದನಿಯೆತ್ತದಿದ್ದರೆ, ದನಿಎತ್ತಲಾಗದ ಜನರ ಪರವಾಗಿ ದನಿಯೆತ್ತಲು ಯಾರೂ ಉಳಿಯುವುದಿಲ್ಲ.. ನಾನೇಕೆ ಇದನ್ನೆಲ್ಲಾ ಮಾಡುತ್ತಿದ್ದೇನೆ ಎಂದು ನಾನೇ ಆಗಾಗ್ಗೆ ಆಶ್ಚರ್ಯಪಡುತ್ತೇನೆ. ನಾನೂ ಕೂಡ ಒಬ್ಬ ಗಂಡ, ಮೂರು ಅದ್ಭುತ ಮಕ್ಕಳ ತಂದೆ.. ಒಬ್ಬ ಪತ್ರಕರ್ತನಾಗಿ ನನಗೂ ಜವಾಬ್ದಾರಿಗಳಿವೆ.. ಮಹಿಂದಾ, ನಿನಗೆ ಮಕ್ಕಳೇ ನಿನಗೆ ಪರಮ ಸಂತೋಷ ಎಂದಿದ್ದಿ, ನಿನ್ನ ಸಹೋದರರಿಗೆ ಸರ್ಕಾರಿ ಯಂತ್ರಾಂಗವನ್ನು ನಡೆಸುವ ಜವಾಬ್ದಾರಿ ಕೊಟ್ಟು ನಿನ್ನ ಮಕ್ಕಳೊಂದಿಗೆ ಕಾಲಕಳೆಯುವುದಕ್ಕೆ ಬಹಳಷ್ಟು ಇಷ್ಟಪಡುತ್ತೇನೆ ಎಂದು ಹೇಳಿದ್ದಿ. ಈಗ ಅದೇ ಸರ್ಕಾರಿ ಯಂತ್ರಾಂಗ ಅದೆಷ್ಟು ಚೆನ್ನಾಗಿ ಕೆಲಸ ಮಾಡಿದೆಯೆಂದರೆ ನನ್ನ ಮಕ್ಕಳಿಗೆ ತಂದೆಯೇ ಇಲ್ಲದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ!" ■

ಜನ ಓಟು ಮಾಡಕ್ಕೆ ಬರದಿಲವಲ್ಲಾ, ಕತಿಯೇನೂ!

ಕಾಳಮಾವ ಓಟು ಮಾಡಿ ಬಂದು ಕುಳಿತಿದ್ದ. ಟ್ಟಿಲಿಗೆ ಕೂಗಳತೆಯಲ್ಲೇ ಸ್ಕೂಲಿತ್ತು. ಅಲ್ಲಿಂದ ತುಸು ರದಲ್ಲಿ ಕಾಂಗ್ರೆಸ್ಸು, ಜೆಡಿಎಸ್ ಮತ್ತು ಬಿಜೆಪಿ ಪುಗಳು ಗುಜುಗುಟ್ಟುವ ಶಬ್ದ ಕೇಳುತ್ತಿತ್ತು. ಆದರೆ ಗ್ರೆಸ್ ಗುಂಪು ನಾಲ್ಕೈದು ಜನರಿಗೆ ಮಾತ್ರ ಸೀಮಿತ ತ್ತು. ಇದನ್ನೆಲ್ಲಾ ಗಮನಿಸುತ್ತ ಕುಳಿತಿದ್ದ ಕಾಳಮಾವ, "ಕಾಂಗ್ರೆಸ್ ಕಡೆ ಜನವೇ ಕಾಣ್ತಾಯಿಲ್ಲವಲ್ಲಾ" ಎಂದ. ಅದಕ್ಕೆ ಉಗ್ರಿ,

"ದಳದೋರು, ಬಿಜೆಪಿಯೋರು ಇಬ್ರೂ ದುಡ್ಡು ದವುರಪ್ಪ. ತಿಂದು ಮೆಲುಕಾಯ್ಕಂಡು ಓಡಾಡ್ತರೆ. ಕಾಂಗ್ರೆಸ್ಸಿನಿಂದ ಯಾವ ದುಡ್ಡೂ ಬಂದಿಲ್ಲವಂತೆ. ಅಲ್ಲಿ ಜನ ಕಮ್ಮಿ" ಎಂದ.

"ಕಾಂಗ್ರೆಸ್ಸಿನೋರು ಬೂತಿಗಿಸ್ಟು ಅಂತ ಕೊಟ್ಟಿದ್ರಂತೆ" ಎಂದಳು ಜುಮ್ಮಿ.

"ಕೊಟ್ರೆ ಲೀಡ್ರು ಕೈಲಿ ಕೊಟ್ಟಿರತರೆ ಕಣೆ. ಆ ಮಕ್ಕಳು ದುಡ್ಡು ಬಚ್ಚಿಟ್ಟು ಟಾಟಾ ಸುಮೋ ಬಾಗಿಲಿಗೆ ನಿಲ್ಲಿಸಿಗಂಡು ಮನೆಲಿ ಮನಿಗ್ಯವುರೆ."

"ಅದ್ಯಾಕ್ ಮನಿಗಿದ್ದರೂ?"

"ಇಡೀ ಕ್ಷೇತ್ರನೆ ಭಿಕ್ಷುಕರು ಶಡ್ಡಿನಂಗಾದ್ರೆ ಎಲ್ಲಿ ಓಡಾಡಕ್ಕೆ ದತು? ಯಾವನಾರ ಲೀಡ್ರು ಕಾಣಿಸಿದ್ರ ಸಾಕು ಕೈ ತರವ್ವ. ಅದ್ಕೆ ಆ ಬಡೆತ್ತವು ಟಾಟಾ ಸುಮೋ ಬಾಗಿಲ್ಗೆ ನಿಲ್ಲಿಸಿ ವಳಗವ್ವುರೆ. ಓಡಾಡಿನ ಅಂದ್ರೆ ಲಾಕಿಸಬೇಕು. ಅದು ಬ್ಯಾರೆ ಖರ್ಚಾಕೆ ಅಂತ ಬರಿದ್ವಂಗಾಗ್ಲಿ ಅಂಬುರೀಸನ ಅದೃಷ್ಟವ ನಾವು ನ್ಯಾದತೆ ಅಂತ ಸುಮ್ಮನವೆ."

"ಅದು ಗೊತ್ತು. ಅಂಬುರೀಸನಿಗಾಕಿದೊ ಇಲ್ಲ ಕಾಂಗ್ರೆಸ್ಸಿಗಾಕಿದೊ ಅಂತ ಕೇಳಿದೆ ಕಣಕ" ಎಂದ ವಾಟಿಸ್ಸೆ.

"ಅಂಬುರೀಸನಿಗೆ ಹಾಕ್ಯವುನೆ ತಗೊ" ಎಂದು ಜುಮ್ಮಿ ಹೇಳುವಾಗ ಬಾಯಿಬಿಟ್ಟ ಕಾಳಮಾವ,

"ಅಲ್ಲಾ ಈ ಹಿಂದಿನ ಯಲಕ್ಷನ್ನಲಿ ಜನ ಓಟನೇ ಮಾಡಿಲವಂತಲ್ಲಾ ಯಾಕೇ?"

"ಯಾಕೆ ಅಂದ್ರೆ ಅದಕೆ ಹಲವಾರು ಕಾರಣ ಅವೆ ದ್ವಡಪ್ಪ" ಎಂದ ವಾಟಿಸ್ಸೆ.

"ಯಾವುದಾರ ಒಂದೇಳೂ" ಎಂದ ಉಗ್ರಿ.

"ಒಂದು ಕಾರಣ ಹೇಳದು ಕಷ್ಟ ಕಣೊ. ಮೊದಲ್ನೆದಾಗಿ ಜನರ ಮನಸ ಈ ಜನ ಹಾಳು ಮಾಡಿಬುಟ್ರು. ಅದರಲ್ಲೂ ಬಿಜೆಪಿಗಳು ತುಂಬ ಹಾಳುಮಾಡಿದ್ರು. ಯಂಗಪ್ಪ ಅಂದ್ರೆ ಕಾಂಗ್ರೆಸ್ಸಿನಲ್ಲಿ, ಜೆಡಿಎಸ್ನಲ್ಲಿ ಕೆಲವು ಶೆಡ್ಡಿಗೊಡಿಯೊ ಗಾಡಿಗಳಿದ್ವೊ."

"ಅವುರ್ಯಾರಪ್ಪಾ?"

"ಪರೆಗ್‌ಜಾಂಪಲ್, ಡಿ.ಬಿ. ಚಂದ್ರೇಗೌಡ, ತುಮಕೂರು ಬಸವರಾಜ, ಹಾಸನದ ಹನುಮೇಗೌಡ. ಈ ತರ ಇನ್ನುಬೇಕಾದಷ್ಟು ಜನ ತಗುಂಡೋಗಿ ಬಿಜೆಪಿ ಕ್ಯಾಂಡೇಟ್ ಮಾಡಿದ್ರೆ ಯಾರು ಓಟು ಮಾಡಬೇಕೇಳು?"

"ಅದು ನಿಜವೇ ಬುಡು."

"ಬಿಜೆಪಿಲಿರೊ ಜನಿವಾರಗಳಿಗೆ ಎಷ್ಟು ಬೇಜಾರಾಗ್ಯದೆ ಅಂದ್ರೆ ನಮ್ಮ ಪಾರ್ಟಿ ಸಿದ್ಧಾಂತನೆ ಎರಡು ತಿಂದು ದೊಣ್ಣೆ ಹಿಡಕಂಡು ವ್ಯಾಯಾಮ ಮಾಡಿದ ಜನ ಬೇಕಾದೊಷ್ಟಿದ್ರು. ಅಂಥೋರಿಗೆ ಟಿಕೆಟ್ ಕೊಟಿದ್ರೆ ನಾವ್ಯಲ್ಲ ಹೋಗಿ ಓಟು ಮಾಡತಿದ್ವೊ. ಕಾಂಗ್ರೆಸ್ ಗ್ಯಾರೇಜಲ್ಲಿದ್ದ ಚಂದ್ರೇಗೌಡುನ್ನ ತಂದು ಹೊಸ ಟೈರು, ಟೂಬಾಕಿ ನಿಲ್ಲಿಸಿದ್ರೆ ನಾವು ನೋಡಕ್ಯಾಯ್ತುದಾ' ಅಂತರೆ. ಇದಕೇನೇಳ್ತೀ?"

"ಅದೂ ಸರಿ ಬುಡು. ಆದ್ರು ಅವುರ ಪಾರ್ಟಿ ಜನಗಳೇ ನಿಂತಿರೊ ಜಾಗದಲ್ಲೂ ಓಟಾಗಿಲ್ಲವಲ್ಲ, ಅದಕೇ ನೇಳ್ತೀ?"

"ಅದುಕೂ ಸುಮಾರು ಕಾರಣವೇ ಕಣೊ ಉಗ್ರೀ. ಸ್ಟಾಟಿಂಗಿಂದ್ಲೆ ಈ ಯಲಕ್ಷನ್ನು ಡಲ್ಲಾಗ್ಯದೆ. ಚುನಾವಣೆ ನೀತಿ ಸಂಮ್ಮಿತೆ ಅಂತ ಹೇಳಿಕಂಡು ಹಬ್ಬಾಗಬೇಕಾಗಿದ್ದ ಯಲಕ್ಷನ್ನು ಸಭದ ಯಾತ್ರೆ ತರ ಡಲ್ಲಾಗ್ಯವೆ. ಆಮ್ಯಾಲೆ ಕಾಂಗ್ರೆಸ್ಸಿನೋರು ಕಾಸಿಲ್ದೆ ಡಲ್ಲಾಗಿದ್ರು. ಬಿಜೆಪಿಗಳು ದುಡ್ಡು ಜಾಸ್ತಿಯಾಗಿ ಲೀಡ್ರು ಅನ್ನಕಂಡೋರ ಕೊಂಡು ಕೊಂಡೂ ಜನಕೆ ಮುಖ ತೋರದಂಗೆ ಆಗಿದ್ರು. ಇನ್ನು ದ್ಯಾವೇಗೌಡುಂದು ಯಾವ ತರದ ರಾಜಕಾರಣ ಅನ್ನದು ಇವತ್ತಿಗೂ ಗೊತ್ತಾಗಿಲ್ಲ."

"ಅದ್ಯಾಕ್ಲ ಅಂಗಂತಿ? ಅವುನ ಪಾರ್ಟಿ ಅದೆ, ಕ್ಯಾಂಡೇಟಾಕ್ಯವುನೆ."

"ಸರಿ ದ್ವಡಪ್ಪ, ಶಿವಮೊಗ್ಗದಲ್ಲಿ ಕ್ಯಾಂಡೇಟಾಕಿಲ್ಲ. ದಾವಣಗೆರೆಲಿ ಹಾಕಿರೊ ಕ್ಯಾಂಡೇಟು ಹಿಂದಕೆ ತಗಂಡವುನಂತೆ. ಇನ್ನು ಧಾರವಾಡದಲ್ಲೂ ಅಂಗೇ ಆಗ್ಯದೆ. ಬಳ್ಳಾರಿಲೂ ಅಂಗೇ ಮಾಡಿದ್ದಿರಿ. ಆದ್ರೆ ಮಂಡ್ಯಾಕ್ಕೆ ಮಾತ್ರ ಕ್ಯಾಂಡೇಟಾಕಿ ಅಪ್ಪ ಮಕ್ಕಳು ಹಗಲುರಾತ್ರಿ ಹಕ್ಕಿ ಹಿಡಿಯೋರಂಗೆ ತಿರುಗ್ತಿರಲ್ಲ, ಇದ್ಯಾವ ಸೀಮೆ ರಾಜಕಾರಣ? ನೀನೆ ಹೇಳು ದ್ವಡಪ್ಪ" ಎಂದ ವಾಟಿಸ್ಸೆ.



"ದ್ವಡಪ್ಪನಿಗೇನು ಗೊತ್ತಾಯ್ತದೆ, ನಾನೇಳ್ತಿನಿ ಕೇಳೊ. ಅಂಬರೀಸ ಜನಾಂಗದಲ್ಲೇ ಪಜಗಟ್ಟಾದ ಲೀಡ್ರು. ಅವುನು ಗೆದ್ದು ಬಂದು ಒಕ್ಕಲಿಗರ ಲೀಡ್ರಾದ್ರೆ ತನ್ನ ಮಕ್ಕಳ ಕತಿಯೇನು ಅಂತ ಇಲ್ಲಿ ತಿರುಗ್ತ ಬಿದ್ದವುನೆ. ಕಿಸ್ಣಭೈರೇಗೌಡನೂ ಗೆಲ್ಲಬಾರದು ಅನ್ನದು ಅದೇ ಉದೇಶದಿಂದ ಅಲವೇ?" ಎಂದ ಉಗ್ರಿ.

"ಅದೂ ಇರಬವುದು. ಆದ್ರೆ ನನಿಗಿನ್ನ ಒಂದು ಡವುಟದೆ. ಇದೇ ಚಲುವರಾಯಸ್ವಾಮಿ ಬಿಜೆಪಿ ಜ್ವತೆ ಸರಸ ಆಡಿಕಂಡೋಗಿ ಜೆಡಿಎಸ್‌ಗೆ ಡೈವೋರ್ಸ್ ಕೊಡಕ್ಕೆ ಮಾಡಿದ್ನಂತೆ. ಅಂಥೋನ್ನ ಈ ಚುನಾವಣೆಲಿ ನಿಲ್ಲಿಸಿ ಸೋಲಿಸಿದ್ರೆ ಅವುನ ಕತೆ ಮುಗಿತು. ಆನಂತರ ಪಾಂಡುಪುರದ ಪುಟ್ಟರಾಜನ್ನ ಮಂಡ್ಯ ಲೀಡ್ರು ಮಾಡಿದ್ರಾಯ್ತು ಅನ್ನೊ ಪ್ಲಾನೂ ಇದ್ದತಂತೆ" ಎಂದ ವಾಟಿಸ್ಸೆ ಹೇಳುವಾಗ,

"ಮೂಳಿಲ್ಲದ ನಾಲಿಗೆ ಏನು ಬೇಕಾದ್ರು ಹೇಳತದೆ" ಎಂದು ಗೊಣಗಿದ ಕಾಳಮಾವ.

"ದ್ವಡಪ್ಪ, ರಾಜಕಾರಣದಲ್ಲಿ ಒಂದೇ ಕಾರಣ ಇರಲ್ಲ ಪರೆಗ್‌ಜಾಂಪಲ್, ಎಡೂರಪ್ಪ ತನ್ನ ಮಗನ್ನ ನಿಲ್ಲಿಸಿಗಂಡವುನೆ. ಅದೂ ಒಂದೇ ಕಾರಣಕ್ಕಲ್ಲ, ಈಶ್ವರಪ್ಪನ ಬಾಯಿಗೆ ಬ್ಯಣೆ ವಡದು ಮುಖಲಿಗೆ ಗೂಟವಡಿಬೇಕು. ಅಂಗೇ ಐನೂರು ಮಂಜುನಾಥ್ ಆರನೂರು ಕೇಳದಂಗೆ ಮಾಡಬೇಕು. ಜಿಲ್ಲೆಗೊಬ್ಬ ಮಗಾದ್ರೆ ಶಿಕಾರಿಪುರಕೆ ವಬ್ಬಮಗನ್ನ ನಿಲ್ಲಿಸಿ ತಾನತ್ತಗೆ ಶೋಭಾ ಕರಂದ್ಲಾಜೆ ಜೊತೆಲಿ ಪುಣ್ಯಕ್ಷೇತ್ರ ತಿರಿಕಂಡು ಹೋಮ ಮಾಡಿಕಂಡಿರಬೇಕು. ಇದೇ ಅವುನು ಮಾಡಿರೊ ಪ್ಲಾನು" ಎಂದ ವಾಟಿಸ್ಸೆ.

"ಅವನು ಚಂದ್ರಾಪಟ್ಟಕ್ಕೆ ಬಂದಾಗ ಯಾರೊ ಮೆಟ್ಟಲಿ ವಡದರಂತಲ್ಲಾ?" ಎಂದ ಸೀರ.

"ವಡಿಲಿಲ್ಲ ಕಣಚಿಗಪ್ಪ, ಯಸ್ತವುನೆ. ಅವುನು ನನಿಗಿಂತ ಕುಡುಕನಂತೆ. ಕುಡುಕ್ರು ಯಾವತ್ತಾರ ಗುರಿಕಟ್ತರಾ? ಹಿಂಗೆ ಯಸಿತವೆ, ಅದು ಅಲ್ಲಿಗೋಗಿ ಬಿತ್ತು."

"ಯಾವುನ್ನ ಅಂತ ಕ್ಯಲಸ ಮಾಡಿದ್ದು?"

"ಅದ್ಯಾವುದೊ ಕುಡುಕ ಬಡ್ಡೆತ್ತುದ್ದು ಕಣಮಾವ. ಕುಡದ ಅಮಲಲ್ಲಿ ದ್ಯಾವೇಗೌಡುನ್ನ ನ್ಯನಿಸಿಗಂಡದೆ. ಅವುನ್ನ ನ್ಯನಿಸಿಗಂಡೇಟಗೆ ಅವುನ ವೈರಿಗಳಿಗೆ ವಡಿಬೇಕು ಅನ್ನಿಸ್ಯದೆ. ಅದ್ಕೆ ದ್ಯಾವೇಗೌಡಾಕಿ ಜೈ ಅಂತ ಯಸ್ತದೆ."

"ಆ ಪೊಲಿಬಡ್ಡೆತ್ತುದ್ದು ಎಡೂರಪ್ಪನಿಗೆ ಯಸಿಯದಕಿಂತ ಶ್ರೀಕಂಟಯ್ಯನ ಕಡಿಕೆ ಯಸಿಬೇಕಾಗಿತ್ತು ಕಂಡ್ಯ" ಎಂದ ಸೀರ.

"ತಗಳಪ್ಪ ಇದು ಮಾತು ಅಂದ್ರೆ. ನಮ್ಮ ಸೀರ ಚಿಗಪ್ಪ ಶ್ರೀಕಂಠಯ್ಯನ ಕಟ್ಟಾ ಅಭಿಮಾನಿ, ಪಾಲೋಯರ್ರು. ಹುಡುಕಿದ್ರೆ ಸಮಂಧನೂ ಆಗಬೇಕೇನೊ. ಅಂಥದ್ರಲಿ ಶ್ರೀಕಂಠಯ್ಯನಿಗೆ ಮೆಟ್ಟಲಿ ವಡಿಬೇಕು ಅಂದ್ಯಲ್ಲಾ, ರಿಯಲಿ ಗ್ರೇಟ್ ಚಿಗಪ್ಪ"

"ಇನ್ನೇನ್ಲ ಮತ್ತೆ ಇವುನೇನೊ ಹೋಗಿಬುಟ್ಟ, ನಾವೆಲ್ಲಿಗೋಗಬೇಕು?"

"ನೀನೆಲ್ಲಿಗೂ ಹೋಗಬೇಡ ಚಿಗಪ್ಪ, ದ್ವಡಪ್ಪ ಎಲ್ಲಿತರನೊ ಅಲ್ಲಿರು. ಪಾಪ ಆ ಶ್ರೀಕಂಠಯ್ಯನಿಗೆ ತಲಿಕೆಟ್ಟೊಗ್ಯದಂತೆ. ಹೆಂಗಸರ ಕಂಡ್ರೆ ಇಷ್ಟವಂತೆ. ಆದ್ರೆ ಏನು ಮಾಡಕ್ಯಾಯ್ತಾಯಿಲ್ಲ. ಅಂಥೋನ್ನ ಬಿಜೆಪಿಗಳು ಭಾಳದಿನ ಇಟ್ಕಗಳದಿಲ್ಲ. ಒಂದಲ್ಲಾ ಒಂದಿನ ಸುದ್ದಿ ಕಳುಸ್ತಾರೆ. ಏನಂತಾ ಅಂದ್ರೆ, ಬಿಜೆಪಿ ಜಗಲಿಮ್ಯಾಲೆ ಶ್ರೀಕಂಠಯ್ಯ ಕುಂತವುನೆ. ಬಿಜೆಪಿ ಆಫೀಸಿಗೆ ಬರೋ ತಾರಾ, ಶೃತಿ, ವಿಮಲಾಗೌಡ, ಶೋಭಾ ಕರಂದ್ಲಾಜೆ ಇವುರನ್ಯಲ್ಲ ಬಾಯಿಬುಟಗಂಡು ನೋಡ್ತನೆ. ಇಂತ ಗಿರಾಕಿ ಕಾಂಗ್ರೆಸ್ಸಿಗೇ ಸರಿ. ಬಂದು ಕರಕಂಡೋಗಿ ಅಂತ ಹೇಳಿಕಳುಸ್ತರೆ" ಎಂದು ಉಗ್ರಿ ಹೇಳುವಾಗ ನಗಾಡಿದ ಜುಮ್ಮಿ.

"ಪಾಪ, ಸ್ರೀಕಂಠಯ್ಯನ ಮ್ಯಾಲೆ ಅನ್ಯಾಯ ಹೇಳಬ್ಯಾಡ ಕಂಡ್ಯ" ಎಂದಳು.

"ಥೂ ಥೂ ಇದು ನ್ಯಾಯ ಅಲ್ಲ ಕಣಕ್ಕ. ರಿಯಲ್ ಪ್ಯಾಕ್ಟು. ಜನ ಬಿಜೆಪಿಗೆ ಓಟು ಮಾಡದೆ ಇರಕ್ಕೆ ಅಂದ್ರೆ ಬೂತತ್ರ ಹೋಗದೆ ಪೋಲಿಂಗಾಪೀಸಿರ್ರು ಪ್ರಿಸೈಡಿಂಗ್ ಆಪೀಸರು ತೂಕುಡಿಸಿದ್ಯೆ. ನನಿಗೆ ಸಿಕ್ಕಿರೊ ಕಾರಣದಲ್ಲಿ 'ಕಾಂಗ್ರೆಸಲ್ಲಿದ್ದು ಕಂಡು ಮಂತ್ರಿಯಾಗಿ ಕೋಟ್ಯಾಂತ್ರಪಾಯಿ ಮಾಡಿಕಂಡು, ಆಸ್ತಿ ಅಡವು ಅಂತ ಮಾಡಿಕಂಡು, ತಿಂದು ಉಂಡು ತೇಗಿ ಹೋಗಿ ಬಿಜೆಪಿ ಜಗಲಿಮ್ಯಾಲೆ ಆಕಳುಸ್ತ ಕುಂತಗತ್ತಿಯಲ್ಲಾ, ನಿನಗೆ ನಾಚಿಗೆ ಅನ್ನದೆ ಇಲವೆ, ಮುಂಡೆಮಗನೆ' ಅಂತ ಶ್ರೀಕಂಠಯ್ಯ ಕೆಳನಾ ಅನ್ನಸ್ತ ಅದೆ. ಇಂತ ಜನಗಳಿಂದ ಬಿಜೆಪಿ ಹಾಳುಬಿದ್ದ ಮನೆ ಆಗದ್ರಲ್ಲಿ ಡವುಟೆ ಬ್ಯಾಡ. ಆದಿವ ದೂರಯಿಲ್ಲ ದ್ವಡಪ್ಪ, ಬತ್ತಿನಿ ನಾನು ಓಟಾಕಬೇಕು" ಎಂದು ವಾಟಿಸ್ಸೆ ಓಡಿದ. ■

ಕಷ್ಟೆಪುರಾಣ

ಯ ಲು ಸೀ ಮೆ

▶ ಬಿ. ಚಂದ್ರೇಗೌಡ

"ಇಂತ ಕಾರ್ಯಕರ್ತರ ನಚ್ಚಿದೋನು ಯಾವನಾರ ಉದ್ಧಾರಾದನ್ನ?" ಎಂದ ಕಾಳಮಾವ.

"ಆ ಕಾಲದಿಂದ ಅಂಬರೀಸ್‌ಗೆ ಕಾರ್ಯಕರ್ತರೆ ಜಣ ಮಾವ. ಈ ಹಿಂದಿನ ಚುನಾವಣೆನ್ಯಲ್ಲ ಕೈಬೀಸಿ ಗೆದ್ದುಬಂದ. ಈಗ್ಲೆ ಇಂತ ಕಷ್ಟ ಬಂದಿರದು. ಅವುನಿಗೂ ಗೊತ್ತಾಗ್ಯದೆ."

"ಒಂದೈದು ಸವುರದಲ್ಲಾದ್ರು ಗೆಲ್ತನೇನ್ಲ ಅವುನು?" ಎಂದಳು ಜುಮ್ಮಿ.

"ಸಿದರಾಮಯ್ಯನಂಗೆ ಇನ್ನೂರು ಚಿಲ್ರೆ ಓಟಲ್ಲೆ ಗೆಲ್ಲಬೇಕು. ಅಂತೂ ಗೆಲ್ಲಬೇಕಪ್ಪಾ"

"ಗೆಲ್ತನೆ ತಗಳ್ಳ" ಎಂದು ಸೀರ ಆಖೈರಾಗಿ ನುಡಿದಾಗ ಖುಸ್ಸಿ ಕಾಣಿಸಿಕೊಂಡ.

"ಯಾರಿಗಾಕಿದೆ ದ್ವಡಪ್ಪ ಓಟಾ?" ಎಂದ. ಅವನೇನೂ ಮಾತನಾಡಲಿಲ್ಲ.

"ಅವುನು ಕಾಂಗ್ರೆಸ್ ಬುಟ್ಟು ಇನ್ಯಾವುದಕಾಕಿದ್ದನ್ಲ?" ಎಂದಳು ಜುಮ್ಮಿ.

ಸರ್ದಾರ್ಜಿ ಮತ್ತು ಮರ


ಬೆಂಗಳೂರಿಗೆ ಬಂದಿದ್ದ ಆ ಸರ್ದಾರ್ಜಿ ನಮ್ಮ ಮನೆಗೆ ಬಂದರು. ಸುಮಾರು ಅರವತ್ತು ವರ್ಷದ ವರ್ತ. ಒಳ್ಳೆಯತನ ಮತ್ತು ಹಿಂಸೆ ಎರಡರಲ್ಲೂ ನಾಗಿ ವರ್ತಿಸುವ ಈ ಸರ್ದಾರ್ಜಿಗಳೆಂದರೆ ನನಗೆ ಗೆ ಬೇಸರ. ಈತನ ಹೆಸರು ಕೇಳಿದೆ. ತನ್ನ ಕಾರ್ಡು ಆತನ ಹೆಸರು ಬಲ್‌ಜೀತ್ ಮಲ್ಲಿಕ್. ದಿಲ್ಲಿಯ ಯೊಂದಕ್ಕೆ ಕೆಲಸ ಮಾಡುವ ಉದ್ವೇಗಗೊಂಡಿದ್ದ, "ನೋಡಿ, ನೆನ್ನೆ ಈ ತುಪಿರಾಗಿ ಬೆಳಿಗ್ಗೆ ಮತ್ತ ನಿಮ್ಮ ಊರಿನ ರಿಚ್ ಸರ್ಕಲ್‌ನ ಬಳಿ ಹೋಗು ಗ ಒಂದು ಬೃಹತ್ ಮರ ಕುತಿದ್ದರು. ಇಂಜಿನಿಯರುಗಳು, ಟ್ರಾಫಿಕ್ ಪೊಲೀಸರೆಲ್ಲ ಈ ದೊಡ್ಡ ಮರಕ್ಕೆ ಕೊಡಲಿ ಬೀಳುವುದನ್ನು ನೋಡುತ್ತ ನಾನು ಕೂಡಲೆ ಈ ಕೆಲಸ ನಿಲ್ಲಿಸಲು ಹೇಳಿದೆ. ಇಷ್ಟೊಂದು ದೊಡ್ಡ ದೊಡ್ಡ



ಮರ ಕಡೀತಿದ್ದೀರಿ!' ಎಂದು ಕೇಳಿದೆ. 'ಟ್ರಾಫಿಕ್ ಲೈಟ್ಸ್‌ಗೆ ಅಡ್ಡಿಯಾಗಿದೆ- ನಾವು ಕಡೀಲೇ ಬೇಕು' ಅಂದರು. ನಾನು ಅಲ್ಲಿಂದ ನೇರವಾಗಿ ಪೊಲೀಸ್ ಸ್ಟೇಷನ್ನಿಗೆ ಹೋಗಿ ವಿಷಯ ತಿಳಿಸಿ ಬರಹದಲ್ಲಿ ಕಂಪ್ಲೇಂಟ್ ಕೊಟ್ಟು ಅಲ್ಲಿಂದ ಪೊಲೀಸರನ್ನು ಕರೆದುಕೊಂಡು ಬಂದು ಮರ ಕಡಿಯುವುದನ್ನು ನಿಲ್ಲಿಸಿದೆ. ಆದರೆ ಅವರು ಮೇಲಿನಿಂದ ಅನುಮತಿ ತೆಗೆದುಕೊಂಡಂತಿದ್ದರು. ನಾನು ಅಲ್ಲಿಂದ ಹೋದ ಮೇಲೆ ಮರ ಬೀಳಿಸಿ ತುಂಡುತುಂಡು ಮಾಡಿದರು. ನನ್ನ ಊಹೆಯ ಪ್ರಕಾರ ರಿಚ್‌ಮಂಡ್ ಸರ್ಕಲ್‌ನ ನಾಲ್ಕೈದು ಮರ ಹೊರಟು ಹೋಗುವಂತೆ ಕಾಣುತ್ತೆ. ನೀವೇನಾದ್ರೂ ಮಾಡಲು ಸಾಧ್ಯವೆ?" ಅಂದರು.

ಈತನ ಕಾಳಜಿ ನೋಡಿ ಖುಷಿಯಾಯಿತು; ನಾನು ವಿಚಾರಿಸಿದೆ. ಒಂದು ಮರ ಟ್ರಾಫಿಕ್ ಲೈಟ್‌ಗಳಿಗೆ ಅಡ್ಡವಾಗಿದ್ದುದರಿಂದ ಕಡಿದದ್ದಾಗಿ ತಿಳಿಯಿತು. ಸರ್ದಾರ್ಜಿ ಹೇಳಿದಂತೆ ಈ ದರಿದ್ರದ ಕಾರು, ಲಾರಿ ಬದಲು ಅನೇಕ ದಾರಿಗಳಿವೆ; ಒಂದು ಮರ ಉಳಿಸಲು ಅನೇಕ ಮಾರ್ಗಗಳಿವೆ. ಸುಮಾರು ನೂರು ವರ್ಷ ಬೆಳೆದ ಹೆಮ್ಮರವೊಂದನ್ನು ಕತ್ತರಿಸಲು ಈ ದುಷ್ಟರ ಕೈ ತುರಿಕೆ ಅನುಭವಿಸುತ್ತಿರುತ್ತವೆ. ರಿಚ್‌ಮಂಡ್ ಸರ್ಕಲ್ ಸ್ವಲ್ಪ ಒತ್ತಡದ, ತಲೆನೋವಿನ ಸರ್ಕಲ್ ಎಂದು ಎಲ್ಲರೂ ಬಲ್ಲರು. ಆದರೆ ಈ ಸರ್ಕಲ್ ಮೇಲಿನ ಒತ್ತಡ ಕಮ್ಮಿ ಮಾಡಲು ಅನೇಕ ಉಪಾಯಗಳಿವೆ. ನಾನಂತೂ ಈ ಸರ್ಕಲ್ ನೋಡಿ ಬಹಳ ಕಾಲವಾಯಿತು. ಕ್ಯಾಶ್ ಫಾರ್ಮಸಿಯಿಂದ, ಈ ಕಡೆ ಕೆಂಗಲ್ ಡಬಲ್ ರಸ್ತೆಯಿಂದ, ಆ ಕಡೆ ಕಾರ್ಪೊರೇಷನ್, ಟಫನೀಸ್ ಕಡೆಯಿಂದ ಎಚ್ಚರ ವಹಿಸಿದರೆ ಈ ರಿಚ್‌ಮಂಡ್ ಸರ್ಕಲ್ ಮನುಷ್ಯರ ಬಳಕೆಗೆ ಯೋಗ್ಯವಾಗಬಲ್ಲದು.

"ನಿಮ್ಮ ಕಡೆ ಈ ಮರಗಳ ಬಗ್ಗೆ ಕಾಳಜಿ ಹೇಗಿದೆ? ಅಲ್ಲಿಯೂ ಪರಿಸರವಾದಿಗಳು ಇರಬೇಕಲ್ಲವೆ?" ಎಂದು



ಬಲ್‌ಜೀತ್ ಮಲ್ಲಿಕ್‌ರನ್ನು ಕೇಳಿದೆ.

"ಇಲ್ಲಿರುವಷ್ಟಿಲ್ಲ, ದಕ್ಷಿಣ ಭಾರತ ಪರಿಸರ ಚಳವಳಿಗೆ ಹೆಸರಾಗಿದೆ" ಅಂದರು.

"ಅದು ತಪ್ಪು, ವಿಂಧ್ಯಾ ಹಿಮಾಲಯದ ಜನ ಹೀಗೆ ಹೇಳುತ್ತಿದ್ದರೆ ನಿಸರ್ಗಕ್ಕೆ ಭವಿಷ್ಯವಿದೆಯೆ?" ಅಂದೆ.

"ಅಲ್ಲಿ ರಾಜಕಾರಣಿಗಳ ಭ್ರಷ್ಟತೆ, ಜಡತೆ ಹೆಚ್ಚು" ಅಂದರು.

"ಅದೇ ಇದೆಲ್ಲಕ್ಕೆ ಕಾರಣ. ರಿಚ್‌ಮಂಡ್ ಸರ್ಕಲ್ ಬಳಿಯ ಮರ ಕಡಿಯುವಲ್ಲಿ ಭ್ರಷ್ಟತೆಯೇನಿಲ್ಲ; ಆದರೆ ಒಂದು ನಿರ್ಲಕ್ಷ್ಯದ, ಜಡಗೊಂಡ ಮನುಸ್ಥಿತಿ ಅದರ ಹಿಂದಿದೆ. ಇವತ್ತಿನ ರಾಜಕಾರಣ ಲಾಭ, ಲಂಚ, ಧಿಮಾಕಿಗಾಗಿ ನಡೆಯುತ್ತಿದೆ"

"ದಿಲ್ಲಿಗೆ ಬಂದಾಗ ದಯವಿಟ್ಟು ನಮ್ಮ ಮನೆಗೆ ಬನ್ನಿ" ಎಂದು ಅವರು ಫೋನ್ ನಂಬರ್ ಕೊಟ್ಟರು ಬಲ್‌ಜೀತ್.

ಜುಲೈ 28, 1991

ಹುಡುಗಾಟಿಕೆಯ ಮನಸ್ಸಿನ, ಗಂಭೀರ ಕಾಳಜಿಗಳ ಪ್ರಯೋಗಶೀಲ ಪದ್ಯಗಳು

ಕೆ. ಪಿ. ಸುರೇಶ ಪದ್ಯಗಳು ಸರಳ ರಚನೆ, ಗಹನ ಜಿಜ್ಞಾಸೆ, ಆಳದಲ್ಲಿ ಅಡಗಿಸಿಟ್ಟಿರುವ ವೈನೋದಿಕ ವಿಡಂಬನೆ, ಬದುಕಿನ ಬಗ್ಗೆ ಪ್ರೀತಿ ಮತ್ತು ಕೃತಜ್ಞತೆ, ಸುತ್ತಲಿನ ಬಗ್ಗೆ ಜಡಗೊಂಡಿಲ್ಲದ ನಿಲುವು ಮುಂತಾದ ಹಲವು ಅಂಶಗಳು ಈ ಸಂಕಲನದ ಬರಹಗಳ ಹಿಂದಿನ ಪ್ರೇರಣೆಯಾಗಿದ್ದು, ಇವು ಕವಿತೆಗಳೇ ಯಾಕಾಗಬೇಕು ಎಂಬಂತೆ ಬರೆಯುತ್ತಲೇ ಪ್ರಯೋಗಾತ್ಮಕ ಪ್ರಯತ್ನವನ್ನು ಮಾಡುತ್ತಿರುವ ಹುಡುಗಾಟಿಕೆಯ ಮನಸ್ಸಿನ, ಗಂಭೀರ ಕಾಳಜಿಗಳ ಅಭಿವ್ಯಕ್ತಿಯಾಗಿ ಸ್ವಾಗತಾರ್ಹವಾಗಿವೆ.

ಪುಸ್ತಕ ವಿಮರ್ಶೆ

ಕೆ. ಪಿ. ಸುರೇಶ ಪದ್ಯಗಳು
ಲೇ- ಕೆ. ಪಿ. ಸುರೇಶ
ಪ್ರ. ಒನ್ ವೀಲರ್ ಪ್ರಕಾಶನ
ವೆಂಕಟಾಲ, ಬೆಂಗಳೂರು
ಒಟ್ಟು ಪುಟ- 70,
ಬೆಲೆ- 65
2008



ಕೆ. ಪಿ. ಸುರೇಶ ಪದ್ಯಗಳು ಕೃತಿ ತನ್ನ ವೈಚಿತ್ರ್ಯದಿಂದಾಗಿಯೇ ಗಮನ ಸೆಳೆಯುವ ಸಂಕಲನವಾಗಿದೆ. ಕವಿಗೆ ಈ ಪದ್ಯಗಳ ಬಗ್ಗೆ ತೋರಿಸಿಕೊಳ್ಳುವಂತಹ ಯಾವುದೇ ಮಹತ್ವಾಕಾಂಕ್ಷೆ ಇಲ್ಲವೆಂಬುದು ಓದಿದೊಡನೆ ಗೊತ್ತಾಗುತ್ತದೆ. ಯಾವ ಪದ್ಯಕ್ಕೂ ಶೀರ್ಷಿಕೆಯಿಲ್ಲ, ಪದ್ಯದ ಲಯದಲ್ಲೇ ಬರೆಯಬೇಕೆಂಬ ಪ್ರಯತ್ನವೂ ಇಲ್ಲ. ಅನಿಸಿಕೆಗಳನ್ನು ದಾಖಲಿಸುವಷ್ಟು ನಿರುಮ್ಮಳವಾಗಿ ಇಲ್ಲಿನ ಪದ್ಯಗಳು ರೂಪಗೊಂಡಿವೆ. ತಮ್ಮ ದೈನಿಕದ ಭಾಗವಾಗಿ ಪರಿಚಿತವಾದ ಗುಬ್ಬಿ, ಕಾಗೆ, ಬೆಕ್ಕು, ಹಸು, ಅಳಿಲು, ಹಾವು, ಬೆಟ್ಟ, ನಾಯಿ, ನವಿಲು, ಕೆಂಭೂತ, ಚಿಪ್ಪು ಹಂದಿ ಮುಂತಾದ ಪ್ರಾಣಿಪಕ್ಷಿಗಳ ನೆಪವಾಗಿ ಸುರೇಶ ಮಂಡಿಸುವ ಚಿಂತನೆಗಳು ಗ್ರಹಿಕೆಗಳು, ಅಚ್ಚರಿಗಳು ಮುಂತಾದವುಗಳು ಕೆಲವು ಕಡೆ ಚೋದ್ಯವೆಂಬಂತಿವೆ. ಮಕ್ಕಳ ಮಾತುಗಳಂತೆ ಚೇತೋಹಾರಿಯಾಗಿವೆ. ವಸ್ತುಸ್ಥಿತಿಯನ್ನು ಅದರ ಯತಾರ್ಥದಲ್ಲಿ ಮಂಡಿಸುತ್ತಿವೆ ಎಂಬಂತೆ ಭಾಸವಾಗುತ್ತಲೇ ಅದರಲ್ಲೊಂದು ಧ್ವನ್ಯಾರ್ಥವನ್ನು ಹೊಳೆಸುವಷ್ಟು ಸಮರ್ಥವಾಗಿಯೂ ಇವೆ. ಇದರಲ್ಲಿನ ಎಲ್ಲ ಪದ್ಯಗಳೂ ಇಂತಹ ಯಶಸ್ಸು ಸಾಧಿಸಿವೆ ಎಂದು ಹೇಳಲು ಸಾಧ್ಯವಿಲ್ಲದಿದ್ದರೂ ಅವುಗಳಿಗೆ ಓದಿಸಿಕೊಳ್ಳುವ ಗುಣ ಇದೆ.

ಕಾವ್ಯ ಕಸರತ್ತಿನ ನೀರಸತೆಯ ಬಗ್ಗೆ ವ್ಯಕ್ತವಾಗುತ್ತಿರುವ ಪ್ರತಿಭಟನೆ ಎಂಬಂತೆ ಇವುಗಳನ್ನು ಬರೆಯಲಾಗಿದೆಯೇ ಎಂದು ಕಾಣುವ ಧಾಟಿ ಧೋರಣೆ ಕೂಡ ಕೆಲವು ಪದ್ಯಗಳಲ್ಲಿ ವ್ಯಕ್ತವಾಗುತ್ತದೆ. ಪ್ರಯೋಗಶೀಲತೆಯ ಹಮ್ಮುಗಳಿಲ್ಲದೆಯೇ ಪ್ರಯೋಗಶೀಲವಾಗಿರುವುದನ್ನು ಸುರೇಶ ಅವರ ಈ ಕೃತಿ ಪ್ರತಿಪಾದಿಸುತ್ತಿರುವಂತಿದೆ. ಮುಖ್ಯವಾದುದೇನನ್ನೂ ಹೇಳಲಿಕ್ಕೆ ಹೊರಟಿಲ್ಲ ಎಂಬ ನಿರಾಕರಣೆಯ ನೆಲೆಯಲ್ಲಿ ಇಲ್ಲಿನ ಬಹುಪಾಲು ಪದ್ಯಗಳು ಹೇಳಲ್ಪಟ್ಟಿವೆ. ಬದುಕಿನ ಬಗ್ಗೆ ಇರುವ ಗೌರವ ಮತ್ತು ಪ್ರೀತಿ, ಅದರ ದೈನಿಕತೆಯನ್ನೇ ಅತ್ಯಂತ ಅರ್ಥಪೂರ್ಣ ಎಂದು ಬಗೆಯುವ ಪರಿಭಾವನೆ ಹಾಗೂ ಕಂಡಿದ್ದರಲ್ಲೇ ಇನ್ನೂ ಕಾಣುವುದು ಮಿಕ್ಕಿದೆ ಎಂಬ ತಾತ್ವಿಕತೆ ಈ ಪದ್ಯಗಳ ಹಿಂದೆ ಕ್ರಿಯಾಶೀಲವಾಗಿದೆ.

ಏನನ್ನೋ ಹೇಳುತ್ತೇನೆಂಬ ಭ್ರಮೆ ಹುಟ್ಟಿಸಿ, ಏನನ್ನೂ ಹೇಳದೆ ಬಳಲಿಕೆ ಹುಟ್ಟಿಸುವ ಕಾವ್ಯ ನಿರ್ಮಾಣ ಸಾಕಷ್ಟು ಹೇರಳವಾಗಿ ಆಗುತ್ತಿರುವ ಇವತ್ತಿನ ಕಾವ್ಯ ಸಂದರ್ಭದಲ್ಲಿ ಈ ಕೃತಿ ತನ್ನ ಲವಲವಿಕೆಯ ಸಾಮಾನ್ಯ ನಿಲುವುಗಳಿಂದಲೇ ಅರ್ಥಪೂರ್ಣವಾಗಲು ಹೊರಟಿರುವ ಪ್ರಯತ್ನ ಮೆಚ್ಚುಗೆ ಹುಟ್ಟಿಸುತ್ತದೆ.

ಮೇಲಿನ ಮಾತುಗಳಿಗೆ ಸಂಕಲನದೊಳಗಿನ ಹಲವು ಪದ್ಯಗಳ ನಿದರ್ಶನ ನೀಡಬಹುದು. 'ಹಸುವೆಂಧರೆ ಮಾತೆ' ಎಂದು ಆರಂಭವಾಗುವ ನಾಲ್ಕನೇ ಪದ್ಯ ಒಂದು ಅಧಿವಾಸ್ತವಿಕ ಅನುಭವವನ್ನು ವಾಸ್ತವಿಕ ನೆಲೆಯ ತಳಹದಿಯಲ್ಲಿ ನಿರೂಪಿಸುತ್ತದೆ. ಹಸುವಿನ ಮೈಯಲ್ಲಿ ದೇವಾನುದೇವತೆಗಳಿದ್ದಾರೆಂಬ ವೈದಿಕ ಹಿಂದೂಗಳ ನಂಬಿಕೆಯನ್ನು ನಂಬಿಕೊಂಡಂತೆ ತೋರಿಸಿಕೊಳ್ಳುತ್ತಾ ಮುಂದುವರೆಯುವ ಪದ್ಯ ನಗು ಬರುವಂತಹ ಸನ್ನಿವೇಶವನ್ನು ನಗು ಬರದಿರುವಷ್ಟು ಗಂಭೀರವಾಗಿ ಹೇಳುತ್ತದೆ.

ಸುರೇಶ ತಮ್ಮ ಪದ್ಯಗಳಲ್ಲಿ ಈ ಧಾಟಿಯನ್ನು ಬೇಕೆಂತಲೇ ಅಳವಡಿಸಿಕೊಂಡಿದ್ದಾರೆನಿಸುತ್ತದೆ. ಗಂಭೀರ ವಿಷಯಗಳನ್ನು ನಗು ಬರುವಂತೆ ಹೇಳುವುದು, ನಗು ಬರುವ ವಿಷಯಗಳನ್ನು ಗಂಭೀರವಾಗಿ ಹೇಳುವುದು, ಈ ಮೂಲಕ ವಿದ್ಯಮಾನಗಳ ಪೊಳ್ಳುತನವನ್ನು ಗೇಲಿಗೊಳಪಡಿಸುವುದು ಇಲ್ಲಿನ ಪದ್ಯಗಳ ಸ್ವಭಾವವಾಗಿದೆ.

ಹಸುವಿನ ಕೊಂಬಿನಲ್ಲಿರುವ ಸೂರ್ಯ ಚಂದ್ರರು, ಮೈಮರೆವಿನ ಗಳಿಗೆಯಲ್ಲಿ ಕೊಂಬುಗಳಿಂದ ಅಂಡಿಗೆ ತಿವಿಸಿಕೊಂಡ ಕಾರಣದಿಂದಾಗಿ ಕವಿಯ ಅಂಡಿಗೆ ಲಗತ್ತಾಗಿಬಿಡುತ್ತಾರೆ. ಇದರಿಂದಾಗಿ ಜಗತ್ತಿನ ಜನರು ಅಂಡಿನ ಜಾಗದಿಂದ ಬೆಳಕು ಪಡೆಯುವ ಅನಿವಾರ್ಯತೆಗೆ ಸಿಲುಕುತ್ತಾರೆ. ತನ್ನ ಕೊಂಬುಗಳಲ್ಲಿದ್ದ ಸೂರ್ಯ ಚಂದ್ರರನ್ನು ನಿರೂಪಕನ ಅಂಡಿಗೆ ಲಗತ್ತಿಸುವ ಹಸು ಭಾರ ಕಳೆದುಕೊಂಡು ಹಗುರಾಗುತ್ತದೆ. 'ಹಸುವೆಂದರೆ ದೇವಾನುದೇವತೆಗಳ ಆವಾಸಸ್ಥಾನ/ ಹಸುವಿಗೆ ಆವಾಸಸ್ಥಾನ ನನ್ನ ಕೊಟ್ಟಿಗೆ' ಎಂಬಂತಹ ಸಾಲುಗಳಲ್ಲಿ ಅರ್ಥಸಾಧ್ಯತೆಯನ್ನು ಚೆನ್ನಾಗಿಯೇ ದುಡಿಸಿಕೊಳ್ಳಲಾಗಿದೆ. ಪೂರ್ತಿ ಪದ್ಯದ ಮಾದರಿಯ ಈ ಪದ್ಯಗಳಲ್ಲಿರುವ ಈ ಬಗೆಯ ಅರ್ಥ ಸಾಧ್ಯತೆಗಳೇ ಅದಕ್ಕೆ ಕಾವ್ಯ ಗುಣವನ್ನು ತಂದುಕೊಟ್ಟಿವೆ.

ಎರಡನೇ ಪದ್ಯವಾದ 'ಬೆಕ್ಕಿಗೆ ಕನಸು ಬಿದ್ದರೆ' ಎಂಬುದೂ ಕೂಡ ಇಂತಹ ಚಿಂತನಾರ್ಹ ಗುಣವನ್ನು ಬಳಸಿಕೊಂಡಿದೆ. ಮಕ್ಕಳು ಬರೆಯುವ ಕಲ್ಪನಾತ್ಮಕ ವರ್ಣನೆಗಳಂತಿರುವ ಪದ್ಯ ಕೊನೆಯಲ್ಲಿ ಹುಟ್ಟಿಸುವ ಅರ್ಥಗಳು ಮಾತ್ರ ಗಹನವಾಗಿವೆ. ಬೆಕ್ಕಿಗೆ ಹುಲಿ ಗಾತ್ರ ಗಳಿಸಿದಂತೆ ಕನಸು ಬಿದ್ದರೆ ಏನು ಉಪಯೋಗ ಎಂಬುದು ಈ ಪದ್ಯದ ಜಿಜ್ಞಾಸೆ. ಆಗ ಅದರ ಪರಿಸರದ ಇತರೆ ಜೀವಿಗಳು ಕೂಡ ಅದರದೇ ಅನುಪಾತದಲ್ಲಿ ಗಾತ್ರ ಗಳಿಸಿಕೊಳ್ಳುತ್ತವಾದರೆ ಬೆಕ್ಕು ಹುಲಿಯ ಗಾತ್ರ ಗಳಿಸಿಕೊಂಡ ಮೇಲೂ ಇಲಿ ಹಿಡಿಯುವ ಕೆಲಸವನ್ನೇ ಮಾಡಬೇಕಾಗುತ್ತದೆ. ಆದ್ದರಿಂದ ಅಂತಹ ಕನಸು ಕಾಣುವ ಬದಲು ಈಗಿರುವಂತೆಯೇ ಇಲಿ ಹಿಡಿಯುತ್ತಾ, ಹಾಲು ಕುಡಿಯುತ್ತಾ ಇದ್ದರೆ ಸಾಲದೆ ಎಂಬುದು ಬೆಕ್ಕಿನ ನಿಲುವು.

ವಸ್ತುವನ್ನು ಚಿತ್ರಮಯವಾಗಿ, ವರ್ಣನಾತ್ಮಕ ಪದ-ಸಾಲುಗಳ ಮೂಲಕ ಇಲ್ಲಿನ ಯಾವುದೇ ಪದ್ಯವೂ ಮಂಡಿಸುವುದಿಲ್ಲ, ಬಳಕೆಯ ಮಾತುಗಳಿಂದ ಹಾಗೂ ಬೇಕೆಂತಲೇ ಅಸಾಹಿತ್ಯಿಕವಾದ ವಿವರಣೆಗಳ ಮೂಲಕವೇ ತನ್ನ ಅನುಭವ ಮಂಡನೆಯನ್ನು ಗಾಢಗೊಳಿಸಲು ಸಾಧ್ಯವಿಲ್ಲವೇ ಎಂಬ ಹುಡುಕಾಟದಲ್ಲಿ ಇಲ್ಲಿನ ಪದ್ಯಗಳು ತೊಡಗಿವೆ. ಇದು ಕವಿಯ ತಾತ್ವಿಕ ನಿಲುವೆಂಬಂತೆಯೂ ತೋರುತ್ತದೆ. ಉದಾಹರಣೆಗೆ ಇಪ್ಪತ್ತೈದನೇ ಪದ್ಯವನ್ನು ಗಮನಿಸಬಹುದು. ನವಿಲೆಂದರೆ ಕವಿಗೆ ಇಷ್ಟ. ಯಾಕೆಂದರೆ ಅದು ರಾಷ್ಟ್ರಪಕ್ಷಿ ಅದಕ್ಕೆ. 'ಮೋಡ ಗುರುಗುಟ್ಟಿ ಮಳೆ ಸುರಿದಾಗ/ ನವಿಲು ರೆಕ್ಕೆ ಅರಳಿಸಿ ಥಕ್ಕ ಥೈ ಕುಣಿಯುತ್ತದೆ/ಆಗ ಅದರ ಎದುರು ನಿಂತಿರಬೇಕು/ಹಿಂದೆ ಇದ್ದರೆ ಅಸಹ್ಯದ ಅಂಡು/ ನೋಡಿದ್ದಷ್ಟೇ ಲಾಭ'. ಇದರಲ್ಲೊಂದು ಚಮತ್ಕಾರಿಕ ಒಳನೋಟವಿದೆ. ಅದು ರಾಷ್ಟ್ರಪಕ್ಷಿಯಾದ್ದರಿಂದ ನನಗೆ ಅದನ್ನು ಕಂಡರೆ ಖುಷಿ ಎಂದು ಮಕ್ಕಳು ಹೇಳುವ ರೀತಿ ಹೇಳುವಲ್ಲಿ ವಿಡಂಬನೆ ತಾನಾಗಿ ಹುಟ್ಟಿಕೊಳ್ಳುತ್ತದೆ. ಈ ಅರ್ಥಗಳು ಹುಟ್ಟಿಯೇ ತೀರಬೇಕೆಂಬ ಹಟದಲ್ಲಿ ಇವುಗಳನ್ನು ನಿರ್ದೇಶಿಸಿ ಬರೆದಿಲ್ಲವಾದ್ದರಿಂದ ಅವು ಡಾಳಾಗಿ ಕ್ಲೀಷೆ ಅನ್ನಿಸುವುದಿಲ್ಲ.

ಬಸವನಹುಳು ಬಗ್ಗೆ ಇರುವ ಎಂಟನೇ ಪದ್ಯವೂ ಈ ರೀತಿಯ ಸೂಚ್ಯಾರ್ಥವನ್ನು ಮಂಡಿಸುವಲ್ಲಿ ಯಶಸ್ವಿಯಾಗಿದೆ. ವಸ್ತು ವಿಷಯಕ ವಿವರಣೆಗಳ ಸಾಧಾರಣ ಸಾಲುಗಳಲ್ಲಿ ಮುಂದುವರೆದ ಪದ್ಯ ಉಪ್ಪು ತಗುಲಿದರೆ ಮಾತ್ರ ಬಸವನಹುಳು ಲೋಳೆ ಕಕ್ಕಿ ಸಾಯುತ್ತದೆ ಎನ್ನುವಲ್ಲಿಗೆ ನಿಂತು ನಂತರದಲ್ಲಿ ಅದರ ಸೂಚ್ಯಾರ್ಥ ಸಾಧನೆಗೆ ತೊಡಗುತ್ತದೆ. 'ಉಪ್ಪಿನ ಋಣದ ನಮಗೆ ಇದು ಕೊಂಚ ಕಸಿವಿಸಿಯ ವಿಚಾರ/ ಬಸವನಹುಳುವನ್ನು ಸಂಕೇತವೆಂದು ಭಾವಿಸಬಾರದು/ಯಾಕೆಂದರೆ ಅದೊಂದು ಜೀವಿ' ಎನ್ನುವಲ್ಲಿ ಇಲ್ಲಿಯವರೆಗೆ ಬಸವನಹುಳುವಿನ ವಿವರಣೆಯಾಗಿದ್ದ ಪದ್ಯ ಹೇಳಬಯಸುತ್ತಿರುವ ಆಯಾಮವೊಂದನ್ನು ಸೂಚಿಸತೊಡಗುತ್ತದೆ. ಅದನ್ನೊಂದು ಸಂಕೇತವೆಂದು ಭಾವಿಸಬಾರದು ಎಂದು ಹೇಳುವ ನಿರಾಕರಣೆಯೇ ಅದನ್ನು ಸಂಕೇತವನ್ನಾಗಿ ನೋಡುವಂತೆ ಮಾಡುವ ಪರೋಕ್ಷ ಪ್ರೇರಣೆಯಾಗುತ್ತದೆ.

ಈ ಬಗೆಯಲ್ಲಿ ಅರ್ಥ ಧ್ವನಿಸುವ, ಹೊಸ ಬಗೆಯಲ್ಲಿ ಅಸ್ತಿತ್ವವನ್ನು ಪರಿಭಾವಿಸುವಂತೆ ಪ್ರೇರೇಪಿಸುವ ಹಲವು ಪದ್ಯಗಳಿರುವುದು ಈ ಸಂಕಲನದ ಮೌಲ್ಯವನ್ನು ಹೆಚ್ಚಿಸಿದೆ. ಚಿಪ್ಪು ಹಂದಿಯ ಬಗ್ಗೆ ಇರುವ ಹನ್ನೊಂದನೇ ಪದ್ಯ, ನಾಯಿ ಬಾಲದ ಒಂದನೇ ಪದ್ಯ, ಮಂಗನ ಬಗೆಗಿನ ಹದಿನೇಳನೇ ಪದ್ಯ, ಕಾಗೆ ಬಗೆಗಿನ ಹತ್ತೊಂಬತ್ತನೇ ಪದ್ಯ, ಮಿಂಚುಳ್ಳಿ ಬಗ್ಗೆ ಇರುವ ಇಪ್ಪತ್ತಮೂರನೇ ಪದ್ಯ, ಬಾವಲಿ ಬಗೆಗಿನ ಇಪ್ಪತ್ತೇಳನೇ ಪದ್ಯ ಮುಂತಾದವು ಈ ಸಂಕಲನದ ಅರ್ಥಪೂರ್ಣ ಪದ್ಯಗಳಾಗಿವೆ.

ಸರಳ ರಚನೆ, ಗಹನ ಜಿಜ್ಞಾಸೆ, ಆಳದಲ್ಲಿ ಅಡಗಿಸಿಟ್ಟಿರುವ ವೈನೋದಿಕ ವಿಡಂಬನೆ, ಬದುಕಿನ ಬಗ್ಗೆ ಪ್ರೀತಿ ಮತ್ತು ಕೃತಜ್ಞತೆ, ಸುತ್ತಲಿನ ಬಗ್ಗೆ ಜಡಗೊಂಡಿಲ್ಲದ ನಿಲುವು ಮುಂತಾದ ಹಲವು ಅಂಶಗಳು ಈ ಸಂಕಲನದ ಬರಹಗಳ ಹಿಂದಿನ ಪ್ರೇರಣೆಯಾಗಿದ್ದು, ಇವು ಕವಿತೆಗಳೇ ಯಾಕಾಗಬೇಕು ಎಂಬಂತೆ ಬರೆಯುತ್ತಲೇ ಪ್ರಯೋಗಾತ್ಮಕ ಪ್ರಯತ್ನವನ್ನು ಮಾಡುತ್ತಿರುವ ಹುಡುಗಾಟಿಕೆಯ ಮನಸ್ಸಿನ, ಗಂಭೀರ ಕಾಳಜಿಗಳ ಅಭಿವ್ಯಕ್ತಿಯಾಗಿ ಸ್ವಾಗತಾರ್ಹವಾಗಿವೆ.

● ಡಾ. ಬಂಜಗೆರೆ ಜಯಪ್ರಕಾಶ

ದಮನ

ಉರ್ದು ಮೂಲ : ಅಲಿ ಸರ್ದಾರ್ ಜಾಫ್ರಿ
ಕನ್ನಡಕ್ಕೆ : ಜ.ನಾ. ತೇಜಶ್ರೀ


ನೀಲಿಬಾನು, ಹಸಿರುಭೂಮಿ
ರಾತ್ರಿಯ ಹಾಸಿಗೆಯೊಳಗೆ ತಂಗುತ್ತವೆ,
ಕಡುಗೆಂಪಿನ ಮೃದುಸಂಜೆಯ ನೆರಳುಗಳು
ಈ ಕತ್ತಲಿನೊಳಗೆ ಕರಗಿಹೋಗುತ್ತವೆ

ಮನೆಯಿಲ್ಲದ ಹುಡುಗಿ, ರೈತನ ಮಗಳು
ದುಃಖಿ, ತನ್ನ ಯೋಚನೆಗಳೊಳಗೆ
ಕಳೆದುಹೋಗಿದ್ದಾಳೆ,
ಚಿಂದಿಬಟ್ಟೆ ಅಡ್ಡಾದಿಡ್ಡಿಯಾಗಿ ಅವಳ ಸುತ್ತಿಕೊಂಡಿದೆ
ರಸ್ತೆಯ ತಿರುವಿನಲ್ಲಿ ನಿಂತಿದ್ದಾಳೆ ಅವಳು ನಿಶ್ಚಲವಾಗಿ

"ನಾನೆಲ್ಲಿಗೆ ಹೋಗಬಲ್ಲೆ?
ಓ ಪ್ರಿಯ ದೇವರೆ, ಈ ರಾತ್ರಿ ಸರಕ್ಕನೆಂಬಂತೆ
ಸರಿದುಬಿಡಲಿ,
ಆಕಾಶವೆ ನನ್ನ ತಲೆಯ ಮೇಲೆ ಬೀಳಲಿ,
ಭೂಮಿ ಬಾಯ್ತೆರೆದು ನನ್ನ ನುಂಗಿ ಬಿಡಲಿ."


ತುಕ್ಕು ಹಿಡಿದ ಜೀಪೊಂದು ತಡೆದು ನಿಲ್ಲುತ್ತದೆ
ನಾಗರಹಾವಿನ ಕೈ ಎಗರಿ ಬೀಳುತ್ತದೆ,
ಧೂಳಿನ ಮೋಡಗಳು
ಅವಳ ಅಸಹಾಯಕತೆಯ ಮರೆಮಾಚುತ್ತವೆ.

ಈಗಲೂ ಆ ದಾರಿಗಳಲ್ಲಿ ರಾತ್ರಿಯ ಹೊತ್ತು
ಸಂಕಟದ ಅಳುವನ್ನು ನೀವು ಕೇಳಬಹುದು,
ಕತ್ತಲಿನ ಕಪ್ಪು ಮಡಿಲಿನಲ್ಲಿ ಈಗಲೂ
ಮುಗ್ಧರಕ್ತದ ಹನಿಗಳು ತೊಟ್ಟಿಕ್ಕುತ್ತವೆ.



ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 19



ಅಕ್ಷರ ರೂಪ: **ಅಕ್ಷತಾ ಕೆ.**

ಹೆದ್ದೂರು ಭೂ ಹೋರಾಟ

1984ರಲ್ಲಿ ತೀರ್ಥಹಳ್ಳಿ ರೈತ ಸಂಘದಿಂದ ಹೆದ್ದೂರು ಭೂಹೀನರ ಚಳವಳಿಯನ್ನು ಕೈಗೆತ್ತಿಕೊಂಡೆವು. ತೀರ್ಥಹಳ್ಳಿ ತಾಲ್ಲೂಕಿನ ಕಟ್ಟೆಹಕ್ಕಲು ಬಳಿ ಇರುವ ಹೆದ್ದೂರು ಗ್ರಾಮದ ನದಿ ದಂಡೆಯಲ್ಲಿ ರಾಜ್ಯ ಅರಣ್ಯ ಇಲಾಖೆಗೆ ಸೇರಿದ ನೂರೈವತ್ತು ಎಕರೆ ಜಮೀನಿತ್ತು. ಆ ಸಂದರ್ಭದಲ್ಲಿ ರೈತ ಸಂಘದ ಚಟುವಟಿಕೆಗಳು ತಾಲ್ಲೂಕಿನಲ್ಲಿ ತೀವ್ರವಾಗಿ ನಡೆಯುತಿದ್ದು, ರೈತ ಸಂಘದವರು ಮನಸು ಮಾಡಿದರೆ ಈ ಜಮೀನನ್ನು ಊರಿನ ಭೂರಹಿತರಿಗೆ ಕೊಡಿಸಬಹುದು ಎಂದು ಆಲೋಚಿಸಿದ ಕೆಲವರು ನಮ್ಮ ಬಳಿ ಬಂದು ಈ ವಿಷಯ ಪ್ರಸ್ತಾಪಿಸಿದರು. ಆದಾಗಲೇ ಅಲ್ಲಿನ ಕೆಲವು ಶ್ರೀಮಂತರ ಕಣ್ಣು ಈ ಜಮೀನಿನ ಮೇಲೆ ಬಿದ್ದಿದ್ದು ಅವರು ತಮ್ಮ ಪ್ರಭಾವ ಬಳಸಿ ಜಮೀನನ್ನು ಕೈವಶ ಮಾಡಿಕೊಳ್ಳುವ ಹವಣಿಕೆಯಲ್ಲಿದ್ದರು. ಜಮೀನಿದ್ದವರಿಗೆ ಮತ್ತೊಂದಷ್ಟು ಜಮೀನು ಯಾಕೆ ಹೋಗಬೇಕು ಬದಲಾಗಿ ಭೂಮಿಯೇ ಇಲ್ಲದವರಿಗೆ ಈ ಜಾಗ ಹಂಚಿಕೆಯಾಗಲಿ ಎಂದು ಬಯಸಿದ ನಾವು ಭೂರಹಿತರಿಗೆ ಈ ಜಮೀನು ಹಂಚಿಕೆಯಾಗಬೇಕೆಂದು ಒತ್ತಾಯಿಸಿ ಹೋರಾಟ ಪ್ರಾರಂಭಿಸಿದೆವು. ಬಹುಶಃ ಶಿವಮೊಗ್ಗ ಜಿಲ್ಲೆಯಲ್ಲಿ ರೈತ ಸಂಘವು ಭೂಹೀನರ ಪರವಾಗಿ ಮಾಡಿದ ಮೊದಲ ಚಳವಳಿ ಇದು.

ಹೆದ್ದೂರಿನ ರೈತ ಸಂಘದ ಮುಖಂಡರಾದ ಪುಟ್ಟೇಗೌಡ, ರಾಮಣ್ಣ, ನೇರ್ಲೆ ಮಂಜುನಾಥ ಮತ್ತಿತರರು ಈ ಹೋರಾಟದ ನೇತೃತ್ವ ವಹಿಸಿದ್ದರು. ನಾವು ಈ ಚಳವಳಿಯನ್ನು ಕೈಗೆತ್ತಿಕೊಳ್ಳುವ ಮೊದಲೇ ಆ ಊರಿನ ಕೆಲವು ಮುಸ್ಲಿಂ ಕುಟುಂಬಗಳು ಈ ಜಾಗವನ್ನು ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಅಲ್ಲಿದ್ದ ಕಾಡನ್ನು ಸವರಿ ಭೂಮಿ ಮಟ್ಟ ಮಾಡಲು ತೊಡಗಿದ್ದರು. ಅವರುಗಳಲ್ಲಿ ಫಾತಿಮಾ, ಅಬೂಬಕರ್, ರೆಹಮುನ್ನೀಸಾ ಮತ್ತಿತರ ಕುಟುಂಬಗಳು ಮುಖವಾದವು. ಅವರೆಲ್ಲರೂ ಭೂಹೀನರೇ ಆಗಿದ್ದರಿಂದ ಅವರನ್ನು ನಮ್ಮ ಈ ಚಳವಳಿಗೆ ಸೇರಿಸಿಕೊಂಡೆವು. ಅವರಿಗೂ ಯಾವಾಗ ರೈತ ಸಂಘದವರು ತಮ್ಮ ಜೊತೆ ಇದ್ದಾರೆ ಎಂದು ಖಾತ್ರಿಯಾಯಿತೋ ಭೂಮಿ ಸಿಗುವ ಬಗ್ಗೆ ವಿಶ್ವಾಸ ಬಂದು ನಮ್ಮ ಜೊತೆ ಹೋರಾಟದಲ್ಲಿ ಪಾಲ್ಗೊಂಡರು. ಇವರಷ್ಟೆ ಅಲ್ಲ ಸ್ವತಃ ಅಲ್ಲಿನ ಫಾರೆಸ್ಟ್ ಗಾರ್ಡ್ ಸಹ ಈ ಹೋರಾಟದಲ್ಲಿ ಪಾಲ್ಗೊಂಡ. ಅವನು ಸ್ವತಃ ಭೂರಹಿತನಾಗಿದ್ದು ಹೋರಾಟ ಮಾಡಿದರೆ ತನಗೂ ಒಂದಿಷ್ಟು ಭೂಮಿ ಸಿಗಬಹುದು ಎಂಬ ಆಸೆಯಿಂದ.

ಹೋರಾಟದ ಮೊದಲ ಹಂತವಾಗಿ ಆ ಜಾಗಕ್ಕೆ ರಾಮಮನೋಹರ ಲೋಹಿಯಾ ನಗರ ಎಂದು ಹೆಸರಿಟ್ಟು ಒಬ್ಬರಿಗೆ ಇಂತಿಷ್ಟು ಎಂದು ಭೂಮಿಯನ್ನು ಹಂಚಿಕೊಟ್ಟೆವು. ಅವರು ದಿನಾ ಬಂದು ಅಲ್ಲಿದ್ದ ಕಾಡನ್ನು ಸವರಿ ಭೂಮಿ ಮಟ್ಟ ಮಾಡತೊಡಗಿದರು. ದೊಡ್ಡ ದೊಡ್ಡ ಮರಗಳನ್ನು ಯಾವುದೇ ಕಾರಣಕ್ಕೂ ಕಡಿಯಬಾರದೆಂದು ಹೋರಾಟಗಾರರಿಗೆ ಅಣತಿ ಮಾಡಿದ್ದೆವು. ಊರಿನಲ್ಲಿ ಬಹಳಷ್ಟು ಜನ ಭೂರಹಿತರೇ ಇದ್ದು ಅವರೆಲ್ಲ ಈ ಹೋರಾಟದಲ್ಲಿ ಪಾಲ್ಗೊಂಡರು. ಹೆಂಗಸರು ಬಹಳಷ್ಟು ಸಂಖ್ಯೆಯಲ್ಲಿದ್ದರು. ಅರಣ್ಯ ಇಲಾಖೆಯು ಸರ್ಕಾರಿ ಜಮೀನಿನಲ್ಲಿ ಅಕ್ರಮ ಪ್ರವೇಶ ಮಾಡಿದ್ದಾರೆಂದು ಆರೋಪಿಸಿ ಈ ಹೋರಾಟಗಾರರ ಮೇಲೆ ಕೇಸ್ ಹಾಕಿತು. ಪೊಲೀಸರು ಬಂದು ಜಮೀನಿನಲ್ಲಿ ಕಾಡು ಸವರುವಲ್ಲಿ ನಿರತರಾಗಿದ್ದ ಎಲ್ಲರನ್ನು ಬಂಧಿಸಿ ಕೋರ್ಟ್‌ಗೆ ಕರೆದೊಯ್ದರು. ಕೋರ್ಟ್ ಇವರೆಲ್ಲರಿಗೂ ನ್ಯಾಯಾಂಗ ಬಂಧನಕ್ಕೆ ಆದೇಶಿಸಿತು. ಪೊಲೀಸರು ಇವರನ್ನು ಜೈಲಿಗೆ ಹಾಕಲು ಶಿವಮೊಗ್ಗಕ್ಕೆ ಕರೆತಂದರು. ನಮಗೆ ಅಷ್ಟೊತ್ತಿಗೆ ವಿಷಯ ತಿಳಿದು ಶಿವಮೊಗ್ಗ ಜೈಲಿನ ಬಳಿ ಅವರಿಗೆ ಕಾದು ನಿಂತೆವು.

ಈ ಹೋರಾಟದಲ್ಲಿ ಮುಸ್ಲಿಮರು ಭಾಗವಹಿಸಿದ್ದರು ಅಂದ್ನಲ್ಲ, ಅವರಲ್ಲಿ ಒಬ್ಬಳು ಹೆಣ್ಣುಮಗಳು - ಬಹುಶಃ ಫಾತಿಮಾ ಅಂತ ಅವಳ ಹೆಸರು ಇರಬೇಕು - ಅವಳಿಗೆ ಆರೇಳು ತಿಂಗಳ ಚಿಕ್ಕ ಮಗುವಿತ್ತು, ಅದನ್ನು ಮನೆಯಲ್ಲಿ ಬಿಟ್ಟು ಆಕೆ ದಿನಾ ಬಂದು ನಮ್ಮೀ ಭೂಹೋರಾಟದಲ್ಲಿ ಪಾಲ್ಗೊಳ್ಳುತಿದ್ದಳು. ಪೊಲೀಸರು ಅರೆಸ್ಟ್ ಮಾಡೋ ಸಂದರ್ಭದಲ್ಲಿ ಅವಳು ಇದ್ದಳು. ಉಳಿದವರ ಜೊತೆ ಅವಳು ಅರೆಸ್ಟ್ ಆದಳು. ಅಲ್ಲಿಂದ ತೀರ್ಥಹಳ್ಳಿ ಕೋರ್ಟ್‌ಗೆ ಕರ್‍ಕೊಂಡು ಹೋದ್ರಲ್ಲ, ಮನೆಯಲ್ಲಿ ಆ ಮಗು ತಾಯಿಯಿಲ್ಲದೆ ಏನು ಹಠ ಮಾಡಿತೋ ಅವಳ ಗಂಡ ಮಗುವನ್ನು ಎತ್ತಿಕೊಂಡು ತೀರ್ಥಹಳ್ಳಿಗೆ ಕರೆದುಕೊಂಡು ಬಂದ. ಅಷ್ಟೊತ್ತಿಗಾಗಲೆ ಕೋರ್ಟಿನಲ್ಲಿ ವಿಚಾರಣೆ ಮುಗಿದು ಶಿವಮೊಗ್ಗ ಜೈಲಿಗೆ ಕರೆದುಕೊಂಡು ಹೊರಟಿದ್ದರು. ಗಂಡನಿಂದ ಮಗುವನ್ನು ಪಡೆದುಕೊಂಡ ಆಕೆ ಅದನ್ನು ಕರೆದುಕೊಂಡೆ ಜೈಲಿಗೆ ಹೊರಟಳು.

ಹಾಲು ಕುಡಿಯೋ ಮಗು ಇರುವ ತಾಯಿಯನ್ನು ವಿಶೇಷ ಸಂದರ್ಭದಲ್ಲಲ್ಲದೆ ಬೇರೆ ಹೊತ್ತಲ್ಲಿ ಜೈಲಿಗೆ ಹಾಕುವ ಹಾಗಿಲ್ಲ. ಜೈಲಿನ ಸೂಪರಿಂಟೆಂಡಂಟ್‌ಗೆ ಕಂಕುಳಲ್ಲಿ ಹಾಲು ಕುಡಿಯೋ ಕೂಸನ್ನು ಎತ್ತಿಕೊಂಡು ಜೈಲು ಸೇರಲು ಬಂದವಳನ್ನು ನೋಡಿ ಪರಿಸ್ಥಿತಿಯ ಅರಿವಾಯಿತು. ಅವನಿದ್ದೋನು "ನಿಮ್ಮನ್ನ ಅರೆಸ್ಟ್ ಮಾಡಬಾರದಿತ್ತು, ಕಾನೂನಿಗೆ ವಿರುದ್ಧ ಆಗತ್ತೆ. ಏನೋ ಗೊತ್ತಿಲ್ದೆ ಅರೆಸ್ಟ್ ಮಾಡಿದಾರೆ. ನೀನು ವಾಪಸ್ ಹೋಗಮ್ಮ" ಎಂದು ಹೇಳಿದರೂ ಈ ಹೆಣ್ಣುಮಗಳು ಒಪ್ಪದೆ ತಾನು ಮಗುವನ್ನು ಕರ್‍ಕೊಂಡೆ ಜೈಲಿಗೆ ಹೋಗೋದೆ ಸೈ ಎಂದು ಹಠ ಹಿಡಿದಳು. ಮಗುವನ್ನು ಜೈಲಿನೊಳಗಡೆ ಒಯ್ಯಲು ಪೊಲೀಸರು ಒಪ್ಪಲಿಲ್ಲ.

ಅಲ್ಲೆ ಇದ್ದ ನಾನು ಮಗುವಿನೆಡೆಗೆ ಕೈ ಚಾಚಿದ ಕೂಡಲೇ ಅದು ಖುಷಿಯಿಂದ ನನ್ನ ಹತ್ತಿರ ಬಂತು. ಮಗುವಿನ ಜವಾಬ್ದಾರಿಯನ್ನು ನಾನು ವಹಿಸಿಕೊಂಡಿದ್ದರಿಂದ ಆ ತಾಯಿ ಸಂತೋಷದಿಂದ ಜೈಲಿಗೆ ಹೋದಳು. ನಾನು ಮಗುವನ್ನು ಕರೆದುಕೊಂಡು ನನ್ನ ತಮ್ಮ ಗೋಪಾಲನ ಮನೆಗೆ ಬಂದೆ. ಆ ರಾತ್ರಿ ಮಗುವಿನ ಜೊತೆ ನಾನು ಅಲ್ಲಿಯೇ ಉಳಿದುಕೊಂಡೆ. ಚಿಕ್ಕ ಮಗುವಾದ್ದರಿಂದ ಸಂಭಾಳಿಸಲು ಕಷ್ಟವಾಗ್ತಿತ್ತು. ನನ್ನನ್ನು ಬಿಟ್ಟು ಯಾರ ಹತ್ರಾನು ಆ ಮಗು ಹೋಗ್ತಾನು ಇರಲಿಲ್ಲ. ಅರ್ಧರಾತ್ರಿಯಲ್ಲಿ ನೋಡಿದರೆ ಕಕ್ಕಸ್ ಮಾಡಿಕೊಂಡು ಗೋಡೆಗೆ ಹಚ್ಚಿಟ್ಟಿದೆ. ಆಮೇಲೆ ನೀರು ಸುರಿದು ನಾನೇ ಎಲ್ಲ ಕ್ಲೀನ್ ಮಾಡಬೇಕಾಯಿತು. ನನ್ನ ತಮ್ಮನ ಮನೆಯವರು ಇಂಥ ಗೋಳೆಲ್ಲ ಯಾಕೆ ಕಟ್ಟಿಕೊಳ್ತೀಯ ಎಂದು ಬಯ್ಯತೊಡಗಿದರು.

ಒಂದು ಸರ್ತಿ ಜೈಲಿಗೆ ಯಾರನ್ನಾದರೂ ಹಾಕಿದರೆ ಕೋರ್ಟಿನ ಆದೇಶ ಬರೋ ತನಕ ಅವರ ಬಿಡುಗಡೆ ಸಾಧ್ಯವಿಲ್ಲ. ಇಲ್ಲಿ ನೋಡಿದರೆ ಆ ಮಗುವಿನ ಹೊಟ್ಟೆಗೆ ತಾಯಿ ಹಾಲಿನ ಜೊತೆ ಏನು ಕೊಡ್ತಾರೆ ಅಂತೆಲ್ಲ ಗೊತ್ತೇ ಇರಲಿಲ್ಲ. ತಾಯಿಯ ಹಾಲಿಲ್ಲ, ಹಾಲು ಕೊಟ್ಟರೆ ಕುಡಿತಿರಲಿಲ್ಲ, ಹಿಂಗೆ ಆದರೆ ಮಗು ಬದುಕಿರಲ್ಲ ಅಂತೆಲ್ಲ ಹೇಳತೊಡಗಿದರು. ನನಗೆ ತಲೆ ಕೆಟ್ಟಂತಾಗಿ ಮರುದಿನ ಬೆಳಿಗ್ಗೆಯೇ ಒಂದು ಟ್ಯಾಕ್ಸಿ ಮಾಡಿಸಿಕೊಂಡು ಮಗುವನ್ನು ಕರೆದುಕೊಂಡು ಶಿವಮೊಗ್ಗದಿಂದ ತೀರ್ಥಹಳ್ಳಿ ಕೋರ್ಟ್‌ಗೆ ಹೋದೆ. ಅಲ್ಲಿ ಮ್ಯಾಜಿಸ್ಟ್ರೇಟ್ ಎದುರು ಮಗುವನ್ನಿಟ್ಟು ಪರಿಸ್ಥಿತಿ ವಿವರಿಸಿದೆ. ಅವರಿದ್ದೋರು "ನಿನ್ನೆ ಕೋರ್ಟ್‌ಗೆ ಹಾಜರುಪಡಿಸಿದಾಗ ಯಾಕೆ ಈ ವಿಷಯ ತಿಳಿಸಲಿಲ್ಲ, ಆ ಹೆಂಗಸಿನದೆ ಮಗು ಎಂದು ಹೇಗೆ ನಂಬೋದು?" ಎಂದೆಲ್ಲ ಪ್ರಶ್ನೆ ಮಾಡಿದರು. ಆಮೇಲೆ ಹೋರಾಟಗಾರರನ್ನು ಬಂಧಿಸಿದ ಸಬ್ ಇನ್ಸ್‌ಪೆಕ್ಟರ್‌ಗೆ ಕೋರ್ಟಿಗೆ ಬರಲು ಕರೆಕಳಿಸಿ ವಿಚಾರಣೆ ಮುಂದೆ ಹಾಕಿದರು. ಸಂಜೆ ಹೊತ್ತಿಗೆ ಇನ್ಸ್‌ಪೆಕ್ಟರ್ ಹಾಜರಾದರು. ಮ್ಯಾಜಿಸ್ಟ್ರೇಟ್ ಇದ್ದವರು "ಕಾನೂನಿಗೆ ವಿರುದ್ಧವಾಗಿ ಯಾಕೆ ಇಷ್ಟು ಚಿಕ್ಕ ಮಗುವಿನ ತಾಯಿಯನ್ನು ಅರೆಸ್ಟ್ ಮಾಡಿದ್ರಿ? ನನ್ನ ಮಾಹಿತಿಗೆ ತರದೆ ಈ ಕೆಲಸ ಮಾಡಿದ್ದೀರಿ ಎಂದು ನಾನು ಬರೆದು ಹಾಕ್ತೀನಿ. ನೀವಾಗ ಜೈಲಿಗೆ ಹೋಗಬೇಕಾಗತ್ತೆ, ಅನುಭವಿಸಿಕೊಳ್ಳಿ" ಎಂದು ಸಬ್‌ಇನ್ಸ್‌ಪೆಕ್ಟರ್‌ಗೆ ಸಿಟ್ಟಿನಿಂದ ಹೇಳಿದರು. "ಏನೋ ತಪ್ಪಾಗಿದೆ, ನೀವೇ ಏನಾದರು ಮಾಡಿ ಸರ್" ಎಂದು ಸಬ್‌ಇನ್ಸ್‌ಪೆಕ್ಟರ್ ಕೈ ಮುಗಿದು ನಿಂತು ಬಿಟ್ಟರು. ಅವತ್ತು ಕೋರ್ಟಿನ ಆವರಣದಲ್ಲಿದ್ದ ಜನಕ್ಕೆಲ್ಲ ದರ್ಪ ಮಾಡ್ತಿದ್ದ ಸಬ್ ಇನ್ಸ್‌ಪೆಕ್ಟರ್ ಕೈಮುಗಿದು ನಿಂತಿರುವ ದೃಶ್ಯ ಬಿಟ್ಟಿ ಮನರಂಜನೆ ನೀಡಿತ್ತು. ಮ್ಯಾಜಿಸ್ಟ್ರೇಟ್ ಅಲ್ಲಿಗೂ ಬಿಡಲಿಲ್ಲ, "ಹೀಗೆ ನೀವು ಜವಾಬ್ದಾರಿಯಿಂದ ನುಣುಚಿಕೊಳ್ಳಲು ಆಗೋದಿಲ್ಲ, ಈಗ ಆಗಿರೋ ತಪ್ಪನ್ನು ಸರಿಪಡಿಸಲಿಕ್ಕೆ, ನೀವು ಕೇಸ್ ಹಾಕಿದ್ದನ್ನೆ ವಾಪಸ್ ತಗೋಬೇಕು, ಹಾಗೆ ಮಾಡಿ" ಎಂದು ಆದೇಶ ಕೊಟ್ಟೇ ಬಿಟ್ಟರು. ಇನ್ಸ್‌ಪೆಕ್ಟರ್ ಇದ್ದವರು "ಸರ್, ಕೇಸ್ ಹಾಕಿದ್ದು ನಾವಲ್ಲ, ಅರಣ್ಯ ಇಲಾಖೆಯವರು. ಈಗ ನಾವು ವಾಪಸ್ ತೆಗೆದುಕೊಳ್ಳಲು ಹೇಗೆ ಬರ್ತದೆ?" ಎಂದು ಕೇಳಿದರು. "ಮತ್ತೇನು ಮಾಡು ಅಂತೀರ? ಮಗುವಿನ ತಾಯಿಯನ್ನ ಅರೆಸ್ಟ್ ಮಾಡುವಾಗ ನಿಮ್ಮ ಬುದ್ಧಿ ಎಲ್ಲಿಹೋಗಿತ್ತು" ಎಂದು ಬಯ್ದು ಕೋರ್ಟ್ ಸಮಯ ಮುಗಿದಿದ್ದರಿಂದ ಏನೂ ಹೇಳದೆ ಕಲಾಪ ನಿಲ್ಲಿಸಿ ಮನೆಗೆ ಹೋದರು.

ನನಗೆ ಪೂರ್ತಿ ತಲೆ ಕೆಟ್ಟಿತ್ತು. ಏನಾದ್ರೂ ಆಗಲಿ ಎಂದು ಮಗುವನ್ನು ಕರೆದುಕೊಂಡು ಮ್ಯಾಜಿಸ್ಟ್ರೇಟ್‌ರ ಮನೆಗೆ ಹೋದೆ. ಮಗುವನ್ನು ನೋಡಿ ಅವರಿಗೆ ಏನೆನ್ನಿಸಿತೋ? "ಈ ಮಗುವಿನ ತಾಯಿಯನ್ನು ಯಾವುದೇ ಷರತ್ತಿಲ್ಲದೆ ಕೂಡಲೇ ಬಿಡುಗಡೆ ಮಾಡುವುದು" ಎಂದು ತಮ್ಮ ಕೈ ಬರಹದಲ್ಲೆ ಬರೆದುಕೊಟ್ಟರು.


ಅದನ್ನು ತೆಗೆದುಕೊಂಡು ಶಿವಮೊಗ್ಗೆಯ ಜೈಲಿಗೆ ಬಂದು ಆ ತಾಯಿಯನ್ನು ಬಿಡಿಸಿದೆ. ಮಗುವಿಗೆ ಹಾಲು ಕುಡಿಸಿದ ಆಕೆ ನನ್ನ ಕೈಲಿ ಮಗು ಕೊಟ್ಟು ಜೈಲಿನೊಳಗೆ ಹೋಗುತ್ತೇನೆ ಎಂದು ಹಠ ಹಿಡಿದಳು. ಜೈಲಿನ ಅಧಿಕಾರಿ "ಹಂಗೆಲ್ಲ ಮತ್ತೆ ಒಳಗೆ ಬಿಡಕ್ಕೆ ಆಗಲ್ಲ, ಮೊದಲು ಮಗುವನ್ನು ಕರೆದುಕೊಂಡು ಮನೆಗೆ ಹೋಗಿ" ಎಂದು ಆದೇಶಿಸಿದರು. ಆ ತಾಯಿಗೆ ಆತಂಕ: ಜೈಲಿಂದ ತಾನು ವಾಪಸ್ ಹೋದರೆ ನಾಳೆ ಹೋರಾಟಕ್ಕೆ ಬರಲಿಲ್ಲ ಎಂಬ ಕಾರಣವೊಡ್ಡಿ ತಮಗೆ ಭೂಮಿ ಕೊಡದಿದ್ದರೆ ಅಂತ. "ನೋಡಿ, ನೀವು ಭೂಮಿಗಾಗಿ ಪ್ರಾಮಾಣಿಕವಾಗಿ ಹೋರಾಟಾನೂ ಮಾಡಿದೀರಿ, ಜೈಲೂ ಸೇರಿದ್ದೀರಿ. ಮಗು ಸಣ್ಣ ಇದೆ ಅನ್ನೋ ಒಂದೇ ಕಾರಣಕ್ಕೆ ಬಿಡುಗಡೆ ಮಾಡಿರೋದು. ಎಲ್ಲರಿಗೂ ಪರಿಸ್ಥಿತಿ ಅರ್ಥವಾಗುತ್ತೆ ಮಗುವನ್ನು ಕರೆದುಕೊಂಡು ಮನೆಗೆ ಹೋಗಿ. ಏನೂ ಆಗೋದಿಲ್ಲ, ನಿಮ್ಮ ಪಾಲಿನ ಜಮೀನು ನಿಮಗೆ ಸಿಗುತ್ತೆ" ಎಂದು ಭರವಸೆ ಕೊಟ್ಟ ಮೇಲೆ ಆ ತಾಯಿ ಮನೆಗೆ ಹೋಗಲು ಒಪ್ಪಿದ್ದು.

ಈ ಹೋರಾಟ ಬಹಳ ದಿನ ನಡೆಯಿತು. ಕೊನೆಗೆ ಅರಣ್ಯ ಇಲಾಖೆ ಒಂದು ಪ್ಲಾನ್ ಮಾಡಿ ಭೂಮಿಗಾಗಿ ಹೋರಾಟ ಮಾಡುತಿದ್ದವರಿಗೆ "ಹೊಳೆ ದಂಡೆಯಲ್ಲಿರುವುದರಿಂದ ಈ ಜಮೀನಿನಲ್ಲಿ ಪ್ರವಾಹ ಬರ್ತದೆ. ಸಾಗು ಮಾಡಲು ಇದು ಯೋಗ್ಯ ಭೂಮಿಯಲ್ಲ. ಬದಲಿಗೆ ಈ ಜಮೀನಿನಲ್ಲಿ ನಾವು ಅಕೇಶಿಯಾ ನರ್ಸರಿ ಮಾಡ್ತೀವಿ. ಇಲ್ಲಿ ಯಾರ್‍ಯಾರು ಜಮೀನು ಬೇಕಂತ ಹೋರಾಟ ಮಾಡ್ತೀದ್ದೀರೋ ಅವರಿಗೆಲ್ಲ ನರ್ಸರಿಯಲ್ಲಿ ಕೆಲಸ ಕೊಡುತ್ತೇವೆ. ನೀವು ಭೂ ಹೋರಾಟ ನಿಲ್ಲಿಸಿ" ಎಂದು ಷರತ್ತು ಹಾಕಿದರು. "ಜಮೀನಾದರೆ ನಿಮ್ಮ ಬಳಿ ಶಾಶ್ವತವಾಗಿ ಇರ್ತದೆ. ಅರಣ್ಯ ಇಲಾಖೆ ತನ್ನ ನರ್ಸರಿಯಲ್ಲಿ ಎಷ್ಟು ವರ್ಷ ಕೆಲಸ ಕೊಡಲು ಸಾಧ್ಯ? ಈ ಷರತ್ತಿಗೆ ಒಪ್ಪಬೇಡಿ, ಹೋರಾಟ ಮುಂದುವರೆಸೋಣ" ಎಂದು ರೈತಸಂಘ ಹೇಳಿದರೂ ಬಹಳಷ್ಟು ಜನರಿಗೆ ಅರಣ್ಯ ಇಲಾಖೆಯು ಕೆಲಸ ನೀಡುವ ಭರವಸೆಯೇ ಭೂಮಿಯ ಒಡೆತನಕ್ಕಿಂತ ಮೇಲು ಎನ್ನಿಸಿತು. ಈ ಭೂಹೋರಾಟದಲ್ಲಿ ತೊಡಗಿದ್ದ ಮುಸ್ಲಿಂ ಕುಟುಂಬಗಳು ಸೇರಿದಂತೆ ಕೆಲವರಿಗೆ ಹೋರಾಟ ಮುಂದುವರೆಸಿ ಭೂಮಿಯನ್ನೆ ಪಡೆದುಕೊಳ್ಳೋಣ ಎನ್ನಿಸಿದರೂ ಊರಿನ ಬಹುಸಂಖ್ಯಾತರ ನಿರ್ಧಾರಕ್ಕೆ ತಲೆಬಾಗಿ ಈ ಭೂ ಹೋರಾಟವನ್ನು ನಿಲ್ಲಿಸಿದರು. ■



ಹೋರಾಟದ ಮೊದಲ ಹಂತವಾಗಿ ಆ ಜಾಗಕ್ಕೆ ರಾಮಮನೋಹರ ಲೋಹಿಯಾ ನಗರ ಎಂದು ಹೆಸರಿಟ್ಟು ಒಬ್ಬರಿಗೆ ಇಂತಿಷ್ಟು ಎಂದು ಭೂಮಿಯನ್ನು ಹಂಚಿಕೊಟ್ಟೆವು. ಅವರು ದಿನಾ ಬಂದು ಅಲ್ಲಿದ್ದ ಕಾಡನ್ನು ಸವರಿ ಭೂಮಿ ಮಟ್ಟ ಮಾಡತೊಡಗಿದರು. ದೊಡ್ಡ ದೊಡ್ಡ ಮರಗಳನ್ನು ಯಾವುದೇ ಕಾರಣಕ್ಕೂ ಕಡಿಯಬಾರದೆಂದು ಹೋರಾಟಗಾರರಿಗೆ ಅಣತಿ ಮಾಡಿದ್ದೆವು. ಊರಿನಲ್ಲಿ ಬಹಳಷ್ಟು ಜನ ಭೂರಹಿತರೇ ಇದ್ದು ಅವರೆಲ್ಲ ಈ ಹೋರಾಟದಲ್ಲಿ ಪಾಲ್ಗೊಂಡರು. ಹೆಂಗಸರು ಬಹಳಷ್ಟು ಸಂಖ್ಯೆಯಲ್ಲಿದ್ದರು. ಅರಣ್ಯ ಇಲಾಖೆಯು ಸರ್ಕಾರಿ ಜಮೀನಿನಲ್ಲಿ ಅಕ್ರಮ ಪ್ರವೇಶ ಮಾಡಿದ್ದಾರೆಂದು ಆರೋಪಿಸಿ ಈ ಹೋರಾಟಗಾರರ ಮೇಲೆ ಕೇಸ್ ಹಾಕಿತು. ಬಹುಶಃ ಶಿವಮೊಗ್ಗ ಜಿಲ್ಲೆಯಲ್ಲಿ ರೈತ ಸಂಘವು ಭೂಹೀನರ ಪರವಾಗಿ ಮಾಡಿದ ಮೊದಲ ಚಳವಳಿ ಇದು.

▸▸▸ 6



ನಾನು ಗೆದ್ದ ಚುನಾವಣೆ

ಇನ್ನು ಜೈಕಾರ ಹಾಕುವವರು ಯಾರು? ಕನಿಷ್ಠ ಧಿಕ್ಕಾರ ಹಾಕಲಿಲ್ಲವಲ್ಲ ಎಂದು ಸಮಾಧಾನವಾಯಿತು. ಆದರೂ ಆಗ ಕೆಲವರು ನನ್ನನ್ನು ಕೆಕ್ಕರಿಸಿ ನೋಡಿದ ರೀತಿ ನನ್ನನು ಈಗಲೂ ಚುಚ್ಚುತ್ತಿದೆ. ಕೊನೆಗೂ ನಾಮಪತ್ರವನ್ನು ಸಲ್ಲಿಸಿ ಹೊರಬಂದೆ. ಅಲ್ಲಿಂದ ನಾನು ಕಾಂಗ್ರೆಸ್ ಕಚೇರಿಗೆ ತಲುಪಿದೆ. ಆ ಸಂದರ್ಭದಲ್ಲಿ ಒಬ್ಬೊಬ್ಬರೇ ನನ್ನ ಜತೆಯಾಗತೊಡಗಿರದರು. ಮುಖ್ಯವಾಗಿ, ಹಿರಿಯರಾದ ಕುಂಞಪಕ್ಕಿಯವರನ್ನು ಈ ಸಂದರ್ಭದಲ್ಲಿ ನೆನೆಯಬೇಕು. ಪಂಚಾತಿಕೆದಾರರು, ಗಣ್ಯರು, ಕಾಂಗ್ರೆಸ್‌ನ ಅಭಿಮಾನಿಗಳು ಆದ ಕುಂಞಪಕ್ಕಿ ನನ್ನ ಪರವಾಗಿ ಗಟ್ಟಿ ಗಂಟಲಿನಲ್ಲಿ ಮಾತನಾಡತೊಡಗಿದರು.

ಕಾಂಗ್ರೆಸ್ ಕಚೇರಿಯಲ್ಲಿ ಗದ್ದಲವೋ ಗದ್ದಲ. ಬ್ಲೇಸಿಯಸ್ ಡಿಸೋಜ ಆಗ ಕಾಂಗ್ರೆಸ್ ಅಧ್ಯಕ್ಷ. ಎಸ್.ಕೆ. ಅಮೀನ್ ಉಪಾಧ್ಯಕ್ಷ. ಮಸೂದ್ ಬಣ ಅವರನ್ನು ಹಿಡಿದು ಅಲುಗಾಡಿಸುತ್ತಿತ್ತು.

"ಇದಿನಬ್ಬರ ಹೆಸರು ಯಾಕೆ ಪ್ರಸ್ತಾಪಕ್ಕೆ ಬಂತು. ತಕ್ಷಣ ಪೂಜಾರಿಗೆ ಫೋನ್ ಮಾಡಬೇಕು. ಇಡೀ ಉಳ್ಳಾಲ ಕಾಂಗ್ರೆಸ್ ಮಸೂದ್‌ಗಾಗಿ ಕಾಯುತ್ತಿದೆ ಎಂದು ಹೇಳಬೇಕು" ಇತ್ಯಾದಿ ಒತ್ತಡಗಳನ್ನು ಹಾಕತೊಡಗಿದರು. ನನ್ನ ಪರವಾಗಿ ಗದ್ದಲವೆಬ್ಬಿಸಲು ಅಲ್ಲಿ ಯಾರೂ ಇದ್ದಿರಲಿಲ್ಲ. ನಾನು ಅದಕ್ಕೆಲ್ಲಾ ಮೂಕಸಾಕ್ಷಿಯಾಗಿದ್ದೆ.

ಪೂಜಾರಿಯಿಂದ ಫೋನ್ ಬಂತು. "ಮಸೂದ್‌ಗಾಗಿ ನಾನಿಲ್ಲಿ ಮಗನಿಗಿಂತಲೂ ಹೆಚ್ಚು ಕೆಲಸ ಮಾಡಿದ್ದೇನೆ. ಆದರೆ ಇದಿನಬ್ಬರ ಹೆಸರು ಪ್ರಕಟವಾಗಿದೆ. ಪತ್ರಿಕೆಗಳಿಗೂ ಬಿಡುಗಡೆಯಾಗಿದೆ. ಇನ್ನೇನೂ ಮಾಡುವಂತಿಲ್ಲ..."

ನಾನು ನೋಡುನೋಡುತ್ತಿದ್ದಂತೆಯೇ ನನ್ನ ಮುಂದೆ ನಾಲ್ಕೈದು ಕುರ್ಚಿಗಳು ಪುಡಿಪುಡಿಯಾದವು. ಗದ್ದಲಗಳು ಜೋರಾಯಿತು. 'ಮಸೂದರೇ ಅಭ್ಯರ್ಥಿಯಾಗಬೇಕು' ಎಂದು ಕೆಲವು ತರುಣರು ಘೋಷಣೆ ಕೂಗತೊಡಗಿದರು. ಅದಕ್ಕೆ ಕುಂಞಪಕ್ಕಿ "ಇದಿನಬ್ಬರ ಹೆಸರು ತೆಗೆದುಹಾಕಿದರೆ ಕಾಂಗ್ರೆಸ್ ಕಚೇರಿಯ ಬಾಗಿಲಲ್ಲೇ ಧರಣಿ ಕೂರುತ್ತೇನೆ" ಎಂದರು.

ಆಗ ಇನ್ನೋರ್ವ ಕಾಂಗ್ರೆಸ್ ನಾಯಕ ಹಮೀದ್ ಕಂದಕ್ ಮುಂದೆ ಬಂದು, ನನ್ನನ್ನು ಎಬ್ಬಿಸಿ ಹೊರಗೆ ಕರೆದೊಯ್ದರು. "ನೀವು ಮನೆಗೆ ಹೋಗಿ. ಇಲ್ಲಿರುವುದು ಸರಿಯಲ್ಲ. ಏನೂ ಹೆದರಬೇಡಿ. ಇಲ್ಲಿ ಗದ್ದಲ ಮಾಡುವವರು ಓಟು ಹಾಕುವವರಲ್ಲ. ನಿಮ್ಮನ್ನು ಗೆಲ್ಲಿಸುವ ಮತದಾರರು ಇವರಲ್ಲ" ಎಂದು ನನ್ನನ್ನು ಸಮಾಧಾನಿಸಿ ಬಸ್ ಹತ್ತಿಸಿದರು. ನಾನು ನೇರವಾಗಿ ಮನೆಗೆ ಬಂದೆ. ಆಗಲೂ ನನ್ನ ಹಿಂದೆ ಹಿಂಬಾಲಕರು ಇದ್ದಿರಲಿಲ್ಲ.

ಇದೇ ಸಂದರ್ಭದಲ್ಲಿ ನನ್ನ ಅಪಹರಣ, ಹಣದ ಆಮಿಷ ಮೊದಲಾದ ಗಾಳಿ ಸುದ್ದಿಗಳು ಕ್ಷೇತ್ರದಾದ್ಯಂತ ಹರಡಿತು. ನಾನು ಯಾವುದಕ್ಕೂ ಹಿಂದೆಗೆಯದೇ ಚುನಾವಣೆಗೆ ನಿಂತೇಬಿಟ್ಟೆ.

ಈ ಸಂದರ್ಭದಲ್ಲಿ ಇತರ ನಾಯಕರನ್ನು ಭೇಟಿಯಾಗುವುದು ನನ್ನ ಕರ್ತವ್ಯವಾಗಿತ್ತು. ಈ ಕಾರಣದಿಂದ ನಾನು ಮಾಜಿ ಶಾಸಕ ಯು.ಟಿ. ಫರೀದ್‌ರನ್ನು ಭೇಟಿಯಾದೆ. ಅವರ ಸಹಕಾರ ಕೋರಿದೆ. ಆದರೆ ಅವರು ಯಾವ ದಾಕ್ಷಿಣ್ಯವೂ ಇಲ್ಲದೆ "ನಾನು ಪಕ್ಷದ ಪ್ರಚಾರಕ್ಕೆ ಬರುವುದಿಲ್ಲ" ಎಂದು ಬಿಟ್ಟರು. ಅಷ್ಟೇ ಅಲ್ಲ, ಯಾವ ಪ್ರಚಾರಕ್ಕೂ ಅವರು ಬರಲಿಲ್ಲ. ಅವರಿಗೆ ಕಾಂಗ್ರೆಸ್ ಎಂದರೆ ಅಧಿಕಾರ ಮಾತ್ರವಾಗಿತ್ತು.

ಆ ಚುನಾವಣೆಯಲ್ಲಿ **9,028** ಮತಗಳ ಅಂತರದಲ್ಲಿ ಗೆದ್ದಿದ್ದೆ. ನನ್ನೆದುರು ಸ್ಪರ್ಧಿಸಿದ್ದ ಮುಸ್ಲಿಂ ಲೀಗ್ ಅಭ್ಯರ್ಥಿ ಠೇವಣಿ ಕಳೆದುಕೊಂಡಿದ್ದರು. ಈಗಲೂ ನಾನು ಆ ಚುನಾವಣೆಯ ಗೆಲುವನ್ನು ನೆನೆದುಕೊಳ್ಳುತ್ತೇನೆ. ಯಾವ ಹಿಂಬಾಲಕರು, ಚೇಲಾಗಳು, ಚಮಚಾಗಳಿಲ್ಲದೆ, ಹಣದ ಝಣಝಣ ಇಲ್ಲದೆ ಪ್ರಾಮಾಣಿಕ ಕಾರ್ಯಕರ್ತರ ಬಲಬೆಂಬಲದಿಂದ ನಾನು ಆ ಚುನಾವಣೆಯನ್ನು ಗೆದ್ದಿದ್ದೆ.

ಬದಲಾಗದ ದಲಿತರ ಸ್ಥಿತಿ

ಅವಿಭಕ್ತ ಕುಟುಂಬದಿಂದ ಬಂದ ನಾನು ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದಾಗ ನಮ್ಮ ಮನೆಯಲ್ಲಿ ಈರ, ರಾಮ ಮತ್ತು ಭೀಮ ಎಂಬ ಮೂವರು ದಲಿತ ಹುಡುಗರು ಜೀತಕ್ಕಿದ್ದರು. ಅವರಿಗಿಂತ ತುಂಬಾ ಕಿರಿಯವನಾದ ನನ್ನನ್ನು ಅವರು ಸ್ವಾಮಿ ಎಂದು ಸಂಬೋಧಿಸುತ್ತಿದ್ದುದು ನನಗೆ ಕುತೂಹಲ ಮೂಡಿಸುತ್ತಿತ್ತು. ಕಿರಿಯವನಾದ ನನ್ನನ್ನು ಅವರು ಸ್ವಾಮಿ ಎಂದು ಸಂಬೋಧಿಸುತ್ತಿದ್ದುದು ನನಗೆ ಕುತೂಹಲ ಮೂಡಿಸುತ್ತಿತ್ತು. ಈರನದ್ದು ಎಮ್ಮೆ, ರಾಮ ಗದ್ದೆ ಹೊಲದ ಕೆಲಸ ಮಾಡುತ್ತಿದ್ದರೆ, ಭೀಮ ತೋಟದ ಕೆಲಸ ನೋಡಿಕೊಳ್ಳುತ್ತಿದ್ದ. ಈರನದ್ದು ಎಮ್ಮೆ, ಆಕಳು, ದನಕರುಗಳನ್ನು ಮೇಯಿಸುವ ಕೆಲಸವಾಗಿತ್ತು. ಶಾಲೆಗೆ ರಜೆ ಇದ್ದಾಗ ನಾನು ಅವರೊಂದಿಗೆ ಬೆರೆತು ಗದ್ದೆ, ಹೊಲ ತೋಟದ ಕೆಲಸ, ದನಕರುಗಳನ್ನು ಮೇಯಿಸುವ ಅವರ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗುತ್ತಿದ್ದೆ. ದನಕರುಗಳನ್ನು ಮೇಯಿಸಲು ಕಾಡಿಗೆ ಹೋದಾಗಲಂತೂ ಈರ ನನಗೆ ಎಮ್ಮೆ ಸವಾರಿ ಮಾಡಿಸುತ್ತಿದ್ದ; ಕಾಡಿನಲ್ಲಿ ಹೇರಳವಾಗಿ ದೊರೆಯುತ್ತಿದ್ದ ನೇರಳೇ, ಕಾರೆ, ದೇವದಾರು, ಸೀತಾಫಲ ಮುಂತಾದ ಹಣ್ಣುಗಳನ್ನು ತಿನ್ನಿಸುತ್ತಿದ್ದ; ನಾಟಕದ ಪದ್ಯಗಳನ್ನು ಹೇಳಿಕೊಡುತ್ತಿದ್ದ.

ಅವರೊಂದಿಗೆ ನಾನು ಅತಿ ಸಲುಗೆಯಿಂದ ಇದ್ದದ್ದನ್ನು ಗಮನಿಸುತ್ತಿದ್ದ ನನ್ನ ಅಜ್ಜ ಮತ್ತು ಚಿಕ್ಕಪ್ಪ ಆಕ್ಷೇಪಿಸಿದಾಗ ನನಗೆ ತುಂಬಾ ಕಿರಿಕಿರಿ ಅನ್ನಿಸುತ್ತಿತ್ತು. ಹೊಲ ಗದ್ದೆಗಳಲ್ಲಿ ಅವರೊಂದಿಗೆ ಕೆಲಸದಲ್ಲಿ ಪಾಲ್ಗೊಂಡು ಸಾಯಂಕಾಲ ಮನೆಗೆ ಬಂದರೆ ಅಜ್ಜ ನನ್ನನ್ನು ಮನೆಯ ಅಂಗಳದಲ್ಲಿ ನಿಲ್ಲಿಸಿ ನನ್ನ ಮೇಲೆ ಗೋವಿನ ಗಂಜಲ ಪ್ರೋಕ್ಷಣೆ (ಸಿಂಪಡಿಸಿ) ಮಾಡಿ ಒಳಗೆ ಕರೆದುಕೊಳ್ಳುತ್ತಿದ್ದುದು ತುಂಬಾ ಮುಜುಗರದ ಸಂಗತಿಯಾಗಿತ್ತು. ಒಮ್ಮೆ ಈರನೊಂದಿಗೆ ಮೊಹರಂ ಹಬ್ಬದ ತಮಟೆ ಭಾರಿಸಿದ್ದಕ್ಕಾಗಿ ಚಿಕ್ಕಪ್ಪ ನನಗೆ ಹೊಡೆದು ಮನೆಯಿಂದ ಹೊರಗೆ ಹಾಕಿದ್ದ.

ಭೀಮ ತನ್ನ ಹಟ್ಟಿಯಲ್ಲಿದ್ದ ವಿಧವೆಯೊಬ್ಬಳನ್ನು ಪ್ರೀತಿಸಿ ಮದುವೆಯಾದ ಕಾರಣಕ್ಕೆ ಊರಿನ ಪ್ರಮುಖರು ಅವರ ಮೇಲೆ ಬಹಿಷ್ಕಾರ ಹಾಕಿದರು. ಆಗ ಅವರಿಬ್ಬರು ನಮ್ಮ ತೋಟದ ಚಿಕ್ಕ ಗುಡಿಸಲೊಂದರಲ್ಲಿ ಸಂಸಾರ ಆರಂಭಿಸಿದ್ದರು. ರಾಮ ಊರಿನ ಗಣ್ಯರ ಎದುರು ಸಾರ್ವಜನಿಕವಾಗಿ ಧೂಮಪಾನ ಮಾಡಿದ ಎಂಬ ಕಾರಣಕ್ಕೆ ಅವನಿಗೆ ದಂಡ ವಿಧಿಸಿದ್ದರು. ಸರ್ಕಾರದ ಯೋಜನೆಯಡಿ ದಲಿತರಿಗೆ ಹಂಚಬೇಕಾದ ಜಮೀನನ್ನು ಸುಳ್ಳು ಕಾರಣ ಸೃಷ್ಟಿಸಿ ಅವರಿಗೆ ದೊರೆಯದಂತೆ ವಂಚಿಸಿದ್ದರು. ಇದೆಲ್ಲ ಇನ್ನೂ ನನ್ನ ನೆನಪಿನಂಗಳದಿಂದ ಮರೆಯಾಗಿಲ್ಲ.

ಒಮ್ಮೆ ನಮ್ಮ ಹೊಲದಲ್ಲಿ ಬಾವಿ ತೋಡಲು ದಲಿತರ ತಂಡವೊಂದಕ್ಕೆ ಗುತ್ತಿಗೆ ನೀಡಲಾಯಿತು. ಆ ತಂಡ ಅತ್ಯಂತ ಶ್ರಮ ವಹಿಸಿ ಕೆಲವು ತಿಂಗಳುಗಳ ಕಾಲ ಬಾವಿಯಲ್ಲಿನ ಮಣ್ಣನ್ನು ತೆಗೆದು ಆಳಪಡಿಸಿತ್ತು. ಒಂದು ದಿನ ಬಾವಿಯಲ್ಲಿ ಇದ್ದಕ್ಕಿದ್ದಂತೆ ಚಿಲುಮೆಯಂತೆ ನೀರು ಹರಿಯಲಾರಂಭಿಸಿದ್ದನ್ನು ನೋಡಿದ ನನ್ನ ದೊಡ್ಡಪ್ಪ ಕೂಡಲೇ ದಲಿತ ಕಾರ್ಮಿಕರನ್ನು ಬಾವಿಯಿಂದ ಹೊರಗೆ ಕಳುಹಿಸಿದರು. ಅಷ್ಟೇ ಅಲ್ಲ, ಮನೆಯಿಂದ ಪೂಜಾ ಸಾಮಗ್ರಿಗಳನ್ನು ತರಿಸಿ ಗಂಗಾಜಲದಿಂದ ಬಾವಿಯನ್ನು ಶುದ್ಧೀಕರಿಸಿ ಇನ್ನು ಮುಂದೆ ಬಾವಿ ತೋಡಿದ್ದ ದಲಿತರ್‍ಯಾರೂ ಅಲ್ಲಿನ ನೀರನ್ನು ಮುಟ್ಟಕೂಡದು ಎಂದು ಕಟ್ಟಾಜ್ಞೆಯನ್ನು ವಿಧಿಸಿದ್ದರು.

ಬಂದ ಪತ್ರ

ಒಮ್ಮೆ ಜ್ವರ ಬಂದಿದ್ದರಿಂದ ಈರ ಕೆಲಸಕ್ಕೆ ಬಂದಿರಲಿಲ್ಲ. ಆದರೆ ಊರ ಮುಂದಿನ ಅರಳೀಕಟ್ಟೆಗೆ ಮುಖಂಡರುಗಳನ್ನು ಸೇರಿಸಿದ ನಮ್ಮ ಚಿಕ್ಕಪ್ಪ ಗೂಳಿಯಂತೆ ದಲಿತರ ಹಟ್ಟಿಗೆ ನುಗ್ಗಿ ಜ್ವರದಿಂದ ನರಳುತ್ತಿದ್ದ ಈರನನ್ನು ದರದರನೆ ಎಳೆತಂದು ಬಡಿಗೆಯಿಂದ ಆತನನ್ನು ಭೀಕರವಾಗಿ ಥಳಿಸಿದ್ದರು. ಮಾತ್ರವಲ್ಲ ತನ್ನ ಚಪ್ಪಲಿ ಕಾಲಿನಿಂದ ಆತನ ಮುಖ ಮೂತಿಯನ್ನೆಲ್ಲ ತುಳಿದರು. ಆ ಭಯಾನಕ ದೃಶ್ಯ ನನ್ನ ಎದೆ ನಡುಗಿಸಿತ್ತು.

ಈ ದಾಳಿಯಿಂದ ಅದು ಹೇಗೋ ಸಾವರಿಸಿಕೊಂಡ ಈರ ಅಳುತ್ತಾ ತೋಟದ ಕಡೆ ನಡೆದಾಗ ನಾನು ಅವನನ್ನು ಹಿಂಬಾಲಿಸಿ ಸಂತೈಸಿ ಬಂದಿದ್ದೆ. ಅದನ್ನು ಈಗ ನೆನಪಿಸಿಕೊಂಡರೂ ನನ್ನ ಅರಿವಿಲ್ಲದಂತೆ ನನ್ನ ಕಣ್ಣುಗಳು ಒದ್ದೆಯಾಗುತ್ತವೆ. ಇವು ನನ್ನ ಐವತ್ತು ವರ್ಷಗಳ ಹಿಂದಿನ ನೆನಪು.

ಆದರೆ ಇಂದಿಗೂ ನಮ್ಮ ಹಳ್ಳಿಯ ದಲಿತರ ಸ್ಥಿತಿ ಭಿನ್ನವಾಗಿಲ್ಲ. ಈರನೊಬ್ಬ ಮರಣ ಹೊಂದಿದ್ದರೆ ರಾಮ ಮತ್ತು ಭೀಮ ಇಂದಿಗೂ ನಮ್ಮೂರಿನ ರೈತರ ಮನೆಯಲ್ಲಿ ಜೀತ ಮಾಡುತ್ತಿರುವುದು ನಮ್ಮ ಸಮಾಜದ, ಸರ್ಕಾರಗಳ ದುಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ. ಅಸ್ಪೃಶ್ಯತೆ, ಅಸಮಾನತೆ, ಸಾಮಾಜಿಕ ನ್ಯಾಯ, ದಲಿತರ ಉದ್ಧಾರದ ಬಗ್ಗೆ ಭೀಕರವಾದ ಭಾಷಣ ಕೊರೆಯುವ ರಾಜಕಾರಣಿಗಳು ಇವತ್ತೂ ಇದ್ದಾರೆ. ಹಾಗೆಯೇ ಸಹಸ್ರಾರು ವರ್ಷಗಳಿಂದ ತುಳಿತಕ್ಕೆ ಸಿಕ್ಕಿ ದಾಸ್ಯದ ಸಂಕೋಲೆಗಳಿಂದ ಬಿಡುಗಡೆಗೊಳ್ಳಲು ತಹತಹಿಸುತ್ತಿರುವ ಈ ಶೋಷಿತ ಸಮುದಾಯವೂ ಇದೆ.

ಈ ಸಮುದಾಯಕ್ಕೆ ಸಂವಿಧಾನಬದ್ಧ ಸವಲತ್ತುಗಳನ್ನು ನೀಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವ ಸರ್ಕಾರ ಇಂದು ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ ಎಂಬ ಆರ್ಥಿಕ ನೀತಿಯಡಿ ನಮ್ಮ ದೇಶದ ಸಂಪತ್ತನ್ನು ಲೂಟಿ ಮಾಡಲು ದಗಾಕೋರರಿಗೆ ಅವಕಾಶ ಕಲ್ಪಿಸುತ್ತಿದೆ. ಜೊತೆಗೆ ಈ ಶೋಷಿತರಿಗೆ ದ್ರೋಹವೆಸಗುತ್ತಿದೆ. ಇದು ನಮ್ಮ ದೇಶದ ದುರಂತವಲ್ಲವೇ?

-ಕೆ.ಟಿ. ಹಳ್ಳಿ ಮಲ್ಲಿಕಾರ್ಜುನಯ್ಯ, ಪಾವಗಡ

sms ಜೋಕ್ಸ್

ಹುಡುಗ : ನಿನ್ನ ಡ್ರೆಸ್ ತುಂಬಾ ಚೆನ್ನಾಗಿದೆ.
ಹುಡುಗಿ : ಥ್ಯಾಂಕ್ಸ್
ಹುಡುಗ : ನಿನ್ನ ಲಿಪ್‌ಸ್ಟಿಕ್ಕೂ ಚೆನ್ನಾಗಿದೆ.
ಹುಡುಗಿ : ಥ್ಯಾಂಕ್ಸ್
ಹುಡುಗ : ನಿನ್ನ ಮೇಕಪ್ ಕೂಡಾ ಚೆನ್ನಾಗಿದೆ.
ಹುಡುಗಿ : ಥ್ಯಾಂಕ್ಸ್ ಅಣ್ಣ
ಹುಡುಗ : ಆದ್ರೂ ನೀನು ಚೆನ್ನಾಗಿ ಕಾಣುತ್ತಿಲ್ಲ

* * * * *

"ಹಲವೊಮ್ಮೆ ಟಿವಿಯಲ್ಲಿ ಜಗತ್ತಿನ ಯಾವುದೋ ಮೂಲೆಯಲ್ಲಿ ಹಸಿವಿನಿಂದ ಬಡಕಲಾಗಿರುವ ಮಕ್ಕಳನ್ನು ನೋಡಿದಾಗ ನಾನು ಕಣ್ಣೀರಿಡುತ್ತೇನೆ. ಯಾಕೆಂದರೆ ಅವರಷ್ಟೇ ಸಣ್ಣಗಾಗಲು ನನಗೆ ತುಂಬಾ ಇಷ್ಟ. ಆದರೆ ಅಲ್ಲಿನ ನೊಣ, ಸೊಳ್ಳೆ ಮತ್ತು ಸಾವುಗಳನ್ನು ನನ್ನಿಂದ ಸಹಿಸಲಾಗುವುದಿಲ್ಲ"

-ಮರಿಯಾ ಕಾರೆ (ಹಾಡುಗಾರ್ತಿ)

"ನೀವು ನಿಧನ ಹೊಂದಿದ್ದೀರಿ ಎಂಬ ಮಾಹಿತಿ ನಮ್ಮ ಆಫೀಸ್‌ಗೆ ಸಿಕ್ಕಿದ್ದರಿಂದ ಮತದಾರರ ಪಟ್ಟಿಯಿಂದ ನಿಮ್ಮ ಹೆಸರನ್ನು ತೆಗೆದು ಹಾಕಲಾಗಿದೆ. ಹಾಗೊಮ್ಮೆ ನಿಮ್ಮ ಪರಿಸ್ಥಿತಿಯಲ್ಲಿ ಬದಲಾವಣೆಯಾದರೆ ನಮ್ಮ ಆಫೀಸನ್ನು ಸಂಪರ್ಕಿಸಿ"

-ಅಮೆರಿಕದ ಸಮಾಜ ಕಲ್ಯಾಣ ಇಲಾಖೆ ಕಳುಹಿಸಿದ ಪತ್ರ

ಮದ್ಯದ ಬೆಲೆ

"ಹಲವೊಮ್ಮೆ ನಾನು ಹೆಚ್ಚಾಗಿ ಕುಡಿಯುತ್ತೇನೆ ಎಂದೆನಿಸಿ ನನ್ನ ಬಗ್ಗೆ ನನಗೆ ನಾಚಿಕೆಯಾಗುತ್ತದೆ. ಆದರೆ ನನ್ನ ವೈನ್ ಗ್ಲಾಸನ್ನು ನೋಡಿದಾಗ, ವೈನ್‌ಯಾರ್ಡ್‌ಗಳಲ್ಲಿ ಕೆಲಸ ಮಾಡುವ ಕೂಲಿಗಳು, ಅವರ ಬದುಕು, ಅವರ ಕನಸುಗಳು ನೆನಪಾಗುತ್ತವೆ. ನಾನು ಕುಡಿಯುವುದನ್ನು ನಿಲ್ಲಿಸಿದರೆ, ಅವರೆಲ್ಲ ನಿರುದ್ಯೋಗಿಗಳಾಗಿ, ಅವರ ಬದುಕು ನಾಶವಾಗಿ, ಅವರು ಕನಸುಗಳೆಲ್ಲಾ ನನಸಾಗದೇ ಉಳಿಯುತ್ತವೆ ಎಂದೆನಿಸುತ್ತದೆ. ಆಗ ನಾನು ಸ್ವಾರ್ಥಿಯಾಗಿ ನನ್ನ ಲೀವರ್ ಬಗ್ಗೆ ಮಾತ್ರ ಯೋಚಿಸದೆ ಆ ಕೂಲಿಗಳ ಜೀವನೋದ್ಧಾರಕ್ಕಾಗಿ ನಾನು ಕುಡಿಯಲೇಬೇಕು ಎಂದು ನನಗೆ ನಾನೇ ಹೇಳಿಕೊಳ್ಳುತ್ತೇನೆ.

-ಜಾಕ್ ಹ್ಯಾಂಡಿ



"ಕುಡಿತದಿಂದಾಗುವ ಕೆಟ್ಟಪರಿಣಾಮಗಳ ಬಗ್ಗೆ ಓದಿದ ನಂತರ ನಾನು ಓದುವುದನ್ನೇ ನಿಲ್ಲಿಸಿದೆ"

-ಹೆನ್ನಿ ಯಂಗ್‌ಮ್ಯಾನ್

ನಾವು ಕುಡಿದಾಗ ಅಮಲೇರಿಸಿಕೊಳ್ಳುತ್ತೇವೆ. ಅಮಲೇರಿಸಿಕೊಂಡು ನಿದ್ದೆ ಮಾಡುತ್ತೇವೆ. ನಿದ್ದೆ ಮಾಡುವಾಗ ನಾವು ಯಾವ ಪಾಪಕೃತ್ಯವನ್ನೂ ಮಾಡುವುದಿಲ್ಲ, ಪಾಪಕೃತ್ಯಗಳನ್ನು ಮಾಡದವರು ಸ್ವರ್ಗಕ್ಕೆ ಹೋಗುತ್ತಾರೆ. ಆದ್ದರಿಂದ ನಾವೆಲ್ಲ ಕುಡಿದು, ಅಮಲೇರಿಸಿಕೊಂಡು, ಸ್ವರ್ಗಕ್ಕೆ ಹೋಗೋಣ!

-ಬ್ರಿಯನ್ ಓ ರೂರ್ಕ್


ದೇವಾನುದೇವ ನಮ್ಮೆಲ್ಲರನ್ನೂ ಪ್ರೀತಿಸುತ್ತಾನೆ ಮತ್ತು ನಾವೆಲ್ಲರೂ ಸಂತೋಷವಾಗಿರಲಿ ಎಂದು ಆಶಿಸುತ್ತಾನೆ ಎಂಬುದಕ್ಕೆ ಬಿಯರ್ ಸಾಕ್ಷಿ!

-ಬೆಂಜಮಿನ್ ಫ್ರಾಂಕ್ಲಿನ್

ಕಂಬನಿ

ಮಾನ್ಯರೇ

ಜ್ಯೋತಿ ಗುರುಪ್ರಸಾದರ 'ಮಣ್ಣ ಮನೆಯ ಹುಡುಗಿ ಸುಪ್ರಭೆ' ಕವನ ಓದಿ ಬೇಸರವಾಯ್ತು. ಇತ್ತೀಚೆಗಷ್ಟೇ ಈಟಿವಿಯ 'ಎದೆ ತುಂಬಿ ಹಾಡಿದೆನು' ಕಾರ್ಯಕ್ರಮದಲ್ಲಿ ಅತಿಥಿಯಾಗಿ ಬಂದಿದ್ದ ಜಯಂತ್ ಕಾಯ್ಕಿಣಿಯವರು ಬಾಲಪ್ರತಿಭೆ ಪೂರ್ಣಪ್ರಜ್ಞನ ದುರಂತದ ಬಗ್ಗೆ ಹೇಳಿ ಅನಂತರ ಆತ ರಚಿಸಿ ಬಿಟ್ಟುಹೋಗಿದ್ದ ಕೆಲ ಕವಿತೆಗಳನ್ನು ವಾಚಿಸಿದ್ದರು.



ಮಗ ಪೂರ್ಣಪ್ರಜ್ಞನನ್ನ ಕಳಕೊಂಡ ದುಃಖದಲ್ಲಿರುವ ಜ್ಯೋತಿ ಗುರುಪ್ರಸಾದರನ್ನು ಮಗಳಂತಿದ್ದ ಸುಪ್ರಭಾಳ ದಾರುಣ ಅಂತ್ಯ ಇನ್ನಷ್ಟು ಕಂಗೆಡಿಸದೇ ಇರದು. ಈ ದುರಂತದ ಬಗ್ಗೆ ಓದಿದಾಗ ಮೂಡಬಿದ್ರೆಯಲ್ಲಿ ಕೂಲಿ ಕುಟುಂಬದ ಹೆಣ್ಣುಮಗುವೊಂದು ಸಮೀಪದ ಅಂಗಡಿಯಿಂದ ಸಾಮಾನನ್ನು ಕೊಂಡು ಮರಳುವ ಹೊತ್ತಿಗೆ ಮನೆಯವರೆಲ್ಲ ಸಿಡಿಲಿನ ಹೊಡೆತಕ್ಕೆ ಕಣ್ಣಮುಂದೆಯೇ ಕರಕಲಾಗಿ ಹೋದಂತ ದಾರುಣ ಘಟನೆ ನೆನಪಿಗೆ ಬಂತು (ಲೇಖಕ ಇರ್ಷಾದ್ ಮೂಡಬಿದ್ರೆ, **25-30** ವರ್ಷಗಳ ಹಿಂದೆ ಪತ್ರಿಕೆಯೊಂದಕ್ಕೆ ಬರೆದಿದ್ದ ಘಟನೆ).

ಕನಸುಗಳನ್ನು ಬಲವಂತವಾಗಿ ಹೇರಲ್ಪಟ್ಟವರೇ ಕಾಣಸಿಗುವ ಇಂದಿನ ದಿನಗಳಲ್ಲಿ ಪೂರ್ಣಪ್ರಜ್ಞ-ಸುಪ್ರಭಾರಂತಹ ಸಹಜ ''ಪ್ರತಿಭೆ' ಗಳ ದುರಂತ ಮನಸ್ಸಿಗೆ ಬೇಸರ ಹಾಗೂ ನೋವನ್ನು ತಂದಿತು.

-ರವಿ ಪುತ್ತೂರು, ದ.ಕ.



ಪ್ರೆಸ್‌ಕ್ಲಬ್‌ನಲ್ಲಿ ಪ್ರಕಾಶಿಸಿದ ರೈ

“ನನ್ನನ್ನು ನಂಬಿ. ನಾನು ಮಾತನಾಡುವುದೇ ಹೀಗೆ .. ಇದು ನ್ನ ಸಿನಿಮಾ ಜೀವನದ ಸಿಂಹಾವಲೋಕನ ಅಲ್ಲ, ಬದಲಿಗೆ ನನ್ನ ವನ ಪಯಣದ ಅನುಭವ...” ಎಂದೇ ಮೊನ್ನೆ ಪ್ರಕಾಶ್ ರೈ ಬಿ ಕನ್ನಡದ ಪ್ರತಿಭಾನ್ವಿತ ಮತ್ತು ಅಷ್ಟೇ ವಿವಾದಾತ್ಮಕ ನಟ ಮಾ ಪತ್ರಕರ್ತರ ಮಾತು-ಮಂಥನ ಕಾರ್ಯಕ್ರಮದಲ್ಲಿ ಮಾತು ರಂಭಿಸಿದರು.

ತನ್ನ ಪೊಗರು, ಅಹಂಕಾರ, ಪ್ರತಿಭೆ, ವಾಕ್ಚಾತುರ್ಯ, ಅಭಿನಯ ಶಲ್ಯಕ್ಕೆ ಹೆಸರಾದ ಪ್ರಕಾಶ್ ರೈ ಅಂದು ಸುಮಾರು ಎರಡು ಟೆಗಳ ಕಾಲ ಮಾತಿನ ಓಘದಲ್ಲಿ ಅದೆಲ್ಲವನ್ನೂ ಪ್ರದರ್ಶಿಸಿ ನು ಎಂದಿಗೂ ಬದಲಾಗದಿರುವ ಪ್ರಕಾಶ್ ರೈ ಎಂದು ಸಾಬೀತು ಡಿಸಿದರು.

ಪ್ರಕಾಶ್ ಅಂದು ಮಾತನಾಡಿದ ಕೆಲವು ಕುತೂಹಲಕಾರಿ ಚಾರಗಳು ಹೀಗಿವೆ.

ನನಗೆ ಸಿನಿಮಾ ಖಂಡಿತವಾಗಿಯೂ ಒಂದು **Passion** ಅಲ್ಲ, ನನ್ನ ಪಾಲಿಗೆ ಸಿನಿಮಾಕ್ಕಿಂತ ಜೀವನದ ಅನುಭವವೇ ಬಹಳ ಮುಖ್ಯ ಮತ್ತು ದೊಡ್ಡದು.

ನನಗೆ ಯಾರೂ ಗುರುಗಳು ಇಲ್ಲ, ಆದರೆ ನಾನು ಅನೇಕರಿಂದ ಅನೇಕ ಒಳ್ಳೆಯ ವಿಷಯಗಳನ್ನು ಕಲಿತಿ ದ್ದೇನೆ.

ನನಗೆ ಈಗಲೂ ಪೊಗರು ಇದೆ ಎಂದು ಕೆಲವರು ಹೇಳುತ್ತಾರೆ. ಆದರೆ ಆ ಪೊಗರು ಈಗ ಪಕ್ವವಾಗಿದೆ ಎಂಬುದು ನನ್ನ ನಂಬಿಕೆ.



ಒಬ್ಬ ಮನುಷ್ಯನಿಗೆ ನಿರಂತರವಾದ ಅಹಂಕಾರ ಇರಲೇಬೇಕು ಎಂದು ನಂಬಿರುವವನು ನಾನು. ಹೀಗಾಗಿ ಆ ಸಿದ್ಧಾಂತಕ್ಕೆ ಅಂಟಿಕೊಂಡು ಅಹಂಕಾರ ದಿಂದಲೇ ಬದುಕುತ್ತಿದ್ದೇನೆ.

ಕಾವೇರಿ ವಿವಾದದ ಸಂದರ್ಭದಲ್ಲಿ ಒಂದು ಮಾತು ಆಡಿದರೆ ಅದಕ್ಕೆ ಹತ್ತು ಅರ್ಥಗಳು ಬರುತ್ತವೆ. ಅಂತಹ ಸಂದರ್ಭಗಳಲ್ಲಿ ಮೌನವೇ ಮಾತನಾಡಬೇಕು. **it is always better to be missunderstood than to please someone.**

ನಾನು ಯಾರ ಮಗನೂ ಅಲ್ಲ; ನನಗಿಲ್ಲಿ ಯಾರು ಗಾಡ್‌ಫಾದರ್ ಇರಲಿಲ್ಲ. ಜೀವನದ ಅನಿಶ್ಚಿತತೆಯನ್ನು ಹೋಗಲಾಡಿಸಲು ನಾನು ಆಗಾಗ ಸ್ಮಾರ್ಟಾಗಿ ವರ್ತಿಸುತ್ತಿದ್ದೆ. ಆ ನನ್ನ ಸ್ಮಾರ್ಟ್‌ನೆಸ್ಸೇ ನನ್ನನ್ನು ಈ ಎತ್ತರಕ್ಕೆ ಬೆಳೆಸಿದೆ.

ನಾನು ಸಾಕಷ್ಟು ಹಣವನ್ನು ಮಾಡಿದ್ದೇನೆ. ಇನ್ನೆರಡು ವರ್ಷಗಳ ನಂತರ ಒಳ್ಳೆಯ ಚಿತ್ರಕಥೆ, ಸಿನಿಮಾಕ್ಕಾಗಿ ನಾನು ಎಲ್ಲರಿಗೂ ದೊರಕುವಂತಾಗಬೇಕು ಎಂದು ನಿರ್ಧರಿಸಿದ್ದೇನೆ.

ಬಹುತೇಕ ಎಲ್ಲಾ ವಲಯಗಳಲ್ಲೂ ವ್ಯಕ್ತಿಗಳು ಬೆಳೆಯುತ್ತಾರೆ; ಆದರೆ ಸಂಸ್ಥೆಗಳು ಬೆಳೆಯುವುದಿಲ್ಲ, ಈ ವಿಷಯ ನನ್ನನ್ನು ಆಗಾಗ ಕಾಡುತ್ತಲೇ ಇರುತ್ತದೆ. ಈ ಬಗ್ಗೆ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಮತ್ತು ನಾನು ಸುದೀರ್ಘ ಮಾತುಕತೆ ನಡೆಸಿದ್ದೇವೆ, ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತನೂ ಆಗಲಿದ್ದೇನೆ.

ದೀಪಕ್ಕಿಂತ ದೀಪ ಬೆಳಗಿಸುವವನು ಮುಖ್ಯವಾಗುತ್ತಾನೆ. ಆ ಕಾರಣಕ್ಕೆ ನಾನು 'ಡ್ಯುಯೆಟ್' ಎಂಬ ನಿರ್ಮಾಣ ಸಂಸ್ಥೆಯನ್ನು ಹುಟ್ಟು ಹಾಕಿದ್ದೇನೆ. ಬಾಲಚಂದರ್ ತರಹ ನಾನು ಕೆಲವು ಪ್ರತಿಭೆಗಳನ್ನು ಬೆಳಗಿಸಬೇಕಾಗಿದೆ.

ನಿರ್ದೇಶನ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ, ಹೀಗಾಗಿ ನಾನು ನಿರ್ದೇಶನ ಮಾಡಲಾರೆ. ಅದಕ್ಕೆ ನಿರ್ದೇಶನದ ಹೆರಿಗೆ ನೋವು ಆಗಬೇಕು. ಅಂತಹ ನೋವು ಬರುವತನಕ ನಿರ್ದೇಶನ ಮಾಡಲಾರೆ.

ನನ್ನ ವೃತ್ತಿಜೀವನ ಒಂದು ರೀತಿಯಲ್ಲಿ ಡ್ರೀಮ್ ರನ್ನಿಂಗ್ ರೇಸ್ ತರಹ ಇದೆ. ನನಗೆ ಆರಂಭದಲ್ಲೇ ಬಾಲಚಂದರ್, ಮಣಿರತ್ನಂ, ರಾಮುಗೋಪಾಲವರ್ಮಾ, ಪ್ರಿಯದರ್ಶನ್-ರಂತಹ ಒಳ್ಳೊಳ್ಳೆ ಪ್ರತಿಭಾವಂತರೇ ಸಿಕ್ಕಿದ್ದಾರೆ.

* ನನಗೆ ಏಳೆಂಟು ಭಾಷೆ ಮಾತನಾಡಲು ಬರುತ್ತದೆ. ಭಾಷೆ ಕಲಿಯುವುದು ನನಗೆ ಸಂತೋಷವನ್ನು ನೀಡಿದೆ. ಅಷ್ಟೇ ಅಲ್ಲ; ಆ ಪ್ರದೇಶದ ಜನರೊಂದಿಗೆ ಆತ್ಮೀಯತೆಯ ನಂಟನ್ನು ಬೆಸೆದಿದೆ. ಒಂದು ಭಾಷೆ ಕಲಿತರೆ ಆ ಪ್ರದೇಶದ ಸಂಸ ತಿಯನ್ನು ಅರಿತಂತೆ. ನನಗೆ ಅದು ತುಂಬಾ ಇಷ್ಟದ ಕೆಲಸ. ಹೀಗಾಗಿ ನಾನು ಅಗತ್ಯ ಬಿದ್ದಾಗಲೆಲ್ಲಾ ಹೊಸ ಭಾಷೆಯನ್ನು ಕಲಿಯುತ್ತೇನೆ.

* ನನಗೆ ಮೂರು ರಾಷ್ಟ್ರ ಪ್ರಶಸ್ತಿಗಳು, ಹದಿನೆಂಟು ರಾಜ್ಯ ಪ್ರಶಸ್ತಿಗಳು ದೊರೆತಿವೆ. ಹಾಗಂತ ನಾನು ಸರ್ವಶ್ರೇಷ್ಠ ನಟನೆಂದು ಭಾವಿಸುವುದಿಲ್ಲ, ಆ ಪ್ರಶಸ್ತಿಗಳು ಆಯಾ ವರ್ಷದ ಚಿತ್ರಗಳಲ್ಲಷ್ಟೇ ಶ್ರೇಷ್ಠ ಎಂದು ನಂಬಿದವನು ನಾನು. ನನ್ನ ಪ್ರಕಾರ ನಾನು ಸಾಧಿಸಿರುವುದು ನನ್ನ ಪ್ರತಿಭೆಯ ಶೇ. 5ರಷ್ಟು ಮಾತ್ರ.

* ನಟನೆಯೆಂಬುದು ಬರೀ ಶರೀರಕ್ಕೆ ಸಂಬಂಧಪಟ್ಟಿದ್ದು ಮಾತ್ರವಲ್ಲ, ಅದು ಶಾರೀರಕ್ಕೂ ಸೇರಿದ್ದು. ಆ ಕಾರಣಕ್ಕೆ ನಾನು ನಟಿಸಿದ ತೆಲುಗು-ತಮಿಳು-ಹಿಂದಿ-ಮಲೆ ಯಾಳಂ ಭಾಷೆಯ ಚಿತ್ರಗಳಿಗೂ ನಾನೇ ಕಂಠದಾನ ಮಾಡುತ್ತೇನೆ.

* ರಾಜಕೀಯ ನನಗೆ ಇಷ್ಟವಿಲ್ಲ, ಇಷ್ಟವಿಲ್ಲದ, ಗೊತ್ತಿಲ್ಲದ ವಿಷಯಕ್ಕೆ ನಾನು ಕೈಹಾಕುವುದಿಲ್ಲ. ನಾನು ಇಲ್ಲಿಯೇ ಮಾಡಬೇಕೆಂದುಕೊಂಡಿರುವುದೇ ಸಾಕಷ್ಟಿದೆ.

* ಹಿಂದೊಮ್ಮೆ ನಾನು ಒಂದು ಹೊತ್ತಿನ ಊಟಕ್ಕೂ ಕಷ್ಟಪಡುತ್ತಾ ಹಸಿವಿನಿಂದ ಕಂಗಾಲಾಗಿದ್ದೆ ಎಂದು ರೋಮ್ಯಾಂಟಿಕ್ ಆಗಿ ಹೇಳಲು ಇಷ್ಟಪಡುವುದಿಲ್ಲ, ನನಗೆ ಗೊತ್ತಿದ್ದದ್ದು ನಟನೆಯ ಹಸಿವು ಮಾತ್ರ. ಏನಾದರೂ ಸಾಧಿಸಲೇಬೇಕು ಎಂಬ ಛಲ ಮತ್ತು ಗುರಿ ಮಾತ್ರ ನನ್ನ ಕಣ್ಮುಂದೆ ಇತ್ತು. ಅದನ್ನು ಹಿಂಬಾಲಿಸುತ್ತಾ ನಾನು ಮುನ್ನಡೆದೆ.

ಈ ದೇಶದ ಶ್ರೇಷ್ಠ ತಂತ್ರಜ್ಞರಾದ ಬಾಲಚಂದರ್, ಮಣಿರತ್ನಂ, ಕಲಾವಿದರಾದ ಅಮಿತಾಬ್ ಬಚ್ಚನ್, ಮೋಹನ್ ಲಾಲ್, ಮಮ್ಮುಟಿ, ರಜನೀಕಾಂತ್... ಮೊದಲಾದವರೊಂದಿಗೆ ಸರಿಸಾಟಿಯಾಗಿ ನಟಿಸಿ ಸೈ ಎನಿಸಿಕೊಂಡಿರುವ ಕನ್ನಡದ ಈ ಹುಡುಗ ಮನಬಿಚ್ಚಿ ಮಾತನಾಡಿದರು.

ಅಂದು ಪ್ರಕಾಶ್ ರೈ ತನ್ನ ಹುಟ್ಟು, ಬಾಲ್ಯ ತಂದೆ-ತಾಯಿಯಿಂದಿಡಿದು ಬೆಂಗಳೂರಿಗೆ ಕನಸುಗಳನ್ನು ಹೊತ್ತುಕೊಂಡು ಬಂದಿದ್ದು, ಇಲ್ಲಿ ಅಲೆಮಾರಿಯಾಗಿ ತಿರುಗಾಡಿದ್ದು, ಎ.ಎಸ್. ಮೂರ್ತಿಯವರ ಕಲಾಮಂದಿರದಲ್ಲಿ ಜೀವನಾನುಭವ ಗಳಿಸಿದ್ದು, ಅನಂತರ ನಾಟಕ, ಕಿರುಚಿತ್ರ ಮತ್ತು ಸಿನಿಮಾಗಳಲ್ಲಿ ಹೊಟ್ಟೆಪಾಡಿಗಾಗಿ ನಟಿಸಿದ್ದು, ಕೊನೆಗೆ ತಮಿಳು ಚಿತ್ರರಂಗಕ್ಕೆ ವಲಸೆ ಹೋಗಿದ್ದರ ಬಗ್ಗೆ ಕಣ್ಣಿಗೆ ಕಟ್ಟುವಂತೆ ಹೇಳುತ್ತಾ ಹೋದರು.

ಪ್ರಕಾಶ್ ರೈ ಅವರ ಜೀವನದ ಪಯಣ ಒಂದು ರೀತಿಯಲ್ಲಿ ಬಾಲಚಂದರ್ ಅವರ ಸಿನಿಮಾದಂತಿತ್ತು. ಯಾಕೆಂದರೆ ಪ್ರಕಾಶ್ ಜೀವನದಲ್ಲೂ ಸೆಂಟಿಮೆಂಟ್ಸ್, ಕಣ್ಣೀರು, ರೋಮೆಂಟಿಸಂ, ಆಕಸ್ಮಿಕ ತಿರುವುಗಳು, ಸಾಧನೆ-ಸಂತೋಷ... ಎಲ್ಲವೂ ಹಿತಮಿತವಾಗಿ ಸೇರಿಕೊಂಡಿದೆ.

ಹಾಗೆಯೇ ಸಿನಿಮಾದ ಮಧ್ಯಂತರ ಬ್ರೇಕ್ ತರಹ ಒಂದು ಗಂಟೆ ಅವಧಿ ಮಾತನಾಡಿದ ಪ್ರಕಾಶ್ ಒಂದೈದು ನಿಮಿಷ ಬ್ರೇಕ್ ತೆಗೆದುಕೊಂಡರು. ಆಗ ಒಂದು ಸಿಗರೇಟ್ ಸೇದಿ ಅರ್ಧ ಕಾಫಿ ಕುಡಿದು ಮತ್ತೆ ಒಂದು ಗಂಟೆ ಮಾತನಾಡಿದರು. ಅಂದು ರೈ ಇನ್ನೂ ಮಾತನಾಡುವ ಮೂಡಿನಲ್ಲಿದ್ದರು. ಪತ್ರಕರ್ತರೂ ಕೇಳಿಸಿಕೊಳ್ಳುವ ಉತ್ಸಾಹದಲ್ಲಿದ್ದರು. ಆದರೆ ಒಂಬತ್ತು ಗಂಟೆಗೆ ಮದ್ರಾಸ್‌ಗೆ ವಿಮಾನ ಹತ್ತಬೇಕಾದ್ದರಿಂದ ಅವರು ಹೊರಟುಹೋದರು. ವಿಚಿತ್ರ ನೋಡಿ, ಕೇವಲ ಎರಡು ನಿಮಿಷ ವಿಳಂಬವಾದ್ದರಿಂದ ವಿಮಾನ ತಪ್ಪಿ ಹೋಯಿತು. ಮತ್ತೆ ಪ್ರೆಸ್‌ಕ್ಲಬ್‌ಗೆ ಹಿಂದಿರುಗಿದ ರೈ ಮಧ್ಯರಾತ್ರಿಯ ನಂತರವೂ ತಮ್ಮ ಮಾತುಕತೆ ಮುಂದುವರೆಸಿದರು.

ಕಪ್ಪು ಆಕಾಶದಲ್ಲಿನ ಚುಕ್ಕಿಗಳೂ ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿರುವಂತೆ ಭಾಸವಾಗುತ್ತಿತ್ತು

● ಶೆಣೈ

ಆಫ್ ದಿ ರೆಕಾರ್ಡ್


ಗಾಯಕಿ ಛಾಯಾ ಹಾಗೂ ರೌಡಿ ರಿಲೇಷನ್!

ಒಮ್ಮೆ ಹೀಗಾಯಿತು: ಕನ್ನಡದ ಖ್ಯಾತ ಗಾಯಕಿ ಬಿ.ಆರ್. ಛಾಯಾ ಅವರು ಇವತ್ತಿನಂತೆಯೇ ಅವತ್ತೂ ಸಖತ್ ಪಾಪ್ಯುಲರ್ ಆಗಿದ್ದರು. ಅಣ್ಣಮ್ಮ, ರಾಜ್ಯೋತ್ಸವ, ಗಣೇಶೋತ್ಸವಗಳಲ್ಲಿ ಆವರ ಕಾರ್ಯಕ್ರಮಕ್ಕೆ ಸಾಕಷ್ಟು ಬೇಡಿಕೆಯಿತ್ತು.

ಅದೊಂದು ದಿನ ಛಾಯಾ ಅವರ ಮನೆಗೆ ಗಣೇಶೋತ್ಸವದ ಕಾರ್ಯಕ್ರಮ ನೀಡಬೇಕೆಂದು ಕೇಳಿಕೊಂಡು ಒಬ್ಬಾತ ಬಂದಿದ್ದ. ಹಣ ಕಾಸಿನ ವ್ಯವಹಾರವನ್ನೆಲ್ಲಾ ಛಾಯಾರ ಪತಿ ಪದ್ಮಪಾಣಿಯವರೇ ನೋಡಿಕೊಳ್ಳುವುದರಿಂದ, ಆತ ಕೇಳಿದ ಸಂಜೆ ಕಾರ್ಯಕ್ರಮಕ್ಕೆ ಆರು ಸಾವಿರ ರೂಪಾಯಿಗಳನ್ನು ನೀಡಬೇಕೆಂದು ಅವರು ಹೇಳಿದ್ದಾರೆ. ಆದರೆ ಆ ವ್ಯಕ್ತಿ ಮಾತ್ರ “ಆರು ಸಾವಿರ ಕೊಡಲು ಆಗುವುದಿಲ್ಲ, ಮೂರು ಸಾವಿರವನ್ನಷ್ಟೇ ಕೊಡುತ್ತೇನೆ” ಎಂದಿದ್ದಾನೆ. “ಸಾಧ್ಯವಿಲ್ಲ” ಎಂದು ಎಷ್ಟು ಹೇಳಿದರೂ ಕೇಳದ ಆತ ಮೂರು ಸಾವಿರಕ್ಕೇ ಪಟ್ಟು ಹಿಡಿದು ಕುಳಿತಿದ್ದನಂತೆ.


ಪದ್ಮಪಾಣಿ

ಈತನ ಚೌಕಾಸಿ ಮಾತುಗಳನ್ನು ಕೇಳುತ್ತಾ ಕೂರಲು ಸಮಯವಿಲ್ಲದಿದ್ದ ಛಾಯಾ ತುರ್ತಾಗಿ ರೆಕಾರ್ಡಿಂಗ್‌ಗೆ ಹೋಗಬೇಕಿದ್ದರಿಂದ ಹೊರಟುಬಿಟ್ಟಿದ್ದಾರೆ. ಪದ್ಮಪಾಣಿಯೊಂದಿಗೆ ಆತನ ಚೌಕಾಸಿ ಮುಂದುವರೆದಿದೆ. ಸುಮಾರು ಹೊತ್ತಿನ ನಂತರ ಛಾಯಾ ಮನೆಗೆ ಮರಳಿದಾಗಲೂ ಆ ಗಿರಾಕಿಯ 'ಕಾಸ್‌ಬಾತ್' ಇನ್ನೂ ಮುಂದುವರೆದಿತ್ತಂತೆ.



ಶ್ರೀರಾಂಪುರ ಕಿಟ್ಟಿ

ಪದ್ಮಪಾಣಿ ಆಡಿದ ಮಾತು, ಹೇಳಿದ ರೇಟನ್ನು ಎಂದಿಗೂ ಬದಲಿಸುವುದಿಲ್ಲವಾದ್ದರಿಂದ ಕಡೆಗೆ ಆತ “ನಾನು ಯಾರು ಅಂತ ನಿಮಗೆ ಗೊತ್ತಿಲ್ಲ. ಗೊತ್ತಿದ್ದರೆ ನೀವು ಹಿಂಗೆ ಮಾಡ್ತಿರಲಿಲ್ಲ, ಇರಲಿ ಬಿಡಿ ಆರು ಸಾವಿರಾನೇ ಕೊಡ್ತೀನಿ” ಎಂದು ಹೇಳಿ ಹೊರಟಿದ್ದಾನೆ.

ಹೀಗೆ ಕಾಸು ಪಡೆದು ಕಾರ್ಯಕ್ರಮಕ್ಕೆ ಹೋದ ನಂತರವಷ್ಟೇ ಪಾಣಿ-ಛಾಯಾ ದಂಪತಿಗಳಿಗೆ ಗೊತ್ತಾಗಿದ್ದು ಆತ ಕುಖ್ಯಾತ ರೌಡಿ ಶ್ರೀರಾಂಪುರ ಕಿಟ್ಟಿ ಎಂದು!


ಮತ್ತೊಂದು ದಿನ ಅದ್ಯಾವುದೋ ದೇವರ ಉತ್ಸವದಲ್ಲಿ ವೇದಿಕೆಯ ಮೇಲೆ ಬಿ.ಆರ್. ಛಾಯಾ ತಮ್ಮ ಎಂದಿನ ಚೆಂದನೆಯ ದನಿಯಲ್ಲಿ ಹಾಡುತ್ತಿದ್ದರು. ಮಧ್ಯೆ ವೇದಿಕೆಯೇರಿ ಬಂದ ಒಬ್ಬಾತ “ನಾನೊಂದು ಹಾಡು ಹೇಳ್ತೀನಿ ಮೈಕು ಕೊಡಿ” ಎಂದಿದ್ದಾನೆ. ಪಕ್ಕದಲ್ಲಿದ್ದ ಪದ್ಮಪಾಣಿ ಅವರು “ಹಂಗೆಲ್ಲಾ ಕಾರ್ಯಕ್ರಮದ ಮಧ್ಯೆ ನೀನು ಹಾಡೋಹಂಗಿಲ್ಲ, ಹೋಗಯ್ಯಾ” ಎಂದು ಹೇಳಿ ಆತನನ್ನು ಪಕ್ಕಕ್ಕೆ ಕಳಿಸಿದ್ದಾರೆ.

ತಕ್ಷಣ ಆತನ ಬಂಟರಂತೆ ಕಾಣುತ್ತಿದ್ದ ಪೋರ್ಕಿ, ಪರೋಡಿಗಳೆಲ್ಲಾ ಎದ್ದು ನಿಂತು “ಅಣ್ಣಂಗೆ ಯಾರು ಹಾಡು ಹೇಳಕ್ಕೆ ಬಿಡ್ಲಿಲ್ಲ” ಎಂದು ಆವಾಜ್ ಹಾಕಿದ್ದಾರೆ. ಯಾಕೋ ಪರಿಸ್ಥಿತಿ ನೆಟ್ಟಗಿಲ್ಲ ಎಂಬುದನ್ನರಿತ ಛಾಯಾ ಮತ್ತು ಪಾಣಿ ಮೈಕು ಕೊಟ್ಟಿದ್ದಾರೆ. ಆದರೆ ಆತ ಹಾಡಿದಾಗ ಆತನ ಕಂಚಿನ ಕಂಠದ ಮಾಧುರ್ಯಕ್ಕೆ ಅವರಿಬ್ಬರೂ ಬೆಚ್ಚಿಬಿದ್ದಿದ್ದಾರೆ!


ಜೇಡರಹಳ್ಳಿ ಕೃಷ್ಣಪ್ಪ

ಹೀಗೆ ತನ್ನ ತೋಲ್ಬಳದೊಂದಿಗೆ ತನ್ನ ಕಂಠಬಲವನ್ನೂ ಅಂದು ತೋರಿದ್ದು ಬೇರೆ ಯಾರೂ ಅಲ್ಲ, ಬೆಂಗಳೂರು ಅಂದು ಕಂಡಿದ್ದ ಕುಖ್ಯಾತ ರೌಡಿಗಳಲ್ಲಿ ಒಬ್ಬನಾಗಿದ್ದ ಜೇಡರಳ್ಳಿ ಕೃಷ್ಣಪ್ಪ!!

ಅಂದಹಾಗೆ ಸಂಗೀತದ ಬಗ್ಗೆ ಈ ರೌಡಿಗಳ ಸೆಳೆತ ಎಂಥದ್ದು ಗೊತ್ತೇ? ಒಮ್ಮೆ ಒಂದು ಕಾರ್ಯಕ್ರಮದಲ್ಲಿ “ಈ ದೇಹದಿಂದ ದೂರನಾದೆ ಏಕೆ ಆತ್ಮನೇ”ಎಂಬ ಹಾಡನ್ನೇ ಐದೈದು ಬಾರಿ ಹಾಡಿಸಿದ ರೌಡಿಗಳು ಅಲ್ಲಿಯ ತನಕ ಕೊಲೆಯಾಗಿದ್ದ ತಮ್ಮ ಸಹೋದ್ಯೋಗಿಗಳನ್ನೆಲ್ಲ ನೆನೆದು ಬಿಕ್ಕಿಬಿಕ್ಕಿ ಅತ್ತಿದ್ದಾರೆ. ಆದರೆ ಪಾಪ ವಾದ್ಯವೃಂದದವರಿಗೆ ಮಾತ್ರ 'ಹಾಡಿದ್ದೇ ಹಾಡು ಕಿಸ್‌ಬಾಯ್ ದಾಸ' ಎಂಬಂತಾಗಿತ್ತಂತೆ.


ಛಾಯಾ

ಬೀದಿ ಕಾರ್ಯಕ್ರಮಗಳಲ್ಲಿ ಇಂಥ ನೂರಾರು ಘನಘೋರ ಪ್ರಕರಣಗಳನ್ನು ಅನುಭವಿಸಿರುವ ಛಾಯಾ ಅವರು ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕ ಉತ್ಸವಗಳಲ್ಲಿ ವೇದಿಕೆಯನ್ನೇರುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಆದರೂ ನೋಡಿ, ಇದೇ ಏಪ್ರಿಲ್ 30ರಂದು ನಡೆದ ರಾಕ್‌ಲೈನ್ ವೆಂಕಟೇಶ್ ಅವರ ಪುತ್ರ ಯತೀಶ್ ಮತ್ತು ಮಾಜಿ ರೌಡಿ ಮುನಿರತ್ನರ ಮಗಳು ಸಿಂಧೂರಿಯ ಮದುವೆಯಲ್ಲೂ ಛಾಯಾ ಅವರ ಕಾರ್ಯಕ್ರಮವೇ ಏರ್ಪಾಡಾಗಿದೆ.

ಅಂದರೆ ಛಾಯಾ ಅವರ 'ರೌಡಿಗಳೊಂದಿಗಿನ ಮಧುರ ಬಾಂಧವ್ಯ' (!) ಹೀಗೆ ಮುಂದುವರೆದಿದೆ. ತಮ್ಮ ದಶಕಗಳ ಕಾಲದ ಈ 'ರೌಡಿ ರಿಲೇಷನ್' ಬಗ್ಗೆ ಮೊನ್ನೆ ಮೆಲುಕುಹಾಕಿ ದೀರ್ಘವಾದ ನಿಟ್ಟುಸಿರು ಬಿಟ್ಟ ಛಾಯಾ ಮೇಡಂ “ಆದರೆ ಎಂದಿಗೂ ಅವರು ದುಡ್ಡು ಕಾಸಿನ ಜೊತೆ ನೀಡುವ ಮರ್ಯಾದೆಗೆ ಅನ್ಯಾಯ ಮಾಡಲಿಲ್ಲ. ಅವರು ರೌಡಿಗಳಾಗಿದ್ದರೂ ಸಹ ನಮ್ಮಂಥ ಕಲಾವಿದ ಹೆಣ್ಣುಗಳನ್ನು ಕಂಡರೆ ಎಲ್ಲಿಲ್ಲದ ಗೌರವ ನೀಡುತ್ತಿದ್ದರು” ಎಂಬುದನ್ನು ಹೇಳಲು ಮರೆಯಲಿಲ್ಲ!! ■

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 13-05-2009 RNI No. KARKAN2005/14...

ಸೆನ್ಸಾರ್ ವಿರುದ್ಧ ಸೋಲ್ತಿದ್ದವರು

ಕೊನೆಗೂ ಒಬ್ಬ ನಿರ್ಮಾಪಕ ಯಾವುದೇ ಸಂಕೋಚವಿಲ್ಲದೆ, ತಲೆಹರಟೆ ಮಾಡದೆ ಸೆನ್ಸಾರ್ ಮಂಡಳಿ ನೀಡಿದ 'ಎ' ಸರ್ಟಿಫಿಕೇಟ್‌ಅನ್ನು ತುಂಬು ಹೃದಯದಿಂದ ಸ್ವೀಕರಿಸಿದ್ದಾರೆ. ಆ ವ್ಯಕ್ತಿ 'ಶೀನ' ಚಿತ್ರದ ನಿರ್ಮಾಪಕ ಮುರುಳಿ ಕುಪ್ಪುಸ್ವಾಮಿ.

ಈ ಚಿತ್ರವನ್ನು ವೀಕ್ಷಿಸಿದ ನಂತರ ಕೆಲವು ಕಟ್ಸ್‌ಗಳನ್ನು ಸೆನ್ಸಾರ್ ಮಂಡಳಿ ಸೂಚಿಸಿತು. ಆದರೆ "ಆ ದೃಶ್ಯಗಳನ್ನು ಚಿತ್ರೀಕರಿಸಲು ನಾವು ಸಾಕಷ್ಟು ಹಣ ಸುರಿದಿದ್ದೇವೆ" ಎಂದು ನಿರ್ಮಾಪಕರು ದಾಗ ಎಳೆದರು. ಆಗ "ಕಟ್ ಮಾಡದಿದ್ದರೆ 'ಎ' ಸರ್ಟಿಫಿಕೇಟ್ ನೀಡಬೇಕಾಗುತ್ತದೆ" ಎಂದು ಸೆನ್ಸಾರ್ ಮಂಡಳಿ ಎಚ್ಚರಿಸಿತು. ಆದರೆ ಮುರುಳಿ ಕುಪ್ಪುಸ್ವಾಮಿ ಮಾತ್ರ "ಒಕೆ" ಎಂದರು!

ಈ ಚಿತ್ರದ ಜಾಹೀರಾತುಗಳನ್ನು ಕಳೆದ ನಾಲ್ಕು ತಿಂಗಳಿನಿಂದ ಭರ್ಜರಿಯಾಗೇ ಎಲ್ಲೆಡೆ ಬಿಡುಗಡೆ ಮಾಡಲಾಗಿದೆ. ಬೆಂಗಳೂರಿನ ಅನೇಕ ಜಂಕ್ಷನ್‌ಗಳಲ್ಲಿ ಈ ಚಿತ್ರದ ದೊಡ್ಡದೊಡ್ಡ ಜಾಹೀರಾತುಗಳು ರಾರಾಜಿಸುತ್ತಿವೆ. ಆದರೆ ಇದ್ಯಾವುದರಲ್ಲೂ 'ಎ' ಸರ್ಟಿಫಿಕೇಟ್ ಎಂದು ನಮೂದಿಸಲ್ಪಟ್ಟಿಲ್ಲ. ಹೀಗೆ ಚಿತ್ರ ಸೆನ್ಸಾರ್ ಆಗುವ ಮೊದಲೇ ಜಾಹೀರಾತು ಬಿಡುಗಡೆ ಮಾಡುವ ಕ್ರಮದ ಬಗ್ಗೆ ಸೆನ್ಸಾರ್ ಮಂಡಳಿ ಯಾಕೆ ಮೌನ ವಹಿಸಿದೆ?



ಲಹರಿಯ ಹೊಸ ಝರಿ

ಲಹರಿ ಸಂಸ್ಥೆ ಈಗ ಇನ್ನೊಂದು ಹೊಸ ಸಾಹಸಕ್ಕೆ ಕಾಲಿಡುತ್ತಿದೆ.

ಸಂಗೀತ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಒತ್ತಿರುವ ಲಹರಿ ಸಂಸ್ಥೆಯ ಮಾಲೀಕ ವೇಲು ಈಗ ತನ್ನ ಸಂಸ್ಥೆಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ಒಂದು ಸ್ಟುಡಿಯೋ ನಿರ್ಮಿಸಿದ್ದಾರೆ. ಅದರ ಉದ್ಘಾಟನೆ ಮುಂದಿನ ವಾರ ಆಗಲಿದೆ.

ಹಲವಾರು ದಶಕಗಳಿಂದ ಲಹರಿ ಕ್ಯಾಸೆಟ್ ಕಂಪೆನಿಯ ಮುಖಾಂತರ ಕನ್ನಡ ಚಿತ್ರೋದ್ಯಮದಲ್ಲಿ ಮಾತ್ರವಲ್ಲ ದಕ್ಷಿಣ ಭಾರತೀಯ ಚಿತ್ರರಂಗದಲ್ಲೇ ಕಾರ್ಯವಹಿಸಿರುವ ಲಹರಿ ಸಂಸ್ಥೆ ಗುಣಮಟ್ಟಕ್ಕೆ ಹೆಸರುವಾಸಿಯಾಗಿದೆ. ಬರೀ ಚಿತ್ರಗೀತೆಗಳನ್ನು ಮಾತ್ರವಲ್ಲದೆ ಕನ್ನಡ ಕವಿಗಳ ಸುಗಮ ಸಂಗೀತವನ್ನೂ ಕೇಳುಗರಿಗೆ ತಲುಪಿಸಿದ ಕೀರ್ತಿ ಈ ಸಂಸ್ಥೆಯದು. ಬಹುಶಃ ಇದೀಗ ಸಂಗೀತ ಮಾರುಕಟ್ಟೆ ಕುಸಿದಿದ್ದರಿಂದಲೋ ಏನೋ ಲಹರಿ ವೇಲು ಈಗ ಸ್ಟುಡಿಯೋ ಕಡೆಗೆ ಹೊರಟಿದ್ದಾರೆ: ಸಂಗೀತ ಕ್ಷೇತ್ರದಂತೆ ಇಲ್ಲೂ ಅವರು ದೊಡ್ಡ ಹೆಸರು ಮಾಡಲಿ.



ಸಜ್ಜನನ ಅಮಾನವೀಯ ನಿಲುವು

ಎಂ.ಎಸ್.ರಮೇಶ್‌ರಂತಹ ಸಜ್ಜನ ನಿರ್ದೇಶಕ ಹೀಗೆ ಮಾತನಾಡಬಾರದಿತ್ತು.

"ಸ್ಟಂಟ್ ಕಲಾವಿದರಿಗೆ ಯಾವುದೇ ಇನ್ಶೂರೆನ್ಸ್ ಕಂಪೆನಿ, ಇನ್ಶೂರೆನ್ಸ್ ನೀಡುವುದಿಲ್ಲ; ಅವರು ಸಾಯಲು ತಯಾರಾಗಿಯೇ ಬಂದಿರುವವರು..." ಎಂದು ರಮೇಶ್ ಮೊನ್ನೆ ಹೇಳಿದಾಗ ಅಲ್ಲಿದ್ದ ಎಲ್ಲರಿಗೂ ಆಶ್ಚರ್ಯ.

ಅವರು ನಿರ್ದೇಶಿಸಿ, ವಿಜಯ್ ನಾಯಕನಾಗಿ ನಟಿಸಿರುವ 'ತಾಕತ್' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭದಲ್ಲಿ ರಮೇಶ್ ಈ ರೀತಿ ಮಾತನಾಡಿದರು.

"ಚಿತ್ರೀಕರಣದ ಸಂದರ್ಭದಲ್ಲಿ ಚಲಿಸುತ್ತಿದ್ದ ಬಸ್ಸಿನಿಂದ ಬಿದ್ದು ನನಗೆ ಗಾಯವಾಯಿತು; ಆದರೂ ಚಿತ್ರದಲ್ಲಿ ಫೈಟಿಂಗ್ ದೃಶ್ಯಗಳು ರೋಮಾಂಚನಕಾರಿಯಾಗಿ ಮೂಡಿಬಂದಿದೆ" ಎಂದು ಸಿಕ್ಸ್ ಪ್ಯಾಕ್ ಖ್ಯಾತಿಯ ವಿಜಿ ಹೇಳಿದಾಗ "ನಿಮಗೆ ಇನ್ಶೂರೆನ್ಸ್ ಮಾಡಿಸಿರಲಿಲ್ಲವೇ?" ಎಂದು ಪತ್ರಕರ್ತರು ಆತನ ಬಗ್ಗೆ ಕಾಳಜಿಯಿಂದ ಕೇಳಿದರು. ಅದನ್ನು ಕೇಳಿದ ಚಿತ್ರದ ನಿರ್ಮಾಪಕರೂ ಆಗಿರುವ ರಮೇಶ್ ಮೇಲಿನಂತೆ ನುಡಿದು ಪತ್ರಕರ್ತರ ಮತ್ತು ರಮೇಶ್ ನಡುವೆ ಸಣ್ಣ ಚರ್ಚೆಯೇ ನಡೆಯಿತು.



ಕನ್ನಡ ಚಿತ್ರರಂಗದಲ್ಲಿ ಸ್ಟಂಟ್ ಕಲಾವಿದರು ಅನೇಕ ಸಣ್ಣಪುಟ್ಟ ಅಪಘಾತಗಳಲ್ಲಿ ಗಾಯಗೊಂಡಿದ್ದಾರೆ, ಹಲವೊಮ್ಮೆ ತಮ್ಮ ಪ್ರಾಣವನ್ನೇ ತೆತ್ತಿದ್ದಾರೆ. ಆದರೂ ಅವರಿಗೆಂದು ಇನ್ಶೂರೆನ್ಸ್ ಮಾತು ಬದಿಗಿರಲಿ, ಕನಿಷ್ಠ ಮೂಲಭೂತ ಭದ್ರತೆಯನ್ನೂ ಕೂಡಾ ನಮ್ಮ ನಿರ್ಮಾಪಕರು ಒದಗಿಸುವುದಿಲ್ಲ. ಬದಲಾಗಿ ರಮೇಶ್ ತರಹದವರು "ಅವರು ಸಾಯಲು ತಯಾರಾಗಿಯೇ ಬಂದಿರುವವರು..." ಎಂಬ ಅಮಾನವೀಯ ನಿಲುವನ್ನು ಪ್ರದರ್ಶಿಸುತ್ತಾರೆ.

ನಮ್ಮ ಚಿತ್ರರಂಗದಲ್ಲಿ ಕಲಾವಿದರ ಜೀವಕ್ಕೆ ಬೆಲೆಯಾಗಲಿ; ಕಾಳಜಿಯಾಗಲಿ ಇಲ್ಲವೇ ಇಲ್ಲ ಎಂಬುದು ಸ್ಪಷ್ಟವಾಗುತ್ತದಲ್ಲವೇ? ಇಲ್ಲಿನ ಜನ ಬೆಲೆ ನೀಡುವುದು ನಾಯಕನ ಕಾಲ್‌ಶೀಟ್‌ಗೆ ಮಾತ್ರ!

ಒಲವು ಸೆಳೆದ ಹಾದಿ

'ಒಲವೇ ವಿಸ್ಮಯ' ಎಂಬ ಹೊಸ ಚಿತ್ರ ಮೊನ್ನೆ ಸೆಟ್ಟೇರಿತು. ಕಲಾಭಯಂಕರ ಖ್ಯಾತಿಯ ಎಸ್. ನಾರಾಯಣ್ ಅವರ ಶಿಷ್ಯ ನಾಗೇಶ್ ಈ ಚಿತ್ರದ ಮುಖಾಂತರ ಸ್ವತಂತ್ರ ನಿರ್ದೇಶಕರಾಗಿದ್ದಾರೆ. ಆದರೆ ನಾರಾಯಣ್‌ಗೂ ನಾಗೇಶ್‌ಗೂ ಭೂಮಿಯಾಕಾಶದಷ್ಟು ವ್ಯತ್ಯಾಸ. ನಾಗೇಶ್ ಮಾತು ಕಡಿಮೆ; ದುಡಿಮೆ ಹೆಚ್ಚು ಎಂಬ ಮಂತ್ರ ನಂಬಿದವರು.

ವಿಶೇಷವೆಂದರೆ ತಾನೇ ನಿರ್ದೇಶಿಸಿದ 'ಒಲವು ಸೆಳೆದ ಹಾದಿಯಲ್ಲಿ...' ಎಂಬ ಅರ್ಧ ಗಂಟೆಯ ಕಿರುಚಿತ್ರವನ್ನೇ ವಿಸ್ತರಿಸಿ ನಾಗೇಶ್ ಬೆಳ್ಳಿಪರದೆಯ ಮೇಲೆ ತರಲು ಹೊರಟಿದ್ದಾರೆ. ಅದೇನೇ ಇದ್ದರೂ ನಾಗೇಶ್ ಹೊಸ ನಾಯಕ-ನಾಯಕಿಯರೊಂದಿಗೆ ಹೊಸದನ್ನು ಮಾಡಲು ಹೊರಟಿದ್ದಾರೆ.

ಕೀರ್ತಿ ಪುತ್ರ- ಧರ್ಮ

ತನ್ನ ವೃತ್ತಿಜೀವನವನ್ನು ಬರೀ ರೇಪ್‌ಸೀನ್‌ಗಳಲ್ಲೇ ಕಳೆದ ಖಳನಟ ಕೀರ್ತಿರಾಜ್ ಮುಖದಲ್ಲಿ ಮೊದಲಬಾರಿಗೆ ನಗು ಕಾಣಿಸುತ್ತಿದೆ. ಇದಕ್ಕೆ ಕಾರಣ ಆತನ ಮಗ ಧರ್ಮ ಈಗ ನಾಯಕನಟನಾಗಿ 'ಒಲವೇ ವಿಸ್ಮಯ' ಚಿತ್ರದಲ್ಲಿ ಕಾಣಿಸುತ್ತಿರುವುದು.

'ನವಗ್ರಹ' ಚಿತ್ರದಲ್ಲಿ ಒಂದು ಗ್ರಹವಾಗಿ ಕಾಣಿಸಿಕೊಂಡು ಚಿತ್ರರಂಗಕ್ಕೆ ಪರಿಚಯಿಸಲ್ಪಟ್ಟ ಧರ್ಮನ ಗ್ರಹಗತಿಯೂ ತನ್ನ ತರವೇ ಆಗುತ್ತದೆಯೇನೋ ಎಂದು ಕೀರ್ತಿರಾಜ್ ಭಯಪಟ್ಟಿದ್ದರು. ಯಾಕೆಂದರೆ ಚಿತ್ರರಂಗದಲ್ಲಿ ಆಗುವ ಅನುಭವ ಮತ್ತು ನೋವುಗಳು ಅವರಿಗೆ ಚೆನ್ನಾಗಿ ಗೊತ್ತಿದ್ದವು. ಆದರೆ ಧರ್ಮ ಎರಡನೇ ಚಿತ್ರಕ್ಕೆ ನಾಯಕನಟನಾಗಿ ಬಡ್ತಿ ಪಡೆದಿದ್ದಾರೆ. ಆ ಕಾರಣಕ್ಕೆ ಕೀರ್ತಿಯ ಸಂತೋಷಕ್ಕೆ ಪಾರವೇ ಇಲ್ಲದಂತಾಗಿದೆ. ದೇವರಾಜ್-ಪ್ರಜ್ವಲ್ ಜೋಡಿಯಂತೆ ಈ ಅಪ್ಪ-ಮಗನ ಜೋಡಿಯೂ ಚಿತ್ರರಂಗದಲ್ಲಿ ಗಟ್ಟಿಯಾಗಿ ತಳವೂರಲಿ.



ರೂಮರ್‌ಗಳ ತೆಕ್ಕೆಗೆ ರಮ್ಯ

ಮೊನ್ನೆ ಮೊನ್ನೆ ನಟಿ ರಮ್ಯಾ ಅಪಘಾತದಲ್ಲಿ ಗಾಯಗೊಂಡಿದ್ದಾಳೆ ಎಂಬ ಸುದ್ದಿ ಹಬ್ಬಿತ್ತು. ಹಾಗೆಯೇ ಇತ್ತೀಚೆಗೆ ಆಕೆ ನಾಯಕ ನಟ ಧ್ಯಾನ್‌ನೊಂದಿಗೆ ಗುಟ್ಟಾಗಿ ಮದುವೆಯಾಗಿದ್ದಾಳೆ ಎಂಬ ಮತ್ತೊಂದು ಗಾಳಿ ಸುದ್ದಿ ಗಾಂಧಿನಗರದಲ್ಲಿ ಹಬ್ಬಿತ್ತು. ತಕ್ಷಣ ಇಬ್ಬರೂ ಆ ಗಾಳಿ ಸುದ್ದಿಯನ್ನು ಬಲವಾಗಿ ತಿರಸ್ಕರಿಸಿದರೆನ್ನಿ....

ಆದರೆ ಒಂದು ವಿಶೇಷವೆಂದರೆ ಇತ್ತೀಚೆಗೆ ರಮ್ಯಾ ಸಿನಿಮಾಗಳಲ್ಲಿ ಕಾಣಿಸುವುದಕ್ಕಿಂತ ಈ ತರಹದ ಗಾಸಿಪ್, ರೂಮರ್ ಕಾಲಂಗಳಲ್ಲೇ ಕಾಣಿಸಿಕೊಳ್ಳುತ್ತಿರುವುದು ಹೆಚ್ಚಾಗುತ್ತಿದೆ. ಬಹುಶಃ ಇಷ್ಟೊಂದು ಸಂಖ್ಯೆಯಲ್ಲಿ ಬೇರಾವ ಕನ್ನಡದ ನಾಯಕಿಯರು ಗಾಸಿಪ್ ಕಾಲಂಗಳಲ್ಲಿ ಕಾಣಿಸಿದ್ದು ಇಲ್ಲವೇನೋ?

ರಮ್ಯಾಳನ್ನೇ ಈ ಗಾಸಿಪ್ ಯಾಕೆ ಕಾಡುತ್ತಿದೆ? ಎಂಬುದೇ ಎಲ್ಲರ ಪ್ರಶ್ನೆ: ಇದು ಪ್ರಚಾರದಲ್ಲಿರುವ ಒಂದು ತಂತ್ರ ಎಂದು ಗಾಂಧಿನಗರಿಗಳ ಅಂಬೋಣ. ಆದರೆ ರಮ್ಯಾ ಮಾತ್ರ ಇಂತಹ ಪ್ರಚಾರಕ್ಕೆ ಹಾತೊರೆಯುವ ಹುಡುಗಿಯಂತೂ ಖಂಡಿತ ಅಲ್ಲ. ಹೇಳಿಕೇಳಿ ಆಕೆ ದಿಟ್ಟ ಮತ್ತು ನೇರಮಾತಿಗೆ ಹೆಸರಾದವಳು ಎಂಬುದನ್ನು ಈ ಗಾಂಧಿನಗರದ ಜನ ಮರೆತಂತಿದೆ. ಆದರೂ ತಿಂಗಳಿಗೊಮ್ಮೆ ಮದುವೆ, ಅಪಘಾತ, ವಿವಾದ ... ಹೀಗೆ ಇನ್ನೇನೋ ಕಾರಣಗಳಿಗೆ ರಮ್ಯಾ ಸುದ್ದಿಯಲ್ಲಿರುತ್ತಾಳೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...